ಸಾಹಿತ್ಯ ದಾಸೋಹ - ೧೮೪

ಸಮನ್ವಯ ಸಮಿತಿ

ಕನ್ನಡವೇ ಸತ್ಯ

ನೋಡಿಯೋ ಸಾಹಿತ್ಯ ದಾಸೋಹ



ದಾಸೋಹದಲ್ಲಿ ಸದಸ್ಯರು ಪ್ರಸ್ತುತಿ ಪಡಿಸಿದ ಮುದ್ರಣ ರೂಪ



ಶನಿವಾರ, ೨೮ ನವೆಂಬರ್ ೨೦೨೦

ಮುಖಪುಟ - ಗುಹಾ

ಸಾಹಿತ್ಯ ದಾಸೋಹ - 184

ವರದಿ

ದಿನಾಂಕ ೨೮.೧೧೨೦೨೦ ಶನಿವಾರ ಸಂಜೆ ೪ ಗಂಟೆಗೆ ಕಾರ್ಯಕ್ರಮ ಆರಂಭವಾಯ್ತು.
ದಾಸೋಹದ ಸಂಚಾಲಕರಾದ ಶ್ರೀ ಕೆ.ಎನ್.ಮಹಾಬಲ ರವರು ಸ್ವಾಗತಿಸಿ ,ಕಾರ್ಯಕ್ರಮದ ಅಧ್ಯಕ್ಷರನ್ನು ಪರಿಚಯಿಸಿದರು.
ದಾಸೋಹದ ಅಧ್ಯಕ್ಷತೆಯನ್ನು ಲೇಖಕರೂ " ಮೆಕಾನ್" ನ ನಿವೃತ್ತ ಪ್ರಧಾನ ವ್ಯವಸ್ಥಾಪಕರೂ ಆದ ಶ್ರೀ ಜಿ.ವಿ.ಅರುಣ ರವರು ವಹಿಸಿದ್ದರು.
ದಾಸೋಹ ದ ಪ್ರಧಾನಸಂಚಾಲಕರಾದ ಶ್ರೀ ಬೆಂ.ಶ್ರೀ ರವೀಂದ್ರರವರು ಕಾರ್ಯಕ್ರಮವನ್ನು ನಿರ್ವಹಿಸಿದರು.
ಸುಮಾರು ೨೪ ಜನ ದಾಸೋಹಿಗಳು ನಗೆ ಬರಹ,ಕವನ,ಪ್ರಬಂಧ,ಕತೆ,ಲೇಖನ ಹೀಗೆ ವಿಭಿನ್ನ ಪ್ರಸ್ತುತಿ ಗಳನ್ನು ಆರು ನಿಮಿಷಗಳ ಸಮಯದ ಮಿತಿಯಲ್ಲಿ ಮಂಡಿಸಿದರು.
ಕಾರ್ಯಕ್ರಮದಲ್ಲಿ ' ಸಾಹಿತ್ಯ ದಾಸೋಹ' ೧೮೩ ರ ಪಿ.ಡಿ.ಎಫ್ ಪ್ರತಿ ಬಿಡುಗಡೆ ಮಾಡಲಾಯಿತು.
ಸುಮಾರು ೪೬ ಜನ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.ಕಾರ್ಯಕ್ರಮದ ಕೊನೆಯಲ್ಲಿ ಅಧ್ಯಕ್ಷರು ಎಲ್ಲರ ಪ್ರಸ್ತುತಿಗಳ ಉತ್ತಮ ಅಂಶದ ಬಗ್ಗೆ ಮೆಚ್ಚುಗೆ ಮತ್ತು ಪ್ರೋತ್ಸಾಹದ ನುಡಿಗಳನ್ನಾಡಿ,ತಮ್ಮ ಒಂದು ಲೇಖನ ವಾಚಿಸಿದರು.
ಶ್ರೀಮತಿ ರಾಧಿಕಾ ಗುಜ್ಜರ್ ರವರು ವಂದನಾರ್ಪಣೆ ಸಲ್ಲಿಸಿದರು
ಶ್ರೀ ಎಚ್ ಎಲ್ ಗುರುಪ್ರಸಾದ್ ಮತ್ತು ಶ್ರೀ ಗುರುರಾಜ ಶಾಸ್ತ್ರಿಯವರು ಕಾರ್ಯಕ್ರಮದ ತಾಂತ್ರಿಕ ನಿರ್ವಹಣೆ ಮಾಡಿದರು.

-ಹುವಾಶ್ರೀ
ಸಂಚಾಲಕ ಸಮಿತಿಯ ಪರವಾಗಿ

ಪರಿವಿಡಿ

1	ರಾಧಿಕಾ ವಿ ಗುಜ್ಜರ್	ಅಂತರಂಗದೊಳಗಿನ ಅಲೆಮಾರಿ
2	ನಾಗರತ್ನಾ ಚಂದ್ರಶೇಖರ್	ಬುಕ್ಕಪ್ಪನ ಮತ್ತು ಪತ್ನಿ ಶಾಲು
3	ಜಿ ವಿ ನಿರ್ಮಲ	ಜೀವನ ಕಲೆ
4	ಡಿ ಬಿ ಪ್ರಾಣೇಶರಾವ್	ಜೀವಿತ ಪ್ರಮಾಣ ಪತ್ರ
5	ಮುರಳಿ ಪತ್ತಂಗಿ	ಕೊರೋನಾ ಪಾಸಿಟಿವ್
6	ರೇಣುಕಾ ದೇಸಾಯಿ	ನನ್ನಿಷ್ಟದ ಬರಹಗಾರ
7	ಮನೋಹರ ಗೋಖಲೆ	**ಕನ್ನಡ ಬಳಗ – ವಿ.ಸೀ.ಗ್ರಂಥಾಲಯ**
8	ನಾಗೇಶ ವೈದ್ಯ	ಮಕ್ಕಳು ಕಲಿಸಿದ ಪಾಠ; ಮಕ್ಕಳ ಲಂಕಾದಹನ
9	ರತ್ನಾ ಮೂರ್ತಿ	ಆ ಪ್ರಶ್ನೆ
10	ಶ್ರೀಧರ ಬಾಣಾವರ	ಮಹಿಳೆಯರಿಗಾಗಿ ಉಳಿತಾಯ ಹಾಗೂ ಹೂಡಿಕೆ ಸಲಹೆಗಳು
11	ವೆಂಕಟೇಶ ಕೆ ಆರ್(ಮನು)	ಆಧುನಿಕ ರೈತ - ಹೀಗೊಂದು ಸಂವಾದ
12	ವಿಠ್ಠಲ ವಿಜೇರಿ	ಮಾರ್ಚ್ 31
13	ಎಂ ಎಸ್ ನರಸಿಂಹಮೂರ್ತಿ	**ಬಾಲ್ಯದ ದಿನಗಳ ನೆನಪು**
14	ಗಣಪತಿ ಹೆಗಡೆ	ರವಿಚಂದ್ರ
15	ಮಾಲತಿ ಶ್ರೀನಿವಾಸನ್	ಸಪ್ತಸ್ವರ ; ಅನುಭೂತಿ (ಕವನಗಳು)
16	ಎನ್ ಶಂಕರರಾವ್	ಮೋಹಕ ಮುರಳಿ; ನೇಸರ
17	ಶ್ರವಣಕುಮಾರಿ	ಸೀತಕ್ಕನ ಗರ್ಭ ದರ್ಬಾರ್
18	ಡಾ.ಶ್ರೀಲಕ್ಷ್ಮೀ ಶ್ರೀನಿವಾಸನ್	ದಿವ್ಯ ಘಳಿಗೆ
19	ಎಂಜಿ ವೆಂಕಟೇಶಮೂರ್ತಿ	ಸಾಹಿತ್ಯ ದಾಸೋಹಗಳಿಗೊಂದು ಕರೆ
20	ಅನ್ನಪೂರ್ಣ ಸೀತಾರಾಮು.	ಉಪಕಾರವೋ ಬಂಧನವೋ
21	ಅನಂತರಾಮು	ಬಾಲ್ಯದ ನೆನಪುಗಳು

22	ಬೆಂಶ್ರೀ ರವೀಂದ್ರ	ಜೋಪಡಿಯಿಂದೆದ್ದ ಸುಂಟರಗಾಳಿ
23	ಗುಹಾ	ಬೇಂದ್ರೆಯವರ ಕಾವ್ಯಭಾಷೆಯಲ್ಲಿ ಭಾರತೀಯ ಭಾಷೆಗಳಲ್ಲಿನ ಪದಗಳ ಬಳಕೆ - ಒಂದು ಕಿರುನೋಟ
24	ಮಹಾಬಲ ಕೆ ಎನ್	ಪ್ರಕಟವಾದುದನ್ನು ಪ್ರಕಟಗೊಳಿಸುವ ಸಂಕಟ
25	ಜಿ. ವಿ. ಅರುಣ	ಲೇಟಪ್ಪನ ಸುಪ್ರಭಾತವು.

26	ಜಿ. ವಿ. ಅರುಣ	ಅಧ್ಯಕ್ಷರ ಸಮಾರೋಪ ಭಾಷಣ
27	ಜಿ. ವಿ. ಅರುಣ	**ಸಾಹಿತ್ಯ ದಾಸೋಹ ೧೮೪ - ಪ್ರಸ್ತುತಿಗಳ ಅಂಕಿ ಅಂಶಗಳ ವಿಶ್ಲೇಷಣೆ**
28		**ಕಾರ್ಯಕ್ರಮದ ಬಗೆಗೆ ಸದಸ್ಯರ ಅನಿಸಿಕೆಗಳು**

ಅಂತರಂಗದೊಳಗಿನ ಅಲೆಮಾರಿ - ರಾಧಿಕಾ

ನಿತ್ಯ ಬದುಕ ಅರಸಿ ಹೊರಟವಳು,
ಮಿಥ್ಯ ಭರವಸೆಗಳ ನಚ್ಚಿ ಕೂರದೇ,
ಹೆಜ್ಜೆಯೋ...
ಮಾರು ದೂರವೋ...
ಕಣ್ಣಳತೆಯ ಮೀರಿಯೋ ...
ಸಾಗುತ್ತಿದ್ದೇನೆ...

ಬೇರೂರಿದ ಹೆಮ್ಮರದಂತ ಆಸೆಗಳಿಗೆ,
ಬಿಗಿದು ದಾರವ ಉಯ್ಯಾಲೆ ಜೀಕಿದರಾಯ್ತು,
ಹಾರಿ ಹೊರಟ ಕನಸುಗಳ ಪಟಕ್ಕೆ,
ಬಾಲಂಗೋಚಿ ಅಂಟಿಸಿ ಸೂತ್ರ ಬಿಗಿದರಾಯ್ತು...

ಕೂಡಿ ಹಾಕಲು ಮನೆಯೆಂಬ ಗೊಡವೆಯಿಲ್ಲ,
ದಾನ ಮಾಡಲು ತೆರಿಗೆ ಕಟ್ಟುವ ಪ್ರಜೆಯಿಲ್ಲ,
ಕಳೆದುಕೊಳ್ಳಲು ಬಹುಮೂಲ್ಯ ಸಿರಿಯಿಲ್ಲ,
ಪಡೆದುಕೊಳ್ಳಲು ಬಾಹ್ಯಗಳು ಸೆಳೆದಿಲ್ಲ...

ಅವರಿವರ ಹೋಲಿಸಿಕೊಳ್ಳಲು ಮನಸೊಪ್ಪದು,
ಅರಿವುಗಳ ಹೆಪ್ಪಿಟ್ಟು ಕಡೆಯುವಾಸೆ,
ಅಂತರಂಗದಿ ಬೇಡಗಳ ಶೇಖರಿಸದೇ,
ಅಂತರ್ಗತ ಅಮೃತವ ಹಂಚುವಾಸೆ...

ಯಾವ ಬಣ್ಣವನ್ನೂ ಮೆತ್ತಿಸಿಕೊಳ್ಳದೇ,
ಯಾವ ಬಣದೊಂದಿಗೂ ಸೇರಿಕೊಳ್ಳದೇ,
ನಾನು ನಾನಾಗಿಯೇ ಸುಸ್ಥಿರಗೊಂಡು,
ನನ್ನೊಳಗಣ ಸ್ವಂತಿಕೆಯ ಪೋಷಿಸುವಾಸೆ..

ಸಾಹಿತಿ ಬುಕ್ಕಪ್ಪ ಮತ್ತು ಪತ್ನಿ ಶಾಲು (ನಗೆ ಲೇಖನ) - ನಾಗರತ್ನ, ಚಂದ್ರಶೇಖರ

ಕಟ್ಟೆಚ್ಚರ ಕನ್ನಡಸಂಘದವರು ಕನ್ನಡ ರಾಜ್ಯೋತ್ಸವಕ್ಕೆ ಹೆಸರಾಂತ ಸಾಹಿತಿಯೊಬ್ಬರನ್ನು ಮುಖ್ಯ ಅತಿಥಿಯಾಗಿ ಆಹ್ವಾನಿಸಬೇಕೆಂದು ತೀರ್ಮಾನಿಸಿದ್ದರು. ಈಗಾಗಲೇ ಕರ್ನಾಟಕದ ಹೆಚ್ಚು ಕಡಿಮ ಎಲ್ಲಾ ಖ್ಯಾತನಾಮರೂ ಬಂದು ಹೋಗಿದ್ದರು. ಇದುವರೆಗೂ ಯಾರ ಕಣ್ಣಿಗೂ ಬೀಳದ ಎಲೆಮರೆಯ ಕಾಯಂತಿರುವವರನ್ನೇ ಕರೆಸಬೇಕೆಂದು ಸಿದ್ದರಾಜು ಪಟ್ಟು ಹಿಡಿದಿದ್ದ. ಆಗ ಅವನಿಗೆ ನೆನಪಾದದ್ದೇ ಬುಕ್ಕಪ್ಪ ಮಾಸ್ಟರು. ಹೈಸ್ಕೂಲಿನಲ್ಲಿ ಕನ್ನಡ ಪಾಠ ಅವರಿಂದ ಕಲಿತ ಮೇಲೇ ಅವನು ಕನ್ನಡದ ಕಟ್ಟಾಭಿಮಾನಿಯಾದದ್ದು. ಹಲವಾರು ವರ್ಷಗಳಲ್ಲಿ ಕಟ್ಟೆಚ್ಚರ ಕನ್ನಡಸಂಘವನ್ನು ಕಟ್ಟಿ, ಬೆಳಸಿ ಅದರ ಕಾರ್ಯದರ್ಶಿಯಾದದ್ದು. ಗುರು ಕಾಣಿಕೆ ಕೊಡಲು ಈಗ ಸರಿಯಾದ ಸಮಯ ಎನಿಸಿತು ಅವನಿಗೆ. ಜೊತೆಗೆ ಊರಿನವರೆಂಬ ಅಭಿಮಾನ. ಸದ್ಯ ಅವರು ನಿವೃತ್ತರಾದ ಮೇಲೆ ಬೆಂಗಳೂರಿನ ಗೋರಿಪಾಳ್ಯದಲ್ಲೇ ಇದ್ದಾರೆ ಎಂದು ತಿಳಿದುಕೊಂಡ. ಬುಕ್ಕಪ್ಪ ಮಾಸ್ಟರ ಕಾದಂಬರಿಯೊಂದು ಚಲನಚಿತ್ರವಾಗಿಯೂ ಹೆಸರು ಮಾಡಿತ್ತು. ಅನೇಕ ಚಲನಚಿತ್ರಗಳಿಗೆ ಸಂಭಾಷಣೆ ಬರೆಯುವ ಬುಕ್ಕಪ್ಪನವರ ಬಗ್ಗೆ ಸಿದ್ದರಾಜುವಿನ ಗೆಳೆಯರಿಗೆ ತುಂಬಾ ಅಭಿಮಾನವೂ ಇತ್ತು.

ಗೋರಿಪಾಳ್ಯದ ಅನೇಕ ಸುಂದರ ಮನೆಗಳನ್ನು ಜಾಲಾಡಿ ಅವರ ವಿಳಾಸ ಪತ್ತೆಯಾಗದೆ ಪೆಚ್ಚು ಮೋರೆ ಹಾಕಿಕೊಂಡು ನಿಂತಿದ್ದ ಸಿದ್ದರಾಜು ಮತ್ತು ಗಳೆಯರ ಬಳಗಕ್ಕೆ ದಾರಿಹೋಕರೊಬ್ಬರು "೨೨ನೇ ಕ್ರಾಸಿನಲ್ಲಿ ಡಾ.ಬೂಕಪ್ಪ ಅಂತ ಇದ್ದಾರೆ, ಆದರೆ ಅವರು ಪ್ರಾಕ್ಟಿಸ್ ಮಾಡ್ತಾ ಇಲ್ಲಾಂತ ಕಾಣುತ್ತೆ ಎಂದರು. ಅಷ್ಟು ಮಾಹಿತಿ ಸಾಕಿತ್ತು. ಡಾ.ಬುಕ್ಕಪ್ಪ ಎನ್ನುವ ಬೋರ್ಡ ನೇತಾಡುತಿದ್ದ ಮನೆ ಮುಂದೆ ಹಾಜರಾಗಿದ್ದರು. ಅದೊಂದು ಸಾಧಾರಣ ಹೆಂಚಿನ ಮನೆ.

ಸಾಹಿತಿ ಬುಕ್ಕಪ್ಪ ಮೇಷ್ಟ್ರ ಕಾದಂಬರಿಯಲ್ಲಿ ಬರುವ ವರ್ಣನೆಗಳಿಗೂ ಇಲ್ಲಿನ ವಾತಾವರಣಕ್ಕೂ ಯಾವುದೇ ಹೋಲಿಕೆ ಸಿಗುತ್ತಿರಲಿಲ್ಲ. ಯಾರಿಗೂ ಇದುವರೆಗೂ ಇಂಜೆಕ್ಷನ್, ಔಷಧಿ ಕೊಡದೆ ಇರುವ ಈ ನಕಲಿ ವೈದ್ಯರನ್ನು ಒಮ್ಮೆ ನೋಡೇ ಬಿಡುವ ಎಂದು ಗೇಟು ತಗದು ಒಳಗೆ ನುಗ್ಗೇ ಬಿಟ್ಟರು.

ಯಾವುದೋ ಕಥಾನಾಯಕಿಯ ಸುಂದರ ಮುಖದ ಕಲ್ಪನೆಯಿಂದಲೇ ಬಾಗಿಲಲ್ಲಿ ನಿಂತವರಿಗೆ ಬಾಗಿಲು ತೆಗೆದದ್ದು ಮೊಂಡು ಮೂಗಿನ ಉಬ್ಬು ಹಲ್ಲಿನ, ಸಾದಾ ಮೃಗಪ್ಪಿನ ಚೀಟಿ ಸೀರೆಯ ಮಧ್ಯ ವಯಸ್ಸಿನ ಗೃಹಿಣಿ. ಸಿದ್ದರಾಜುವಿಗೆ ಈ ಮುಖವನ್ನು ಊರಲ್ಲಿ ಅನೇಕ ವರ್ಷಗಳ ಹಿಂದ ನೋಡಿದ್ದ ನೆನಪು ಅಲ್ಪ ಸ್ವಲ್ಪ ಇದ್ದಿದ್ದರಿಂದ ಧೈರ್ಯವಾಗಿ "ಬುಕ್ಕಪ್ಪ ಮೇಷ್ಟ್ರು ಇದ್ದಾರಮ್ಮ" ಎಂದ.

"ಅವರು ರೇಷನ್ ಅಂಗಡಿಯಲ್ಲಿ ಕ್ಯೂ ನಿಂತಿದ್ದಾರೆ, ಎಷ್ಟು ಸಮಯ ಹಿಡಿಯುತ್ತೋ ಗೊತ್ತಿಲ್ಲ, ಏನಾಗಬೇಕಿತ್ತು ಹೇಳಿ?"

"ನಾನೂ ಕೂಡ ಅವರೂರಿನವನೇ, ಈ ಸಾರಿ ಕನ್ನಡ ರಾಜ್ಯೋತ್ಸವಕ್ಕೆ ಮೇಷ್ಟ್ರನ್ನ ಆಹ್ವಾನಿಸೋಣ ಅಂತ ಬಂದಿದ್ದೇವೆ" ಎಂದ ಸಿದ್ದರಾಜು.

"ಹೌದಾ, ತುಂಬಾ ಸಂತೋಷ, ಒಳಗೆ ಬನ್ನಿ, ಮಾತಾಡೋಣ, ಅದಕ್ಕೇನಂತೆ,"

ಬಾಗಿಲು ಪೂರ್ತಿ ತಗೆದದ್ದೇ ತಡ, ಸಿದ್ದರಾಜು ಅಂಡ್ ಕಂಪನಿ ಒಳಗೆ ಧಡಕ್ಕನೆ ನುಗ್ಗಿ ಸುತ್ತಾಟದ ಸುಸ್ತನ್ನೆಲ್ಲಾ ಕಳೆದುಕೊಳ್ಳಲು ಅಲ್ಲಿದ್ದ ಹಳೇ ಮಂಚ ಕಮ್ ದಿವಾನದ ಮೇಲೆ ಕೂತೇ ಬಿಟ್ಟರು.

"ಏ, ಸಿದ್ದರಾಜು, ಡಾ.ಬುಕ್ಕಪ್ಪ ಅಂತ ಬೋರ್ಡಿತ್ತಲ್ಲ, ಇವ್ರನಾ ಆ ಸಾಹಿತಿ" ಅಂತ ಕೇಳಿ ಮಲ್ಲಗೆ ಪಿಸುಗುಟ್ಟಿದ ಕೇಶವ.

"ಲೋ, ನೋಡಿದ್ರೆ ಗೊತ್ತಾಗೊಲ್ವೇನೋ, ಮನೆಯ ಕಿಟಕಿ, ಬಾಗಿಲು, ನಾವು ಕೂತಿರೋ ಮಂಚ ಎಲ್ಲಾ ಶಾಲುಗಳಿಂದ ಅಲಂಕೃತವಾಗಿದೆಯಲ್ಲ, ಇವೆಲ್ಲಾ ಸಾಹಿತಿಗಳ ಸನ್ಮಾನದಲ್ಲಿ ಸಿಕ್ಕ ಶಾಲುಗಳಲ್ಲದೆ ಮತ್ತೇನೂಂತೀಯಾ!" ರಾಘವ, ಕೇಶವನ ಕಿವಿಯಲ್ಲಿ ಗಟ್ಟಿಯಾಗೇ ಹೇಳಿದ. ಹಜಾರಕ್ಕೆ ಸೇರಿದಂತಿದ್ದ ಬೆಡ್ ರೂಮಿನ ಅರ್ಧ ತೆರೆದ ಬಾಗಿಲಿಂದ ಮೂರು ಮುದ್ದಾದ ತರುಣಿಯರ ಮುಖಗಳು ಇಣುಕಿ ನೋಡುತ್ತಿದ್ದವು. ಆ ಕೋಣೆಯಲ್ಲಿ ಹಾಸಿಗೆ, ಬೆಡ್ ಶೀಟ್, ಹೊದಿಕೆಗಳೂ ಶಾಲುಗಳೇ ಆಗಿದ್ದರೆ ಆಶ್ಚರ್ಯವಿಲ್ಲ ಎಂದುಕೊಂಡ ಕೇಶವ. ಅಷ್ಟರಲ್ಲಿ ನೀರಿನ ತಂಬಿಗೆ, ಲೋಟಗಳನ್ನು ಹಿಡಿದು ಆಕೆ ಹೊರಗೆ ಬಂದರು.

ಬಿಸಿಲಲ್ಲಿ ಬಂದಿದ್ದೀರಿ, ನೀರಾದರೂ ಕುಡಿಯಿರಿ, ನಮ್ಮ ಯಜಮಾನರು ಬಂದ ಮೇಲೆ ಸಕ್ಕರೆ ತಂದರೆ ಟೀನೂ, ಕಾಫೀನೂ ಮಾಡಬಹುದು, ಎಂದರು.

"ಮೇಷ್ಟ್ರು ಗೋರಿಪಾಳ್ಯದಲ್ಲಿದ್ದಾರೆ ಅಂತ ಗೊತ್ತಾಯ್ತು, ಹಾಗೇ ಹುಡುಕೋಂತ ಬಂದ್ವಿ, ಆದ್ರೆ ಬೋರ್ಡ ನೋಡಿ ಡಾ.ಬೂಕಪ್ಪ ಅಂತ ಇತ್ತಲ್ಲ, ಸ್ವಲ್ಪ ಅನುಮಾನ ಬಂತು," ಸಿದ್ದರಾಜು ಮಲ್ಲಗೆ ಮಾತು ಪ್ರಾರಂಭಿಸಿಯೇ ಬಿಟ್ಟ.

ಹೌದಪ್ಪ, ಎಂಬಿಬಿಸ್ ಡಾಕ್ಟ್ರು ಅಂತ ತುಂಬಾ ಜನ ಔಷಧಿಗೇಂತ ಬಾಗಿಲು ತಟ್ತಾನೇ ಇರ್ತಾರೆ. ಹೋದ ವರ್ಷ ಅದ್ಯಾವುದೋ ಯೂನಿವರ್ಸಿಟಿಯವರು ಡಾಕ್ಟರೇಟ್ ಕೊಟ್ಟರು, ದುಡ್ಡಿಲ್ಲ, ಕಾಸಿಲ್ಲ, ಔಷಧಿ, ಇಂಜೆಕ್ಷನ್ ರಗಳೆ ಇಲ್ಲ. ಇರ್ಲಿ ಬಿಡು ಅಂತ ಇವರೂ ಗೌರವದಿಂದಲೇ ಅದನ್ನು ತಗೆದುಕೊಂಡು ಹೆಸರಿನ ಮುಂದೆ ಅಲ್ಲ, ಹಿಂದೆ ಹಾಕ್ಕೊಂಡ್ರು ಅಷ್ಟೆ, ಆಕೆ ಸಮಜಾಯಿಶಿ ಕೊಟ್ಟರು.

ಅರ್ಥ ಆಯಿತು ಬಿಡಿ, ನಮ್ಮ ಮೇಷ್ಟ್ರಿಗೆ ಮೊದ್ಲಿಂದ ಡಾಕ್ಟರ್ ಆಗ್ಬೇಕಂತ ಆಸೆ ಇತ್ತಂತ. ನಾನು ಹೈಸ್ಕೂಲ್‌ನಲ್ಲಿದ್ದಾಗ ಆಗಾಗ ಹೇಳ್ತಾ ಇದ್ರು. ಒಳ್ಳೇ ನಂಬರ್ ತೆಗೀರಿ, ಕರೆದು ಸೀಟು ಕೊಡ್ತಾರೆ ಅಂತ. ನಂಬರು, ಹಣ ಎರಡೂ ಇಲ್ಲದ ಹಳ್ಳಿ ಹುಡುಗನಿಗೆ ಕೊನೆಗೆ ಕನಸು ಮಾತ್ರ ಗಟ್ಟಿಯಾಗಿ ಉಳೀತು ಅನ್ನೋರು. ಈಗ ಭಾರಿ ಸಂತೋಷ ಆಗಿರ್ಬೇಕಲ್ಲ ರೀ? ಸಿದ್ದರಾಜುವಿನ ಹಳೇ ನೆನಪುಗಳು ಉಕ್ಕಿ ಹರಿಯಲು ಆಕೆ ಬಿಡಲೇ ಇಲ್ಲ.

ಅಯ್ಯೋ! ಈ ಡಾಕ್ಟರ್ ಗಿರಿಯಿಂದ ಹೊಟ್ಟೆ, ಬಟ್ಟೆ ತುಂಬುತ್ತೇನಪ್ಪ? ರೋಗಿ ಇರಲಿ ಮನೆಯವರಿಗೂ ಔಷಧಿ ಬರೆದು ಕೊಡಲಾಗದ ಈ ಡಾಕ್ಟರ್ ಗಿರಿಯ ಬಿರುದು, ಬಾವಲಿ ಯಾತಕ್ಕೆ? ಎಂಬಿಬಿಸ್ ಪಾಸ್ ಮಾಡಿ ಡಾಕ್ಟರ್ ಅಂತಾನಾದ್ರೂ ಆಗಿದ್ದಿದ್ರೆ, ಕೊನೆ ಪಕ್ಷ ನಮ್ಮ ಮೂವರು ಹೆಣ್ಣು ಮಕ್ಕಳಿಗೆ ಒಳ್ಳೇ ಗಂಡುಗಳಾದ್ರು ಸಿಗಬಹುದಿತ್ತು! ಸಿದ್ದರಾಜು ಅಂಡ್ ಕಂಪನಿಗೆ ಮೇಷ್ಟ್ರ ಹೆಂಡತಿಯ ಮಾತುಗಳಿಂದ ಮೊದಲಿಗೆ ಷಾಕ್ ಆಯಿತಾದ್ರು, ಅಕೆಯ ಮುಂದುವರಿದ ನುಡಿ ಮುತ್ತುಗಳನ್ನು ಕೇಳುತ್ತಾ, ಕೇಳುತ್ತಾ ಬೆವರೊರಸಿಕೊಳ್ಳುವಂತಾಗಿತ್ತು.

ನೋಡಪ್ಪ, ಸಿದ್ದರಾಜು, ನಿಮ್ಮ ಮೇಷ್ಟು ಸನ್ಮಾನಕ್ಕೆ ಖಂಡಿತಾ ಬರ್ತಾರೆ, ಒಳ್ಳೆ ಭಾಷಣಾನೂ ಮಾಡ್ತಾರೆ, ಯೋಚನೆ ಮಾಡಬೇಡಿ. ಆದರೆ ಅದಕ್ಕೆ ಮೊದಲು ನನ್ನದು ಕೆಲವು ಕಂಡೀಷನ್ ಗಳಿವ, ಅದಕ್ಕೆ ನೀವು ಒಪ್ಪಿಕೊಳ್ಳಬೇಕು?

ಹೇಳೀಮ್ಮಾ?

ಸನ್ಮಾನ ಅಂದ ಮೇಲೆ ಹಾರ, ತುರಾಯಿ, ಶಾಲು, ನೆನಪಿನ ಕಾಣಿಕೆ ಅಂತ ಸಾಕಷ್ಟು ಖರ್ಚು. ಸನ್ಮಾನ ಅಂದ ಮೇಲೆ ಹಾರ, ತುರಾಯಿ, ಶಾಲು, ನೆನಪಿನ ಕಾಣಿಕೆ ಅಂತ ಸಾಕಷ್ಟು ಖರ್ಚು ಮಾಡ್ತೀರ, ಅಲ್ವೆ?

ಹೌದಮ್ಮ, ತುಂಬಾ ಗ್ರಾಂಡ್ ಆಗಿ ಅದನ್ನೆಲ್ಲಾ ಏರ್ಪಾಟು ಮಾಡ್ತೀವಿ, ಕನಿಷ್ಟ ಅಂದರೆ ಒಂದರಡು ಸಾವಿರವಾದರೂ ಅದಕ್ಕಾಗಿ ಖರ್ಚು ಮಾಡ್ತೀವಿ, ನೀವೇನೂ ಯೋಚನೆ ಮಾಡಬೇಡಿ.

ಅದನ್ನೇ ಹೇಳ್ಬೇಕೂಂತಿದ್ದೆ. ಈ ಒಣಗಿ ಹೋಗೋ ಹೂ ಹಾರಗಳು, ಕೆಲಸಕ್ಕೆ ಬಾರದ ಮಮೆಂಟೂಗಳು, ಉಡಲು ಬಾರದ ಶಾಲುಗಳು ಹೊಟ್ಟೆ, ಬಟ್ಟೆ ತುಂಬಿಸಲ್ಲ. ಅದಕ್ಕಾಗಿ ಖರ್ಚು ಮಾಡುವ ಹಣವನ್ನು ಟಿ.ಎ., ಡಿ.ಎ. ಸೇರಿಸಿ ಜೊತೆಯಲ್ಲಿ ಕವರ್ ನಲ್ಲಿ ಹಾಕಿ ಕೊಟ್ಟು ಬಿಡಿ.

ಅಲ್ಲಮ್ಮ! ಇದೆಲ್ಲ ಇಲ್ಲದಿದ್ದರೆ ಸಮಾರಂಭ ಕಳೆ ಕಟ್ಟುವುದಿಲ್ಲ. ಈಗ ಜನ ಅದ್ದೂರಿ, ಆಡಂಬರ ಇಲ್ಲದಿದ್ದರೆ ಮರ್ಯಾದೆನೇ ಸಿಗೋಲ್ಲ ಅಂತಾರೆ?

ಅದೆಲ್ಲಾ ನಿಮ್ಮ ಹೊಟ್ಟೆ ತುಂಬಿದ ರಾಜಕಾರಣಿಗಳನ್ನು ಕರೆದಾಗ ಮಾಡಿಕೊಳ್ಳಿ, ಬೇಡಾಂದವರು ಯಾರು? ನಮ್ಮನೆ ನೋಡಿದ್ರಲ್ಲ? ಎಲ್ಲಾ ಕಿಟಕಿ, ಬಾಗಿಲು, ಹಾಸಿಗೆ, ಹೊದಿಕೆ ಎಲ್ಲಾ ಶಾಲುಮಯವಾಗಿದೆ. ಇದರಿಂದ ಪ್ಯಾಂಟು, ಶರ್ಟು, ಲಂಗ, ರವಿಕೆ ಹೋಲಿಸಲಾಗುತ್ತದೆಯೆ? ಹಾರ, ತುರಾಯಿಗಳಿಂದ ಹೊಟ್ಟೆ ತುಂಬುವುದಿಲ್ಲ. ಇನ್ನು ಆ ಮೊಮೆಂಟೂಗಳೇ, ಇಡಲು ಜಾಗವಿಲ್ಲದೆ ಧೂಳು ತುಂಬಿಕೊಂಡು ಒಲೆ ಉರಿಸಲೂ ಬಾರದಂತಾಗುತ್ತದೆ. ನಿಮ್ಮ ಮೇಷ್ಟರು ನಿವೃತ್ತಿಯ ನಂತರ ಶಾಲಿನ ಅಂಗಡಿ ಇಡೋವಷ್ಟು ಶಾಲುಗಳಿವೆ. ರೇಷನ್ ಅಂಗಡಿ ಗೋಧಿ, ಅಕ್ಕಿ ತಿಂದರೂ ಅವರ ಕಥೆ, ಕಾದಂಬರಿಯ ನಾಯಕ, ನಾಯಕಿಯರು ಪಂಚತಾರಾ ವೈಭವವನ್ನೇ ಅನುಭವಿಸುತ್ತಾರೆ. ನಾವು ಹಂಚಿನ ಮನೆಯಲ್ಲಿ ಸೋರುವ ಸೂರಿನಡಿ ಮಳೆ ಹಾಡು ಹಾಡುತ್ತಿದ್ದರೂ, ಬಂಗಲೆಗಳ ಬದುಕಿನಲ್ಲಿ ಓದುಗರನ್ನು ತೇಲಾಡಿಸುತ್ತಾರೆ. ಜಂಜಾಟದ ಬದುಕಿನಲ್ಲಿ ಸಾಯ್ತಾ, ಸಾಯ್ತಾ ಸಾಹಿತ್ಯ ರಚನೆ ಮಾಡುವ ಸಾಹಿತಿಗೇನು ಬೇಕು ಎಂದು ಸನ್ಮಾನಿಸುವ ಸಂಘಗಳು ಕೇಳಬೇಕು ಅಲ್ಲವ?

ಅಬ್ಬಾ! ಎಂಥ ಕಠೋರ ಸತ್ಯವನ್ನು ಹೀಗೆ ಬಿಚ್ಚಿಡುವ ಎದೆಗಾರಿಕೆ ಎಷ್ಟು ಜನ ಸಾಹಿತಿಗಳ ಹೆಂಡತಿಯರಿಗಿದೆ? ಎನಿಸಿತು ಸಿದ್ದರಾಜನಿಗೆ, ಸಾಹಿತಿಯ ವಾಸ್ತವ ಜೀವನದ ಒಂದು ಪಕ್ಷಿನೋಟ, ಆ ದಿನ ಕಟ್ಟೆಚ್ಚರ ಕನ್ನಡಸಂಘದವರಿಗಾಯಿತು.

ಅಷ್ಟರಲ್ಲಿ ರೇಷನ್ ಬ್ಯಾಗುಗಳನ್ನು ಹೊತ್ತು ಬುಕ್ಕಪ್ಪ ಮಾಸ್ಟರು ಒಳ ಬಂದರು. ಬೆವರಿಳಿಯುತ್ತಿದ್ದ ಮುಖವನ್ನು ಹೆಗಲ ಮೇಲಿದ್ದ ಟವಲಿನಿಂದ ಒರೆಸಿಕೊಳ್ಳುತ್ತಾ ಅಲ್ಲಿದ್ದವರ ಪರಿಚಯ ಮಾಡಿಕೊಂಡರು. ಶಾಲೂ.... ಒಂದು ಚೊಂಬು ತಣ್ಣನೆಯ ನೀರು ತಗೊಂಡು ಬಾ, ಎಂದರು. ಅಂದರೆ ಬುಕ್ಕಪ್ಪಮಾಸ್ಟರರ ಹಂಡತಿಯ ಹೆಸರು ಶಾಲು, ಅರ್ಥಾತ್ ಶಾಲಿನಿ, ಶಾಲು ಕಂಡರೆ ಅವರಿಗೇಕೆ ಅಷ್ಟು ಸಿಡಿಮಿಡಿ ಎಂದು ಸಿದ್ದರಾಜನಿಗೆ ಕೂಡಲೇ ಅರ್ಥವಾಯಿತು, ಸವತಿ ಕಂಡರೆ ಅವರಿಗೇಕೆ ಅಷ್ಟು ಸಿಡಿಮಿಡಿ ಎಂದು ಸಿದ್ದರಾಜನಿಗೆ ಕೂಡಲೇ ಅರ್ಥವಾಯಿತು, ಸವತಿ ಮತ್ಸರ ಎಂದುಕೊಂಡ.

ಸರ್, ನಿಮ್ಮ ಶ್ರೀಮತಿಯವರು ಹೇಳಿದ ಎಲ್ಲಾ ಕಂಡೀಷನ್ ಗಳನ್ನು ನಾವು ಒಪ್ಪಿಕೊಂಡಿದ್ದೇವ, ನೀವು ದಯಮಾಡಿ ನಮ್ಮ ಕಟ್ಟೆಚ್ಚರ ಕನ್ನಡಸಂಘ ಆಚರಿಸುವ ರಾಜ್ಯೋತ್ಸವ ಸಮಾರಂಭಕ್ಕೆ ಮುಖ್ಯ ಅತಿಥಿಯಾಗಿ ಬರಬೇಕು, ಸಿದ್ದರಾಜು ಮೇಷ್ಟರ ಕಾಲಿಗೆ ಬಿದ್ದು ಕೇಳಿಕೊಂಡ. ಹಳೇ ಶಿಷ್ಯನ ನೆನಪು ಬಾರದಿದ್ದರೂ, ಅವನ ಅಭಿಮಾನ ಕಂಡು ಅವರ ಹೃದಯ ತುಂಬಿತು.

ಸರ್, ನಿಮ್ಮ ಖರ್ಚಾಗದೇ ಉಳಿದಿರುವ ಪುಸ್ತಕಗಳಲ್ಲಿ ನೂರು ಪುಸ್ತಕಗಳನ್ನು ನಮ್ಮ ಸಂಘ ಖರೀದಿಸುತ್ತದೆ. ಅದನ್ನು ಇನ್ನು ಮುಂದೆ ನಮ್ಮ ಅತಿಥಿಗಳಾಗಿ ಬರುವವರಿಗೆ ಹಾರ, ತುರಾಯಿಗಳ ಬದಲಿಗೆ ಕೊಡುತ್ತೇವೆ, ಪುಸ್ತಕದ ಹಣ, ನಿಮ್ಮ ಟಿ.ಎ.,ಡಿ.ಎ. ಎಲ್ಲಾ ನಗದು ರೂಪದಲ್ಲಿ ನಿಮಗೆ ಸನ್ಮಾನದ ದಿನ ಫಲ, ತಾಂಬೂಲಗಳೊಂದಿಗೆ ನೀಡುತ್ತೇವೆ.

ಮೇಷ್ಟರಿಗೆ, ಅವರ ಹೆಂಡತಿ, ಮಕ್ಕಳಿಗೆ ಸಿದ್ದರಾಜುವಿನ ಆಶ್ವಾಸನೆಯ ಮಾತುಗಳನ್ನು ಕೇಳಿ ಬೂಕರ್ ಪ್ರಶಸ್ತಿಯೇ ನೀಡಿದಷ್ಟು ಸಂತೋಷವಾಯಿತು.

ಗೋರಿಪಾಳ್ಯದ ಜನರಿಗೆ ಇದುವರೆಗೂ ಪ್ರಾಕ್ಟಿಸ್ ಮಾಡದ ನಕಲಿ ವೈದ್ಯರೆಂಬ ಅನುಮಾನ ಮೂಡಿಸಿದ್ದ ಡಾ.ಬುಕ್ಕಪ್ಪನವರನ್ನು ಸಾಹಿತಿಯಾಗಿ ಪರಿಚಯಿಸಲೇ ಬೇಕು ಎಂದು ನಿರ್ಧರಿಸಿ ಸಿದ್ದರಾಜು ಅಂಡ್ ಕಂಪನಿ ಅವರ ಮನೆಯಿಂದ ಹೊರಬಂದರು. ಮುಂದೆ ಡಾ.ಬುಕ್ಕಪ್ಪ, ಸಾಯಿತಿ ಬುಕ್ಕಪ್ಪ ಅಂತಲೇ ಪ್ರಸಿದ್ಧರಾದದ್ದು ಆಶ್ಚರ್ಯವೇನಿಲ್ಲ. ಡಾಕ್ಟರ್ ಬೋರ್ಡಿನಿಂದ ಜನರ ದಿಕ್ಕು ತಪ್ಪಿಸುತ್ತಿದ್ದ ಬುಕ್ಕಪ್ಪ ಮುಗ್ಧ ಜನರ ಬಾಯಿಂದ ಬರುತ್ತಿದ್ದ ಸಾಯಿತಿ, ಸಾಯಿತಿ ಮಾತು ಕೇಳಿ ಕೊನೆಗೂ ಬುದುಕುಳಿದರು.

ಜೀವನ ಕಲೆ - ನಿರ್ಮಲಾ ಜಿ ವಿ

ಬೆಳಗ್ಗೆ ಎದ್ದಿದ್ದೇ ರಜನಿ ವರಾಂಡಕ್ಕೆ ಬಂದು ಕಿಟಕಿಯ ಬಳಿ ಹಾಲಿನ ಪ್ಯಾಕೆಟ್‌ಗಾಗಿ ತಡಕಾಡಿದಳು. ಪ್ರತಿನಿತ್ಯ ಬೀದಿ ದೀಪದ ಬೆಳಕಿನಲ್ಲಿ, ಇಲ್ಲ ಕಣ್ಣು ಮುಚ್ಚಿಕೊಂಡೇ ನಿಖರವಾಗಿ ಹಾಲಿನ ಪ್ಯಾಕೆಟ್‌ಗೆ ಕೈಹಾಕುವ ಕಲೆ ರಜನಿಗೆ ಕರಗತವಾಗಿತ್ತು. ಆದರೆ ಇಂದು ಅವಳ ಕೈಗೆ ಅಲ್ಲಿ ಏನೂ ಸಿಗಲಿಲ್ಲ. ತಕ್ಷಣ ಅವಳಿಗೆ ಅಂದು ಹಾಲಿನ ಹುಡುಗ ಬರುವುದಿಲ್ಲವೆಂದು ಹೇಳಿದ್ದು ನೆನಪಾಯಿತು. ತನ್ನ ಮರವಿಗೆ ಬೈದುಕೊಂಡಳು. ಆದರೆ ಅಲ್ಲಿ ಅದನ್ನೇ ಯೋಚಿಸುತ್ತಾ ನಿಲ್ಲುವಷ್ಟು ಸಮಯವಿರಲಿಲ್ಲ. ಫ್ರಿಡ್ಜ್‌ನಲ್ಲಿ ಇರುವ ಹಾಲಿನಲ್ಲಿಯೇ ಕೆಲಸ ಸಾಗಿಸಬೇಕೆಂದು ಒಳ ನಡೆದಳು.
ಅಂದು ಆಫೀಸ್‌ನಲ್ಲಿ ಅವಳು ಒಂದು ಮುಖ್ಯವಾದ ಪ್ರೆಸೆಂಟೇಷನ್ ಮಾಡಬೇಕಾಗಿತ್ತು. ಅದು ಅವಳ ಪ್ರಮೋಷನ್ ನಿರ್ಧರಿಸುವ ಘಟ್ಟವೂ ಆಗಿತ್ತು. ಅದಕ್ಕಾಗಿ ರಾತ್ರಿ ಒಂದು ಘಂಟೆಯವರೆಗೆ ಸ್ಲೈಡ್ಸ್ ಮಾಡಿ, ಪ್ರೆಸೆಂಟೇಷನ್ ಫೈಲನ್ನು ಪೆನ್‌ಡ್ರೈವ್‌ನಲ್ಲಿ ತುಂಬಿಸಿಕೊಂಡು ಸಿದ್ಧವಾಗಿದ್ದಳು. ಮಲಗಿದ ಮೇಲೂ ಯಾವ ಸ್ಲೈಡ್ ಬಗ್ಗೆ ಏನು ಹೇಳಬೇಕೆಂದು ಯೋಚಿಸುತ್ತಲೇ ನಿದ್ರಾಲೋಕಕ್ಕೆ ತೆರಳಿದ್ದಳು. ಅವಳ ಆಫೀಸ್‌ನಲ್ಲಿ ಬಹಳ ಒಳ್ಳೆಯ ಕೆಲಸಗಾರ್ತಿ ಎಂದು ಹೆಸರು ಗಳಿಸಿದ್ದಳು. ಆ ಹೆಸರನ್ನು ಉಳಿಸಿಕೊಳ್ಳಲು ಅವಳು ಸತತವಾಗಿ ಶ್ರಮಪಡುವುದು ಅನಿವಾರ್ಯವಾಗಿತ್ತು.
ಆದರೆ ಈ ಕ್ಷಣದಲ್ಲಿ ಅವಳ ಕಾರ್ಯರಂಗ ಅಡುಗೆ ಮನೆ. ತಿಂಡಿ, ಅಡುಗೆ ಎಲ್ಲವನ್ನೂ ಒಟ್ಟಿಗೆ ಶುರು ಮಾಡಿದಳು. ಹಿಂದಿನ ದಿನವೇ ಹೆಚ್ಚಿಟ್ಟಿದ್ದ ತರಕಾರಿಗಳನ್ನು ಒಗ್ಗರಣೆಯಲ್ಲಿ ಹುರಿದು, ಕುಕ್ಕರ್‌ನಲ್ಲಿ ಹಾಕಿ, ಅದಕ್ಕೆ ಅಕ್ಕಿ, ನೀರು, ಮಸಾಲೆಗಳನ್ನು ಹಾಕಿ ಒಂದೇ ಸಾರಿ ಪಲಾವ್ ತರಹ ಬೆಂದುಕೊಳ್ಳಲಿ ಎಂದು ಸಿದ್ಧ ಮಾಡಿದಳು. ಮತ್ತೊಂದು ಒಲೆಯಲ್ಲಿ ಇಡ್ಲಿ ತಯಾರಿಸಲು ಹಿಟ್ಟು, ತಟ್ಟೆಗಳನ್ನು ತೆಗೆದಿಟ್ಟಳು. ಒಂದೊಂದು ತಟ್ಟೆಗೂ ಯಾಂತ್ರಿಕವಾಗಿ ಹಿಟ್ಟು ಸುರಿಯತೊಡಗಿದಳು. ತಲೆಯಲ್ಲಿ ಎರಡನೇ ಸ್ಲೈಡ್ ಮುಂಚೆ ತೋರಿಸಿದ್ದರೂ ನಾಲ್ಕನೆಯ ಸ್ಲೈಡ್ ಆದ ನಂತರ ಮತ್ತೊಮ್ಮೆ ತೋರಿಸಿ ಹೆಚ್ಚಿನ ವಿವರಣೆ ನೀಡಬೇಕು ಎಂದು ಲೆಕ್ಕಾಚಾರ ಹಾಕುತ್ತಿದ್ದಳು. ಇಡ್ಲಿ ಪಾತ್ರೆ ಒಲೆಗೆ ಏರುವಷ್ಟರಲ್ಲಿ ಪಲಾವ್ ಕುಕ್ಕರ್ ಕೆಳಗಿಳಿಯಿತು. ಈಗ ಕಾಫಿ ಮಾಡಲು ಶುರು ಮಾಡಿದರೆ ಶೇಖರ್ ಏಳುವಷ್ಟರಲ್ಲಿ ಕಾಫಿ ಸಿದ್ಧವಾಗುತ್ತದೆ; ಅಲ್ಲದೆ ತನಗೂ ಕಾಫಿ ಅಗತ್ಯವಲ್ಲವೇ ಎಂದುಕೊಂಡಳು. ಅಷ್ಟರಲ್ಲಿ ಅಲ್ಲಿಗೆ ಬಂದ ಶೇಖರ್ `ಟೂತ್‌ಪೇಸ್ಟ್ ಮುಗಿದಿದೆಯಲ್ಲ' ಎಂದು ಕೇಳಿದ. ತಕ್ಷಣ ಹೊರಗಿನ ಬೀರುವಿನಲ್ಲಿದ್ದ ಟೂತ್‌ಪೇಸ್ಟ್ ತೆಗೆದು ಅವನ ಕೈಗಿತ್ತಳು.
ಶೇಖರನಿಗಾಗಿ ಬಿಸಿಬಿಸಿ ಕಾಫಿ ಲೋಟ ಟೇಬಲ್ ಮೇಲಿಟ್ಟು, ಮತ್ತೊಂದನ್ನು ತನ್ನ ತುಟಿಗೆ ಇಟ್ಟುಕೊಂಡ ಕ್ಷಣದಲ್ಲಿ ಮಗುವಿನ ಹಾಲು ಸಿದ್ಧಪಡಿಸುವ ಕೆಲಸ ಶುರುವಾಯಿತು. ಒಂದು ಕೈನಲ್ಲಿ ಕಾಫಿ, ಮತ್ತೊಂದರಲ್ಲಿ ಚಕಚಕನೆ ಹಾಲಿನ ಸಿದ್ಧತೆ. ಅಷ್ಟರಲ್ಲಿ ಅಲ್ಲಿಗೆ ಬಂದ ಶೇಖರ್‌ಗೆ ರೇಡಿಯೋ ಹಾಕುವಂತೆ ವಿನಂತಿಸಿಕೊಂಡಳು. ರೇಡಿಯೋ ಆಲಿಸಿ, ಆನಂದಿಸುವುದಕ್ಕಿಂತ ಅವಳಿಗೆ ಅದು ಟೈಂ ತಿಳಿಸುವ ಯಂತ್ರ ಮಾತ್ರವೇ. ಅದರಲ್ಲಿ ಬರುತ್ತಿದ್ದ ಭಜನೆಗೆ ಕಿವಿಗೊಡುವುದಕ್ಕಿಂತ ಅವಳ ಮನಸ್ಸಿನಲ್ಲಿ ತನ್ನ ಪ್ರೆಸೆಂಟೇಷನ್‌ನಲ್ಲಿ ಏನಾದರೂ ತಪ್ಪಾದರೆ ಸಹೋದ್ಯೋಗಿಗಳಿಂದ ಯಾವ ರೀತಿ ಪ್ರತಿಕ್ರಿಯೆ ಬರುತ್ತದೆ, ತನ್ನ ಪ್ರಗತಿಯ ಮೇಲೆ ಯಾವ ರೀತಿ ಪರಿಣಾಮವಾಗುತ್ತದೆ ಎನ್ನುವ ಯೋಚನೆಯೇ ಸುಳಿದಾಡುತ್ತಿತ್ತು. ಬಹಳ ಸ್ವಲ್ಪ ಸಮಯದಲ್ಲಿ ತನ್ನ ಸ್ವಂತ

ಪರಿಶ್ರಮ ಹಾಗೂ ಪ್ರತಿಭೆಗಳಿಂದ ರಜನಿ ಅಧಿಕಾರದ ಏಣಿಯ ಮೇಲೇರುತ್ತಿದ್ದುದು ಸಹೋದ್ಯೋಗಿಗಳ ಹೊಟ್ಟೆಯುರಿಗೆ ಕಾರಣವಾಗಿತ್ತು. ಒಬ್ಬಿಬ್ಬರನ್ನು ಬಿಟ್ಟು ಉಳಿದವರು ಇವಳ ಏಳಿಗೆಯನ್ನು ಸಹಿಸುತ್ತಿರಲಿಲ್ಲ. ಮುಂದೆ ಹೊಗಳಿದರೂ ಹಿಂದೆ ಕಿಡಿ ಕಾರುತ್ತಿದ್ದರು. ಹಾಗೆಂದು ಇವಳ ದ್ವೇಷವನ್ನು ಕಟ್ಟಿಕೊಳ್ಳಲೂ ಸಿದ್ಧರಿರಲಿಲ್ಲ. ಇದೆಲ್ಲ ರಜನಿಗೆ ಗೊತ್ತಿದ್ದರೂ ಏನೂ ತಿಳಿಯದವಳಂತೆ, ಇದೆಲ್ಲ ಉದ್ಯೋಗ ಜೀವನದಲ್ಲಿ ಸಹಜ ಎಂದುಕೊಂಡು ಕೇವಲ ತನ್ನ ಗುರಿಯತ್ತ ಗಮನವಿರಿಸಿದ್ದಳು.
ಅಷ್ಟರಲ್ಲಿ ರೋಹಿತ್ ಅಳುತ್ತಿರುವ ಧ್ವನಿ ಕೇಳಿಸಿತು. ತನ್ನ ಯೋಚನೆಗಳಿಗೆ ಬ್ರೇಕ್ ಹಾಕಿ, ಸಿದ್ಧ ಪಡಿಸಿದ್ದ ಹಾಲನ್ನು ಬಾಟಲ್‌ಗೆ ಹಾಕಿಕೊಂಡು ರೂಮಿಗೆ ಧಾವಿಸಿದಳು. ಇವತ್ತು ರೋಹಿತ್ ಹಠ ಶುರು ಮಾಡಿದರೆ ತನ್ನ ಮೂಡ್ ಹಾಳಾಗುತ್ತದೆ. ಅಲ್ಲದೆ ಅವನನ್ನು ಬೇಗ ರೆಡಿ ಮಾಡಿ ಅಮ್ಮನ ಮನೆಯಲ್ಲಿ ಬಿಟ್ಟು, ಸ್ವಲ್ಪ ಬೇಗ ಆಫೀಸ್‌ಗೆ ಹೋದರೆ ವಾಸಿ. ಹೀಗೆ ಯೋಚಿಸುತ್ತಾ ಮಗುವನ್ನು ತೊಡೆಯ ಮೇಲೆ ಮಲಗಿಸಿಕೊಂಡು ಹಾಲು ಕುಡಿಸಲು ಸಿದ್ಧಳಾದಳು. ಮುದ್ದು ಮಗುವಿನ್ನು ತೊಡೆಯ ಮೇಲೆ ಮಲಗಿಸಿಕೊಂಡು, ಹಿತವಾಗಿ ಅಪ್ಪಿಕೊಂಡು ಹಾಲೂಡಿಸಲು ಶುರು ಮಾಡಿದಾಗ ಒಂದು ಬಗೆಯ ಶಾಂತಿ ಆವರಿಸಿತು. ಕಳೆದ ಒಂದು ಘಂಟೆಯಿಂದ ಒಂದೇ ಸಮನೆ ಕೆಲಸ ಮಾಡಿ ದಣಿದ ಕೈಗಳಿಗೆ ಹಾಗೂ ಕ್ಷಣಾರ್ಧವೂ ಬಿಡುವಿಲ್ಲದೆ ತಲೆಯಲ್ಲಿ ನಡೆಯುತ್ತಿದ್ದ ರಿಂಗಣ ಕುಣಿತಕ್ಕೆ ಒಂದೈದು ನಿಮಿಷ ಕಡ್ಡಾಯವಾಗಿ ಬಿಡುವು ಸಿಕ್ಕಿತು. ರಜನಿ ದೀರ್ಘವಾಗಿ ಉಸಿರೆಳೆದುಕೊಳ್ಳುತ್ತಿದ್ದಾಗ ರೇಡಿಯೋದಲ್ಲಿ ಯಾರೋ ಸುಶ್ರಾವ್ಯವಾಗಿ ಹಾಡುತ್ತಿದ್ದರು-

ತಲೆ ಕೊಡವ ತಳೆದಿರಲು, ಕೈ ಕತ್ತಿ ಪಿಡಿದಿರಲು
ಬಳುಕು ಹಗ್ಗದ ಮೇಲೆ ತಾನಡಿಯನಿಡುತ
ಕೆಲ ಬಲಕೆ ಬೀಳದೆ ಮುನ್ನಡೆವ ಡೊಂಬನುಪಾಯ
ಕಲೆಯೆ ಜೀವನಯೋಗ - ಮಂಕುತಿಮ್ಮ

ಜೀವಿತ ಪ್ರಮಾಣ ಪತ್ರ - ಡಿ ಬಿ ಪ್ರಾಣೇಶ್ ರಾವ್

ನವೆಂಬರ್ ತಿಂಗಳಲ್ಲಿ ಪಿಂಚಿನಿದಾರರೆಲ್ಲರೂ ಜೀವಿತ ಪ್ರಮಾಣ ಪತ್ರವನ್ನು ತಾವು ಪಿಂಚಿನಿ ಪಡೆಯುವ ಸಂಸ್ಥೆ ಯಾ ಸರ್ಕಾರದ ಇಲಾಖೆಗೆ ಸಲ್ಲಿಸಬೇಕು .ಈ ವರ್ಷ ಕೊರೋನಾ ಸಮಸ್ಯೆ ಯಿಂದಾಗಿ ,ಪ್ರಮಾಣ ಪತ್ರವನ್ನು ಹೇಗೆ ಸಲ್ಲಿಸ ಬೇಕೆಂಬ ವಿಚಾರ ,ಪಿಂಚಿನಿದಾರರ ಗುಂಪುಗಳಲ್ಲಿ ಎರಡು ಮೂರು ತಿಂಗಳಿಂದ ಚರ್ಚಿತ ವಿಷಯ . ಈ ಪ್ರಮಾಣಪತ್ರ ಸಲ್ಲಿಸುವಿಕೆ ಕುರಿತು ಕೆಲವು ವಿನೋದ ಪ್ರಸಂಗಗಳನ್ನು ತಿಳಿಸುವುದೇ ನನ್ನ ಲೇಖನದ ಉದ್ದೇಶ .

ಈಗ ಇಪ್ಪತ್ತು ವರ್ಷಕ್ಕೆ ಮುಂಚೆ ನಾನು ಇನ್ನೂ ವೃತ್ತಿ ಯಲ್ಲಿದ್ದೆ .ಆಗ ನವೆಂಬರ ತಿಂಗಳ ಆದಿಯಲ್ಲಿ ಒಂದು ದಿನ ನಮ್ಮ ಹಿರಿಯ ಪಿಂಚಿನಿದಾರ ಮಿತ್ರ ರೊಬ್ಬರು ನನ್ನ ಬಳಿ ಬಂದರು.ರಾಯರೇ*ನಾನು ಇನ್ನೂ ಉಸಿರಾಡ್ತಿದೀನಿ ಅಂತ ಬರೆದುಕೊಡಿ* ಎಂದು ನಗುತ್ತಾ ಪ್ರಮಾಣಪತ್ರದ ಕಾಗದ ಕೊಟ್ಟರು.ನಾನೂ ನಗುತ್ತಲೇ *ಹೆಣವಾಗಿಲ್ಲ,ಹಣಕೊಡಬಹುದು* ಎಂದು ಬರೆಯಲೇ ಎಂದೆ .ಇಬ್ಬರೂ ಮತ್ತೆ ಮನಸಾರೆ ನಕ್ಕೆವು.ಅವರ ಪ್ರಮಾಣ ಪತ್ರಕ್ಕೆ ಧೃಡೀಕೃತ ಸಹಿ ಹಾಕಿ ಕೊಟ್ಟೆ .
ಇನ್ನೊಂದು ಪ್ರಸಂಗ
ನಮ್ಮ ಬ್ಯಾಂಕಿನಲ್ಲಿ ಪ್ರತಿ ತಿಂಗಳ ಕೊನೆಯ ಗುರುವಾರ ಸಂಬಳದ ದಿನ .ಸಾಮಾನ್ಯವಾಗಿ 27 ನೇ ತಾರೀಕಿನ ನಂತರವಾಗಿರುತ್ತಿತ್ತು ಅಂದು ಪಿಂಚಿನಿದಾರರು ತಮ್ಮ ಪಿಂಚನಿಯ ಚೆಕ್ಕನ್ನು ಪಡೆಯಲು ಬರುತ್ತಿದ್ದರು.ಇದು ಅಕ್ಟೋಬರ್ ತಿಂಗಳ ಪಿಂಚನಿಯ ದಿನ .ನಮ್ಮ ಪಿಂಚಿನಿದಾರ ಮಿತ್ರ ರು ,ನನ್ನ ಹತ್ತಿರ ಬಂದು "ರಾಯರೇ ನಾನು ಮತ್ತೆ ಮುಂದಿನ ವಾರ ಬರೋಕಾಗಲ್ಲ ,ನೀವು ಇವತ್ತು ನನ್ನನ್ನು ನೋಡಿದೀರಿ .ಒಂದನೇ ತಾರೀಕಿನ ನಂತರ ಈ ನನ್ನ ಪ್ರಮಾಣಪತ್ರಕ್ಕೆ ನಿಮ್ಮ ಸಹಿಮಾಡಿ, ಆಡಳಿತ ವಿಭಾಗಕ್ಕೆ ಕಳಿಸಿಬಿಡಿ" ಎಂದು ಹೇಳುತ್ತಾ ಪ್ರಮಾಣ ಪತ್ರ ನನಗೆ ಕೊಟ್ಟರು .ನಾನು "ನೀವು ಹಿರಿಯರು .ನಾನುಹಾಗೆ ಮಾಡುವುದು ಸರಿಯಲ್ಲ .ನೀವು ಬ್ಯಾಂಕಿಗೆ ಬರಬೇಕಾಗಿಲ್ಲ .ಬೆಳಿಗ್ಗೆ ವಾಕಿಂಗ್ ಮುಗಿಸಿ ಮನೆಗೆ ವಾಪಸು ಹೋಗ್ತಾ ನಮ್ಮ ಮನೆಗೆ ಬನ್ನಿ .ಕಾಫೀ ಕುಡಿದು ಹರಟೆ ಹೊಡೀತಾ ನಾನು ಸಹಿ ಮಾಡಿ ಕೊಡ್ತೀನಿ ." ಎಂದೆ.ಅವರು "ಅದೆಲ್ಲಾ ,ಆಗೋಲ್ಲಾ, ನಾನು ಈಗ ಛಳೀಲಿ ವಾಕಿಂಗ್ ಹೋಗಲ್ಲ, ನಾನು ಬೇರೆಯವರ ಹತ್ತಿರ ಕೊಡ್ತೀನಿ .ವಾಪಸು ಕೊಡಿ" ಎಂದು ಸಿಡಿದರು .ನಾನು" ಕೋಪ ಮಾಡಿಕೋ ಬೇಡಿ ,ನೀವು ನಮ್ಮ ಮನೇಗೆ ಬರೋದು ಬೇಡ.ನಾನೇ ನಿಮ್ಮ ಮನೆಗೆ ಬರ್ತೀನಿ. ಮಾತಾಡ್ತಾ ಸಹಿ ಮಾಡಿ ಕೊಡ್ತೀನಿ .ನೀವು ಕಾಫೀನೂ ಕೊಡಬೇಕಾಗಿಲ್ಲ ." ಎಂದು ಹೇಳಿದೆ. ಅವರು ಅಸಮಾಧಾನದಿಂದಲೇ ಹೊರಟರು.

ಬದುಕು ಕ್ಷಣಿಕ ಎಂದು ಪರೋಕ್ಷವಾಗಿ ತಿಳಿಸುವುದೇ ನನ್ನ ಉದ್ದೇಶವಾಗಿತ್ತು .
ನಂತರ ನವೆಂಬರ ಒಂದನೇ ತಾರೀಕಿನ ದಿನ ಅವರಿಗೆ ಫೋನು ಮಾಡಿ ,*ಕನ್ನಡ ರಾಜ್ಯೋತ್ಸವ* ದ ಶುಭಾಶಯ ಕೋರಿ ಪ್ರಮಾಣಪತ್ರ ಸಹಿ ಮಾಡಿಕೊಟ್ಟೆ.
ಮತ್ತೊಂದು ಪ್ರಸಂಗ
ಕಳೆದ ವರ್ಷ ನನ್ನ ಸ್ನೇಹಿತರು ತಮ್ಮ ಅನುಭವ ಹೇಳಿದ್ದು .ಅವರು ತಮ್ಮ ಇಲಾಖೆಯ ಒಬ್ಬ ಅಧಿಕಾರಿಯ ಬಳಿ ಪ್ರಮಾಣಪತ್ರ ಧೃಡೀಕರಿಸಲು ಕೋರಿದಾಗ ನೂರು ರೂಪಾಯಿಗಳು ಕೊಡಬೇಕೆಂದು ತಿಳಿದು ,ಇನ್ನೂರು ರೂಪಾಯಿನ ನೋಟು ಕೊಟ್ಟರಂತೆ .ಅವರು ಚಿಲ್ಲರೆ ಇಲ್ಲ,ಮುಂದಿನ ವರ್ಷಕ್ಕೂ ಬರೆದು ಕೊಡಲೇ ಎಂದು ಕೇಳಿದರಂತೆ .
ಈ ವರ್ಷದ ಪ್ರಸಂಗ
ನಮ್ಮ ಬ್ಯಾಂಕಿನ ಪಿಂಚಿನಿದಾರರ ಸಂಘದ ವಾಟ್ಸ್ಆಪ್ ಗುಂಪಿನಲ್ಲೂ ಮೂರು ತಿಂಗಳಿಂದ
ಈ ಪ್ರಮಾಣ ಪತ್ರ ಸಲ್ಲಿಸುವಿಕೆ ವಿಚಾರವಾಗಿ ಚರ್ಚೆಯಾಗುತ್ತಲೇ ಇದೆ .ಬೇರೆ ಊರಿನಲ್ಲಿ ನೆಲೆಸಿರುವ ತೊಂಬತ್ತರ ಗಡಿಯಲ್ಲಿರುವ ಪಿಂಚಿನಿದಾರರು "ನಾನು ಹೋದವರ್ಷ ಧೃಡೀಕರಿಸಿದ ಪ್ರಮಾಣಪತ್ರ ಇದೆ.ಈವರ್ಷವೂ
ಅದನ್ನೇ ಸಲ್ಲಿಸಬಹುದೇ" ಎಂದು ಕೇಳಿದರು.
ಅವರಿಗೆ " ಬ್ಯಾಂಕಿಗೆ
ನೀವು ಈ ವರ್ಷವೂ ಜೀವಂತವಾಗಿ ಇರುವಿರಿ,ಎಂದು ಖಾತ್ರಿಯಾಗಲು ಹೊಸ ಪ್ರಮಾಣಪತ್ರ ವನ್ನು ಸಲ್ಲಿಸಲೇ ಬೇಕು ಎಂದು ತಿಳಿಸಲಾಯಿತು.

ಈ ವರ್ಷ ಕೊರೋನಾ ಸಮಸ್ಯೆಯ ಕಾರಣ ಪಿಂಚಿನಿದಾರರೆಲ್ಲರೂ ಜೀವಿತ ಪ್ರಮಾಣಪತ್ರ ಸಲ್ಲಿಸಲು ಡಿಸೆಂಬರ್31ರವರೆಗೆ ಅವಕಾಶ ನೀಡಲಾಗಿದೆ . ಕೇಂದ್ರ, ರಾಜ್ಯಸರ್ಕಾರಗಳ ಹಾಗೂ ಇತರ ಸಂಸ್ಥೆ ಗಳ ವರಿಷ್ಠ ರ ಈ ಆದೇಶವನ್ನು ಮತ್ತೆ 2021ರ ಫೆಬ್ರವರಿ ತಿಂಗಳ ಅಂತ್ಯದವರೆಗೂ ವಿಸ್ತರಿಸುವ ಆದೇಶದ ಹಿಂದೆಯೇ ಕೇಂದ್ರ ಸರ್ಕಾರವು ಮತ್ತೆ 2021ರ ಯಾವ ತಿಂಗಳಿನಲ್ಲೂ ಸಲ್ಲಿಸಬಹುದೆಂಬ ಆದೇಶವೂ ಕೆಲವು ಪತ್ರಿಕೆಯಲ್ಲಿ ವರದಿಯಾಗಿದೆ.

ನಮ್ಮ ಪುರಾಣ ಕಥೆಗಳಲ್ಲಿ ಯಮರಾಯನು ಆಯುರ್ದಾನ ಮಾಡುವುದನ್ನು ಓದಿರುತ್ತೇವೆ . ಈಗ ಈ ಕಲಿಯುಗದಲ್ಲಿ ಯಮಧರ್ಮರಾಯನ ಈ ಅಧಿಕಾರವನ್ನು ಕಸಿದು ,ಆಯುರ್ದಾನ ಮಾಡುತ್ತಿರುವವರಿಗೆ ಅಭಿನಂದನೆಗಳನ್ನು
ಸಲ್ಲಿಸ ಬಹುದಲ್ಲವೇ !!?

ಕೋರೋನಾ ಪಾಸಿಟಿವ್ ಕೊಡಿ ಪ್ಲೀಸ್....... - ಪತ್ತಂಗಿ, ಎಸ್. ಮುರಳಿ

ನಿಮಗೆ ಈಗಾಗಲೇ ಗೊತ್ತಿರುವಂತೆ ಕೊರೋನಾ ವೈರಸ್ಸು ತನ್ನ ಅಟ್ಟಹಾಸವನ್ನು ಮುಂದುವರೆಸುತ್ತಾ ಸಾಗಿದೆ. ಕಾಲ ದೇಶಗಳ ಗಡಿಯಿಲ್ಲದೆ, ಜಾತಿ ಧರ್ಮಗಳ, ಮಹಿಳೆ, ಪುರುಷ, ಮಕ್ಕಳು ಹಿರಿಯರು ಎಂಬ ಬೇಧಭಾವವಿಲ್ಲದೆ ತನ್ನ ಪ್ರತಾಪವನ್ನು ತೋರಿಸುತ್ತಾ ಸಾಗಿ ಬಂದಿದೆ. ಇದಕ್ಕೆ ಕಡಿವಾಣ ಹಾಕುವ ನಿಟ್ಟಿನಲ್ಲಿ ಸರ್ಕಾರವೂ ಸಹ ಸಮರೋಪಾದಿಯಲ್ಲಿ ತನ್ನ ಕೆಲಸವನ್ನು ಮಾಡುತ್ತಿದೆ. ಇದಕ್ಕೆ ಜನರ ಸಹಕಾರವೂ ಅತ್ಯಗತ್ಯ ಎಂಬುದರಲ್ಲಿ ಎರಡು ಮಾತಿಲ್ಲ. ಈ ಕೊರೋನಾ ಸಂಕಷ್ಟದ ನಡುವೆ ಒಂದು ಊರಿನ ಮನೆಯಲ್ಲಿ..

“ಲೇ.. ಸರೋಜಾ, ಬೇಗ ರೆಡಿ ಆಗೇ, ಅಲ್ಲಿ ಜಾಸ್ತಿ ಜನ ಸೇರಿದರೆ ಮತ್ತೆ ಮನೆಗೆ ಬರೋಕೆ ಬಹಳ ಲೇಟ್ ಆಗುತ್ತೆ' ಅಂತ ನಮ್ ಸೀನಾ ಅವಳ ಹೆಂಡತಿಗೆ ಕೂಗ್ತಾ ಇದ್ದ. ಅಯ್ಯೋ ನಿಮಗೆ ವಿಚಾರ ಹೇಳೋದೇ ಮರೆತೆ, ಸರ್ಕಾರದವರು ಅವರ ಬಡಾವಣೆಯ ಆರೋಗ್ಯಕೇಂದ್ರದಲ್ಲಿ ಉಚಿತವಾಗಿ ಕೋರೋನಾ ಪರೀಕ್ಷೆ ಮಾಡ್ತೀವಿ, ಬಡಾವಣೆಯ ಎಲ್ಲ ನಾಗರೀಕರೂ ಸಹ ಬಂದು ಪರೀಕ್ಷೆ ಮಾಡಿಸಿಕೊಳ್ಳಿ, ಹತ್ತೇ ನಿಮಿಷದಲ್ಲಿ ಫಲಿತಾಂಷ ಅಂತ ಮೂರು ದಿನದಿಂದ ಮೈಕ್ ಹಾಕ್ಕೊಂಡು ಕೂಗಿ ಕೂಗೀ ಕರೀತಾ ಇದ್ರು. ಫ್ರೀ ಅಂದಮೇಲೆ ನಮ್ ಸೀನಾ ಮತ್ತು ಸರೋಜಾ ಬಿಡ್ತಾರೆಯೇ, ವಿಷ ಆದ್ರೂ ಸರಿ ಫ್ರೀ ಅಂದರೆ ನಂಗೊಂದು ನಮ್ಮನೇವಿಗೆ ಒಂದು ಅಂತ ಇಬ್ಬರೂ ನಾಲ್ಕು ಬಾಟಲು ತರೋ ಜನ ಇವರು.

“ರೀ.. ಹತ್ತು ನಿಮಿಷ ರೆಡಿ ಆಗ್ತಾ ಇದೀನಿ ಬಂದೇ..' ಅಂತ ಅರ್ಧ ಗಂಟೆಯಿಂದಾ ಹೇಳ್ತಾನೇ ಇದಾಳೆ ಅವಳು, 'ಲೇ.. ಅಲ್ಲೇನು ಶೂಟಿಂಗಾ ಇದೆ? ಅಥವಾ ಮದುವೆ ರೆಸೆಪ್ಷನ್ನಾ? ಬೇಗ ಬಾ' ಅಂತ ಕೂಗಿದ. ಅವಳು ಬರೋ ತನಕಾ ಇವನೂ ಕದಲಲ್ಲ. ಇವನೋ ಮೊದಲೇ ಅಮ್ಮಾವ್ರ ಗಂಡ. ಅವಳು ಹೇಳಿದಳು ಅಂದ್ರೆ ಮುಗೀತು, ಅದೇನೋ ಚಂಡಶಾಸನ ಅಂತಾರಲ್ಲ ಹಾಗೆ ಹೆದರುಪುಕ್ಕಲ ಬೇರೆ. ಹುಲಿಗೆ ಹೆದರುತ್ತಾನೋ ಇಲ್ಲವೇ

ಹೆಂಡತಿಯನ್ನ ಕಂಡ್ರೆ ಅಷ್ಟೇ ಚುಪ್ಲೋ ಚುಪ್ಪು. ಹೆಚ್ಚಿಗೆ ಮಾತನಾಡಿದರೆ ಅವಳೇ ನಾಲ್ಕು ತದುಕೋಕೂ ಹಿಂದೆ ಮುಂದೆ ನೋಡಲ್ಲ. ಅಂತಹ ಸ್ಥಿತಿ ಹಲವಾರು ಬಾರಿ ಆಗಿದೆ ಬಿಡಿ.

ಅಂತೂ ಬಂದ್ಲು ಹೊರಗೆ ಪುಣ್ಯಾತ್ಗಿತ್ತಿ. 'ಸ್ವಲ್ಪ ಸೀರೆಗೆ ನೆರಿಗೆ ಹಿಡೀರಿ, ಯಾಕೋ ಕೂತ್ಕತಾಇಲ್ಲ, ಹೊಸ ಸೀರೆ' ಅಂದ್ಲು. ಇಲ್ಲೇ ಹೋಗಿ ಕೋರೋನಾ ಟೆಸ್ಟ್ ಮಾಡಿಸಿಕೊಂಡು ಬರೋಕೆ ಇಷ್ಟೆಲ್ಲಾ ಅಲಂಕಾರಾನಾ? ಅಂತ ಮನಸ್ಸಲ್ಲೇ ಪ್ರಶ್ನೆ ಎದ್ರೂ ಕೇಳೋಕೆ ಧೈರ್ಯ ಸಾಲದೆ ಉಗಳು ನುಂಗಿಕೊಂಡು ನೆರಿಗೆ ಹಿಡಿದ ನಮ್ ಸೀನ. ಇವನು ಮಾತ್ರ ಪೆಕ್ರನ ತರಹ ಮಾಸಲು ಪ್ಯಾಂಟು, ಅಂಗಿ ಹಾಕ್ಕೊಂಡಿದ್ದ. ಹೊಸಬರಾರಾದರೂ ನೋಡಿದರೆ ಅವಳ ಮನೆಯ ಆಳಿನಂತೆ ಕಾಣುತ್ತಿದ್ದ. ಇಬ್ಬರೂ ನಡೆದುಕೊಂಡು ಹೊರಟರು ಆ ಆರೋಗ್ಯ ಕೇಂದ್ರಕ್ಕೆ.

ಅಲ್ಲಾಗಲೇ ನೂರಾರು ಜನ ಸೇರಿಬಿಟ್ಟಿದ್ರು. ಮಹಿಳೆಯರಿಗೆ ಮತ್ತು ಪುರುಷರಿಗೆ ಅಂತ ಪ್ರತ್ಯೇಕ ಸಾಲು ಬೇರೆ ಮಾಡಿದ್ರು, ಇವಳು ಕಿಲಾಡಿ, ಯಾರನ್ನೋ ಮಾತನಾಡಿಸುವಂತೆ ಮಾಡಿ ಸಾಲಿನ ಮಧ್ಯದಲ್ಲೇ ನುಗ್ಗಿ ನಿಂತಳು. ಪಾಪ ಅವನಿಗೆಲ್ಲಿದೆ ಆ ಚಾತುರ್ಯ? ಸಾಲಿನಲ್ಲಿ ಕೊನೆಯವನಾಗಿ ನಿಂತ.

ಕೊರೋನಾ ಪಾಸಿಟಿವ್ ಅಂತ ಬಂದಿರೋರಿಗೆ ಅಲ್ಲೇ ಅಂಬುಲೆನ್ಸ್ ವ್ಯವಸ್ಥೆ ಕೂಡಾ ಮಾಡಿದ್ರು. ಮನೆಗೆ ಹೋಗದಂತೆ ಅಲ್ಲಿಂದಲೇ ಸರ್ಕಾರಿ ಆಸ್ಪತ್ರೆಗೆ ಅಡ್ಮಿಟ್ ಮಾಡೋಹಾಗೆ ಇತ್ತು. ಇವನ ಕಣ್ಣ ಮುಂದೇನೇ ಇಬ್ಬರನ್ನ ಕರೆದುಕೊಂಡು ಹೋದ್ರು ಹದಿನೈದು ದಿನ ಆಸ್ಪತ್ರೆಲೇ ಇರಬೇಕಂತೆ ಅಂತ ಜನ ಒಳಗೊಳಗೇ ಮಾತಾಡ್ಕೊತಾ ಇದ್ರು, ಇವನ ಸಾಲಿನ ಐದಾರು ಜನ ಖಾಲಿ ಆಗೋ ಅಷ್ಟರಲ್ಲಿ 'ರೀ.. ನಂದು ಟೆಸ್ಟ್ ಓಕೆ ಆಯ್ತು. ನೆಗೆಟಿವ್ ಬಂದಿದೆ. ನೀವು ಮಾಡಿಸಿಕೊಂಡು ಬನ್ನಿ, ನಾನು ಮನೆಗೆ ಹೋಗಿದ್ದೀನಿ' ಅಂತ ಸರೋಜ ನಮ್ ಸೀನಂಗೆ ಹೇಳಿ ಹೋದಳು. ಅವನಿಗೆ ಗೊತ್ತಿಲ್ಲದೇ ಏನು? ಈ ನೆಗೆಟಿವ್ ರಿಪೋರ್ಟ್ನ ಎಲ್ಲರಿಗೂ ಸಾರಿಕೊಂಡು ಬರಬೇಕಲ್ಲ ಅಂತ. ಇವಳನ್ನ ಕಟ್ಟಿಕೊಂಡಾಗಿನಿಂದಾ ಇದೇ ಆಗೋಯ್ತು. ನಮ್ಮಮ್ಮನ್ನ ನೋಡೋಕೆ ಬಿಡಲ್ಲ, ಅಕ್ಕ ತಂಗಿಯರನ್ನ ಸೇರಿಸಲ್ಲ, ತಮ್ಮ ಬಂದ್ರೋ ಮುಖ ಕೊಟ್ಟು ಮಾತಾಡಲ್ಲ. ಈ ಬಾಳಿಗೆ ಯಾಕಾದ್ರೂ ಮದುವೆ ಆದ್ನೋ ಅಂತ ಯೋಚನೆ ಮಾಡ್ತಾ ಇದ್ದ ಸೀನ.

'ರೀ.. ನಿಮ್ ಹೆಸರೇನು?' ಅಂತ ಆ ಕ್ಲರ್ಕು ಕೂಗಿದಾಗಲೇ ವಾಸ್ತವಕ್ಕೆ ಬಂದಿದ್ದು ಸೀನ.

'ಸರ್, ಶ್ರೀನಿವಾಸ ಅಂತ ಹೇಳಿ ತನ್ನ ಮನೆಯ ವಿಳಾಸ, ಫೋನ್ ನಂಬರು ಎಲ್ಲಾ ಕೊಟ್ಟ.

ಅಲ್ಲಿ ಗಂಟಲಲ್ಲಿ ಕಡ್ಡಿ ಹಾಕಿ, ಮೂಗಲ್ಲಿ ಕಡ್ಡಿ ಹಾಕಿ ಕಫ ತೆಗೆದು ಪರೀಕ್ಷೆ ಮಾಡಿ ಎಲ್ಲವೂ ನೋಡಿದರು. ರಿಸಲ್ಟ್ ಡೆಸ್ಕ್ ಹತ್ರ ಯೋಚನೆ ಮಾಡ್ತಾ ನಿಂತಿದ್ದವನಿಗೆ 'ಯಾರು ಶ್ರೀನಿವಾಸ' ಎಂಬ ಕೂಗು ಕೇಳಿದ ಕೂಡಲೇ 'ನಾನೇ..' ಎಂದು ಕರೆದವನ ಬಳಿ ಹೋದ.

'ಅದೃಷ್ಟವಂತರು ಕಣೀ ನೀವು. ನಿಮಗೆ ಯಾವುದೇ ಕೊರೋನಾ ಇಲ್ಲ. ರಿಸಲ್ಟ್ ನೆಗೆಟಿವೆ ಬಂದಿದೆ. ಮನೆಗೆ ಹೋಗಬಹುದು' ಎಂದ.

"ಸಾರ್.. ದಯವಿಟ್ಟು ಮತ್ತೊಮ್ಮೆ ನೋಡಿ' ಎಂದಾಗ ಇವನನ್ನು ಬೈದು ಕಳಿಸಿದರು. ಇವನ ಉಪಟಳ ಮಿತಿಮೀರಿದಾಗ ಮುಖ್ಯ ವೈದ್ಯಾಧಿಕಾರಿಯ ಬಳಿ ಕರೆದೊಯ್ದರು. ಅವರ ಬಳಿಯೂ ಈ ಸೀನನದು ಒಂದೇ ವರಾತ ಮತ್ತೊಮ್ಮೆ ಪರೀಕ್ಷಿಸಲು, "ರೀ ಪರೀಕ್ಷೆ ನೆಗೆಟಿವ್ ಬಂದರೆ ಮತ್ತೊಮ್ಮೆ ಚೆಕ್ ಮಾಡಲ್ಲ, ಪಾಸಿಟಿವ್ ಅಂತ ಬಂದರೆ ಇನ್ನೊಂದು ಸಲ ಮಾಡಬಹುದು. ಸುಮ್ಮನೆ ಮನೆಗೆ ಹೋಗಿ, ಇಲ್ಲವಾದರೆ ಪೋಲೀಸರನ್ನು ಕರೆಸ್ತೆವೆ. ನಮಗೂ ಬೇರೆ ಕೆಲಸಗಳು ಇವೆ' ಎಂದು ಗದರಿದಾಗ ಅವರ ಕೈಗೆ ಒಂದಷ್ಟು ನೋಟುಗಳನ್ನಿಟ್ಟ ಸೀನ.

“ಏನ್ರಿ ಇದು? ಉಚಿತವಾಗಿ ಪರೀಕ್ಷೆ ಮಾಡಿಸ್ತಾ ಇದೆ ಸರ್ಕಾರ, ನಿಮಗೆ ನೆಗೆಟಿವ್ ಬೇರೆ ಬಂದಿದೆ, ಆದ್ರೆ ನೀವು ಯಾಕೆ ಕಾಸು ಕೊಡ್ತಾ ಇದೀರಾ?' ಎಂದರು ಆ ವೈದ್ಯರು.

“ಸಾರ್, ದಯವಿಟ್ಟು ನನಗೆ ಪಾಸಿಟಿವ್ ಅಂತ ರಿಪೋರ್ಟು ಬರೋಹಾಗೆ ಮಾಡಿ, ನಿಮಗೆ ಇನ್ನೂ ಸ್ವಲ್ಪ ಹಣ ಬೇಕಾದರೆ ಕೊಡ್ತೀನಿ' ಅಂದ ಸೀನ.

“ಅಲ್ಲಾ, ಪಾಸಿಟಿವ್ ಬಂದ್ರೆ ನಗೆಟಿವ್ ರಿಪೋರ್ಟ್ ಕೊಡಿ ಅಂತ ದುಡ್ಡು ಕೊಡೋಕೆ ಜನ ಇದ್ದಾರೆ. ಆದರೆ ನಿಮ್ಮದೇನಿರಿ ವಿಚಿತ್ರ? ಉಲ್ಟಾ ಕೇಸು' ಎಂದು ಹಣ ವಾಪಸ್ಸು ಕೈಗಿಡುತ್ತಾ ಕೇಳಿದರು ಡಾಕ್ಟು. 'ಸಾರ್.. ಅದೂ.. ಅದೂ..

'ಏನು ಅದೂ'

'ಸಾರ್ ಅವರನ್ನೆಲ್ಲ ಆಚೆ ಕಳಿಸಿ, ಹೇಳೀನಿ' ಅಂದ. ವೈದ್ಯರು ಅವರನ್ನೆಲ್ಲಾ ಆಚೆ ಕಳಿಸಿ ಇವನತ್ತ ನೋಡಿದರು, ಈಗಲಾದರೂ ಹೇಳು ಎಂಬಂತೆ.

'ಸಾರ್, ಈ ಕೋರೋನಾ ಪಾಸಿಟಿವ್ ಅಂತ ರಿಪೋರ್ಟ್ ಬಂದ್ರೆ, ಆಸ್ಪತ್ರೆಯಲ್ಲಿ ಹದಿನೈದು ದಿನ ಇರಬೇಕಾಗುತ್ತೆ ಅಲ್ವಾ? ಯಾರನ್ನೂ ಒಳಗೆ ಬಿಡದೆ ನೋಡೋತಾರೆ ಅಲ್ವಾ?'

'ಹೂಂ, ಹೊರಗೆ ಓಡಾಡೋ ಹಾಗೇ ಇಲ್ಲ. ಮಡದಿ ಮಕ್ಕಳನ್ನು ಸಹಾ ನೋಡೋ ಹಾಗೇ ಇಲ್ಲ. ಇನ್ನು ಫ್ರೆಂಡು, ಬಳಗ ಅಂತ ಕೇಳೋಹಗೇ ಇಲ್ಲ, ಊಟ, ತಿಂಡಿ, ಮಾತ್ರೆ ಎಲ್ಲಾ ಅಲ್ಲೇ.

“ಹೌದು ಸಾರ್, ಅದಕ್ಕೇ ನಾನು ಕೇಳಿದ್ದು"

'ನಿಮ್ಮ ರೂಟೇ ಅರ್ಥ ಆಗ್ಲಿಲ್ಲವಲ್ಲರೀ..'

'ಸರ್, ಇನ್ನು ನಿಮ್ಮ ಹತ್ರ ಏನು ಮುಚ್ಚುಮರೆ? ಮನೆಯಲ್ಲಿ ನನಗೆ ನೆಮ್ಮದಿ ಇಲ್ಲಾ ಸರ್, ಹೆಂಡತಿ ಪ್ರತಿನಿತ್ಯ ದೆವ್ವಕ್ಕಿಂತಾ ಹೆಚ್ಚು ಕಾಟ ಕೊಡ್ತಾಳೆ. ಅನ್ನೋಹಾಗೆ ಇಲ್ಲ, ಅನುಭವಿಸೋಹಾಗೆ ಇಲ್ಲ. ನನ್ನ ಕರ್ಮ ಸರ್. ಹೊರಗೆ ಎಲ್ಲೂ ಹೋಗೋಕೆ ಬಿಡಲ್ಲ, ನಮ್ಮ ಅಮ್ಮನ ಮನೆಗೂ ಕೂಡಾ. ಅದಕ್ಕೇ ಹದಿನೈದು ದಿನ ಆಸ್ಪತ್ರೆಯಲ್ಲಿ ನೆಮ್ಮದಿಯಾಗಿ ಇದ್ದಿದ್ದೀನಿ. ದಯವಿಟ್ಟು ಪಾಸಿಟಿವ್ ರಿಪೋರ್ಟ್ ಕೊಟ್ಟು ನನ್ನ ಕಾಪಾಡಿ ಸರ್. ನಿಮ್ಮ ಉಪಕಾರ ಈ ಜನ್ಮದಲ್ಲಿ ಮರೆಯಲ್ಲಾ' ಅಂತ ಒಂದೇ ಉಸುರಿನಲ್ಲಿ ಅವಲತ್ತುಕೊಂಡ ಸೀನ.

ಇಂಥಹವರೂ ಇದ್ದಾರಾ..? ಎಂಬ ಯೋಚನೆಯಲ್ಲಿ ಮೂರ್ಛಹೋದ ಆ ವೈದ್ಯ ಇನ್ನೂ ಎದ್ದಿಲ್ಲ. ನಮ್ ಸೀನಾ ಕೂಡಾ ಬೇರೆ ಯಾರನ್ನೋ ಹಿಡಿದು ಪಾಸಿಟಿವ್ ರಿಪೋರ್ಟ್ ಮಾಡಿಸಿಕೊಂಡು ಸರ್ಕಾರದ ವಿಶೇಷ ಕೊರೋನಾ ಆಸ್ಪತ್ರೆಯಲ್ಲಿ ಮಡದಿಯಿಂದ ತಪ್ಪಿಸಿಕೊಂಡ ನೆಮ್ಮದಿಯಲ್ಲಿ ಮಲಗಿದ್ದಾನೆ.

ನನ್ನಿಷ್ಟದ ಬರಹಗಾರ - ರೇಣುಕಾ ದೇಸಾಯಿ

ವಿಶಿಷ್ಟ ಬರಹಗಾರ
ವೈವಿಧ್ಯತೆಯ ಪತ್ರಕಾರ
ಹಾಳೆ, ಪೆನ್ನು ಕೆಳಗಿಟ್ಟು
ನೆಡದದ್ದು ಎಲ್ಲಿಗೆ?
ಯಾತಕ್ಕೆ ಈ ಆತುರ?
ಬೆಟ್ಟದಷ್ಟಿತ್ತು ಬರೆಯಲು!!
ನಿನಗಿನ್ನು ಸುಸ್ತಾಗಿರಲಿಲ್ಲ
ಬರೆಯಲು.

ಮಾತನಾಡುವ ಮಾಂತ್ರಿಕ
ನೂರಾರು ವಿಷಯಗಳ
ಸಂಗ್ರಹಕಾರ.
ಮಾತಿಗೆ ನಿಂತರೆ ಮೋಡಿಮಾಡುವ ಕಂಠ
'ಎಂದೂ ಮರೆಯದ ಹಾಡು '
ಕೇಳಿಸಿ ಸಾವಿರಾರು ಕನ್ನಡಿಗರ
ಮನಗೆದ್ದ ಸರದಾರ

ಅಮ್ಮಾ..... ಅಮ್ಮಾ... ಎಂದು
ಕನವರಿಸಿದ ಮಗ ನೀನು
ಲಲಿತೆಯನ್ನು ಪಡೆದದ್ದು
ಅಮ್ಮನನ್ನು ನೋಡಲು.
ನೋಡು ನೋಡುತ್ತಾ
ಲಲಿತೆಯಲ್ಲಿ ಅಮ್ಮನನ್ನು ಕಂಡು ಬೆರಗಾದವನು.

ಬೆಳೆಗೆರೆ ಮನೆಯಲ್ಲಿ ಹುಟ್ಟಿದವರು ಸಾತ್ವಿಕ,
ಸಾರಸ್ವತ ಲೋಕದ ಮೇರು
ವ್ಯಕ್ತಿಗಳು
ಬೆಳೆಗೆರೆ ಕೃಷ್ಣಶಾಸ್ತ್ರೀಗಳೋ ಬ್ಬ
ಅವಧೂತ, ಅವರಲ್ಲಿ ನೀನೊಬ್ಬ ಯಾಕಿಷ್ಟು ಪ್ರಕ್ಷುಬ್ದ?

ಬಡವ ನೀನಲ್ಲ, ಆದರ್ಶ ಕನಸುಗಳ ಬೆನ್ನಟ್ಟಿರುವ,
ಬರುವ ಲಕ್ಷ್ಮೀಯ
ತಿರಸ್ಕರಿಸಿ ಎದ್ದವ
ಮತ್ತೆ ಹುಡುಕಿ ತರುವೆ,
ಕೈ ಬಿಟ್ಟು ನೆಡೆವೆ
ಅಷ್ಟೊಂದು ವಿಶ್ವಾಷ ಎಲ್ಲಿಂದ
ಪಡೆವೆ?

ಅಕ್ಷರಗಳ ಶೃಂಗರಿಸಿ ಮಾರಿದ
ಮಾರಾಟಗಾರ
ಲಕ್ಷ, ಲಕ್ಷ ಓದುಗರನ್ನು ಸೃಷ್ಟಿಸಿದ ಮಂತ್ರಗಾರ.
ಭರದಿಂದ ಸಾಗಿತ್ತು ಕನ್ನಡದ
ತೇರು, ಕೋಟಿ ಕೋಟಿ
ಲೆಕ್ಕದಲಿ ಬಂದೋದಗಿತು
ಹಣದ ಮಹಾಪೂರ.

ನಿನ್ನ ಈ ಸೌಧವ ಅಮ್ಮ
ನೋಡಲಿಲ್ಲೆಂದು
ಹೋದಲ್ಲಿ, ಬಂದಲ್ಲಿ ಹೇಳಿ
ಜೀವ ತಾಳಲಾರದೆ ಎದ್ದು
ಬಿಟ್ಟೆಯಾ? ತೋರಿಸಿ ಬರುವೆನೆಂದು.
ಇರು ಆ ಲೋಕದಲ್ಲಿ
ಅಮ್ಮನೊಂದಿಗೆ ಒಂದೊಂದೇ
ನಿನ್ನ ಸಾಹಸ ಬಣ್ಣಿಸುತ್ತಾ.
ಓ!!! ನನ್ನ ನೆಚ್ಚಿನ ಬರಹಗಾರ

ಕನ್ನಡ ಬಳಗ – ವಿ.ಸೀ.ಗ್ರಂಥಾಲಯ - ಮನೋಹರ.ಎಂ.ಗೋಖಲೆ

ನಲವತ್ತು ವರ್ಷಗಳ ಕಾಲ ಕನ್ನಡ ಸೇವೆಯನ್ನು ಮಾಡಿದ್ದ ಮೈಸೂರು ಬ್ಯಾಂಕ್ ಕನ್ನಡ ಬಳಗದ ಬಗ್ಗೆ ಎಲ್ಲರಿಗೂ ತಿಳಿದಿದೆ. ಅದರ ಸದಸ್ಯರು ಕಟ್ಟಿ ಬೆಳೆಸಿ ಬಳಸಿದ್ದ ಸುಮಾರು ೫೦೦೦ ಪುಸ್ತಕಗಳಿರುವ "ವಿ.ಸೀ.ಗ್ರಂಥಾಲಯ"ವನ್ನು ಕಳೆದ ತಿಂಗಳು ಜಯನಗರದ ಸರಳಾದೇವಿ ಶಿಕ್ಷಣ ಸಂಸ್ಥೆಗೆ ಹಸ್ತಾಂತರಿಸಲಾಯ್ತು. ಅದೊಂದು ನೋವು ತುಂಬಿದ್ದ ಕಾರ್ಯಕ್ರಮವಾಗಿದ್ದರೂ ಮೈಸೂರು ಬ್ಯಾಂಕ್ ಹೆಸರಿನ ಆಶ್ರಯದಲ್ಲಿರುವ ರಾಣಿ ಸರಳಾದೇವಿ ಶಿಕ್ಷಣ ಸಂಸ್ಥೆಯಲ್ಲಿ ಸುರಕ್ಷಿತವಾಗಿ ಗ್ರಂಥಗಳು ಸೇರಿರುವ ಬಗ್ಗೆ ಸಂತೋಷವೂ ಎಲ್ಲರ ಮನದಲ್ಲಿ ತುಂಬಿಕೊಂಡಿತ್ತು. ಒಂದು ತರಹ ನಮ್ಮೆಲ್ಲರಂತೆ ೩೫-೪೦ ವರ್ಷಗಳ ಸೇವೆ ಸಲ್ಲಿಸಿ ನಿವೃತ್ತಿಯಾದ ಭಾವ ಗ್ರಂಥಾಲಯಕ್ಕೂ ಬಂದಿತ್ತಲ್ಲ. ಶಾಲಾ ಮಕ್ಕಳು ಪುಸ್ತಕಗಳ ಓದನ್ನು ಹಚ್ಚಿಕೊಂಡರೆ ಮೆಚ್ಚಿಕೊಂಡರೆ ಗ್ರಂಥಾಲಯವೂ ಹೆಚ್ಚುಕಾಲ ಬಾಳೀತು ಬದುಕೀತು. ೨೧-೧೧-೨೦೨೦ ಶನಿವಾರ ಗ್ರಂಥಾಲಯ ಹಸ್ತಾಂತರ ಕಾರ್ಯಕ್ರಮದಂದು ಪ್ರಸ್ತುತಪಡಿಸಿದ್ದ ಕವನ ಇದು. ತಮ್ಮ ಮುಂದೆ ಓದುತ್ತಿದ್ದೇನೆ.

+++++++++++++++++++++++

ನನ್ನಲ್ಲಿ
ಸಾವಿರಾರು ವರ್ಷಗಳಿಂದ ಹರಿದುಬಂದ ಜ್ಞಾನಧಾರೆಯಿದೆ
ಅಕ್ಷರ ವಿಕಸನದ ಚರಿತ್ರೆಯಿದೆ
ಪುರಾಣವಿದೆ ಜಾನಪದವಿದೆ ಸಾಮಾಜಿಕ ಇತಿಹಾಸವಿದೆ
ಸಂಗೀತ ಕಲಾ ಲೋಕವಿದೆ
ಬರಹ ಪರಂಪರೆ ಮೇರು ಮಹಾಮಹಿಮರ ಸಾಧನೆಯಿದೆ

ಭಾರತರತ್ನರ ಜ್ಞಾನಪೀಠರ ಜ್ಞಾನಾಮೃತವಿದೆ
ಸರಸ್ವತಿ ಸಮ್ಮಾನಿತರ ವಿಚಾರಧಾರೆಯಿದೆ
ವಿಜ್ಞಾನಿಗಳ ಖ್ಯಾತನಾಮರ ಆತ್ಮಕಥೆಯಿದೆ
ವಿಶ್ವಮಾನ್ಯರ ಕಥಾನಕವಿದೆ
ಹಾಸ್ಯ ವಿನೋದ ಪತ್ತೇದಾರಿ
ಸಾಹಸ ಇದೆ
ಬನ್ನಿ ನನ್ನನ್ನು ಸ್ವೀಕರಿಸಿ

ಬರೀ ಐದು ಸಾವಿರ ಸಂಖ್ಯೆಯ
ಪುಸ್ತಕ ತುಂಬಿದ ಕಪಾಟು ನಾನಲ್ಲ,
ನನ್ನಲ್ಲಿ
ನಮ್ಮ ಮೈಸೂರು ಬ್ಯಾಂಕಿನ
ಸವಿ ನೆನಪುಗಳಿವೆ
ನಲಿವಿದೆ ನೋವಿದೆ
ಪ್ರೀತಿಯಿದೆ ವಿಶ್ವಾಸವಿದೆ

ಓದಿ ಓದಿಸಿ ಓದು ಬೆಳೆಸಿ
ಜ್ಞಾನಾಮೃತ ಬೆಳಕಿನಲ್ಲಿ ಮುನ್ನಡೆಯೋಣ
ಸಂತಸದ ಸಂಯಮದ
ಸಾಂತ್ವನದ ಸನ್ಮಿತ್ರ ನಾನು.

ಮಕ್ಕಳು ಕಲಿಸಿದ ಪಾಠ - ನಾಗೇಶ ಜಿ. ವೈದ್ಯ

ಶಾಲೆಯ ಪರಿಸರ ಸ್ವಚ್ಛವಾಗಿರಿಸೆ
ಮಕ್ಕಳ ಗುಂಪಿನ ಶಪಥ
ದಾರಿಯ ಬದಿ ಕಸ ಎಸೆವರ ಕಂಡರೆ
ಉಕ್ಕುವುದಿವರಿಗೆ ಬಲು ಕೋಪ

ಶಾಲೆಯ ಎದುರಲಿ ಕೇರಿಯ ಜನಗಳು
ತಂದು ಸುರಿಯುವರು ಕಸ ರಾಶಿ
ಪುರಸಭೆ ವಾಹನ ಕರೆಸಿ ತೆಗೆಸಿದರು
ಮಕ್ಕಳು ತಾವೇ ಶ್ರಮವಹಿಸಿ

ಮಕ್ಕಳ ಗುಂಪು ತಂದಿತು ಹೂ ಗಿಡ
ನೆಟ್ಟರು ಅವುಗಳ ಸಾಲಾಗಿ
ಮಾರನೆ ದಿನ ಮರುಕಳಿಸಿತು ಮತ್ತೆ
ಕಸದ ರಾಶಿಯು ಸೊಂಪಾಗಿ

ಮಕ್ಕಳ ಮೀಟಿಂಗ್ ನಡೆಯಿತು ಅಂದೇ

ಕಿಟ್ಟನ ಅಧ್ಯಕ್ಷತೆಯಲ್ಲಿ
ಪಾಠವ ಕಲಿಸಲು ನಿರ್ಧರಿಸಿದರು
ಕೊಳಕನು ಎಸೆಯುವ ಜನಕಿಲ್ಲಿ

ಭಾನುವಾರ ನಸುಕಲ್ಲಿಯೆ ಎದ್ದು
ಅವಿತರು ಶಾಲೆಯ ಹಿಂದೆ
ಕಸವನು ಎಸೆಯುವ ಅಂಕಲ್, ಆಂಟಿಯ
ಫೋಟೋ ತೆಗೆದರು ಒಂದೊಂದೆ

ಮಧ್ಯಾನ್ಹದ ಹೊತ್ತಿಗೆ ಸಿದ್ಧವಾಯಿತು
ಫೋಟೋ ಸಮೇತ ಪೋಸ್ಟರ್ರು
ಶಾಲೆಯ ಎದುರಿಗೆ ತೂಗು ಹಾಕಿದರು
ನೆರೆದರು ಜನಗಳು ನೂರಾರು

ಕಸವನು ಎಸೆಯುವ ಎಲ್ಲಾ ಜನರಿಗೆ
ಆಯಿತು ತುಂಬಾ ಅವಮಾನ
ಇನ್ನೆಂದೂ ಕಸವನು ಎಸೆಯೆವು ಇಲ್ಲಿ
ಎಂದು ಮಾಡಿದರು ವಾಗ್ದಾನ

ಅಂಕಲ್, ಆಂಟಿ ತಾವೇ ನಿಂತು
ಸ್ವಚ್ಛಗೊಳಿಸಿದರು ಜಾಗೆಯನು
ತಪ್ಪಿಗೆ ಪ್ರಾಯಶ್ಚಿತ್ತವಾಯಿತು
ಗಿಡಗಳು ತಳೆದವು ಹೂವನ್ನು

ಮಕ್ಕಳ ಲಂಕಾದಹನ

ಊರಿನ ಕಂಪನಿ ನಾಟಕ ನೋಡಿ
ಚಿಮ್ಮಿತು ಮಕ್ಕಳ ಸ್ಫೂರ್ತಿ
ತಾವೂ ನಾಟಕವಾಡಲು ನಿಂತರು
ಕಿಟ್ಟ, ತಿಮ್ಮ, ಸ್ವಾತಿ

ದಿನವಿಡೀ ಚರ್ಚೆಯ ಮಾಡಿ ಕೊನೆಯಲಿ
ಆಯ್ದರು ಲಂಕಾ ದಹನ
ಜಿಗಿವುದರಲ್ಲಿ ನಿಸ್ಸಿಮ ತಿಮ್ಮ
ಆಗುವೆನೆಂದನು ಹನುಮ

ಹೊಂದಿಸಿ ತಂದರು ಮಕ್ಕಳು ಸೇರಿ
ತಕ್ಕ ವೇಷ ಭೂಷ

ಭಲೆ ಭಲೆ ಎನ್ನುವ ಹಾಗೆ ನಡೆಯಿತು
ಮೊದಲ ಕೆಲವು ದೃಶ್ಯ

ಹನುಮನ ಬಾಲಕೆ ಬೆಂಕಿಯ ಹಚ್ಚುವ
ಸನ್ನಿವೇಶ ಬಂದಾಗ
ಟೊಂಕಕೆ ಕಟ್ಟಿದ ಬಾಲವೇ ಉರುಳಿ
ತಬ್ಬಿಬ್ಬಾದರು ಅವರಾಗ

ಬಾಲದ ಬದಲು ತಿಮ್ಮನ ಪಂಚೆಗೆ
ಹತ್ತಿತು ಬೆಂಕಿಯ ಕಿಡಿಯೊಂದು
ಗೆಳೆಯನ ರಕ್ಷಿಸೆ ಜಗ್ಗಾಡಿದರು
ತಿಮ್ಮನ ಪಂಚೆಯ ಹಿಡಿದೆಳೆದು

ಹರಿಯಿತು ಪಂಚೆ, ನಂದಿತು ಬೆಂಕಿ
ತಿಮ್ಮನು ಕಂಡನು ಚಡ್ಡಿಯಲಿ
ಹಾಸ್ಯ ನಾಟಕವು ಎನಿಸಿ ನಕ್ಕರು
ನೆರೆದ ಜನಗಳು ಖುಷಿಯಲ್ಲಿ

ನಾಚಿದ ತಿಮ್ಮ, ಓಡಿರೆ ಮನೆಕಡೆ
ಯಾರೋ ಮೈಕಲಿ ಕೂಗಿದರು
ಹನುಮನ ಬಾಲವು ಚಿಗುರಿದ ಮೇಲೆಯೆ
ಮುಂದುವರಿಯಲಿದೆ ನಾಟಕವು

ಆ ಪ್ರಶ್ನೆ   - ರತ್ನಾ ಮೂರ್ತಿ

A teacher is a teacher, mother, guide, philosopher and a psychologist ಎಂಬ ಮಾತಿದೆ. ಹೌದು ಈ ಎಲ್ಲ ಪಾತ್ರಗಳನ್ನು ಉಪಾಧ್ಯಾಯ ವೃತ್ತಿಯಲ್ಲಿದ್ದವರು ಸಂದರ್ಭಕ್ಕೆ ತಕ್ಕಂತೆ ಧರಿಸಬೇಕಾಗುತ್ತದೆ.

ಪ್ರಾಥಮಿಕ ತರಗತಿಯಲ್ಲಿ ಮಕ್ಕಳಿಗೆ ಶಿಕ್ಷಕಿಯ ಮಾತೇ ವೇದ ವಾಕ್ಯ. ತಮ್ಮ ಶಿಕ್ಷಕಿ ಸರ್ವಜ್ಞಳು.ಅವಳೇ ಆದರ್ಶ, ಅನುಕರಣೀಯ. ಆಕೆ ಒಬ್ಬ ಏಂಜಲ್. ಆದ್ದರಿಂದ ಶಿಕ್ಷಕ ವೃತ್ತಿಯಲ್ಲಿರುವವರು ತಮ್ಮ ಮಾತು ಕತೆ ನಡೆ ನುಡಿ, ವ್ಯವಹಾರ ಎಲ್ಲದರಲ್ಲೂ ತುಂಬಾ ತುಂಬಾ ಎಚ್ಚರಿಕೆಯಾಗಿರಬೇಕು. ಇಲ್ಲದಿದ್ದರೆ ಮಕ್ಕಳಿಗೆ ತಪ್ಪು ಸಂದೇಶ ರವಾನೆಯಾಗುವುದು ಖಂಡಿತಾ. ಕಲಿಸುವುದರಲ್ಲಿ ಆಸಕ್ತಿ, ಪ್ರಾಮಾಣಿಕತೆ, ಶ್ರದ್ಧೆ, ಕಲಿಸುವ ವಿಷಯಗಳ ತಲಸ್ಪರ್ಶಿಯಾದ ಅರಿವು, ಸ್ನೇಹಮಯ ಮಾತೃಹೃದಯ ಜೊತೆಗೇ ಬಿಗಿಯಾಗಿರಬೇಕಾದ ಕಡೆ ಬಿಗಿಯ ನಡೆ... ಒಂದೇ ಎರಡೇ ಶಿಕ್ಷಕ ವೃತ್ತಿಗೆ ಬೇಕಾದ ಗುಣಗಳೇ ಬೇರೆ.

ಎಳೆಯ ಮಕ್ಕಳಿಗೆ ಬೆರಗು ಕುತೂಹಲ ಜಾಸ್ತಿ. ಅವರ ಪುಟ್ಟ ಮುಗ್ಧ ಮನಸ್ಸಿನಲ್ಲಿ ಏಳುವ ಪ್ರಶ್ನೆಗಳೂ ವೈವಿಧ್ಯಮಯ. ನಿಮ್ಮ ಮನೆಗಳಲ್ಲೂ ನಿಮಗೆ ಅದರ ಅನುಭವ ಇರುತ್ತದೆ. ಕೆಲವೊಮ್ಮೆ ನಮಗೆ ಉತ್ತರಿಸಲು ತೋಚದಂತಹ ಪ್ರಶ್ನೆಗಳೂ ಮಕ್ಕಳ ಮನಸ್ಸಿನಲ್ಲಿ ಏಳುವುದುಂಟು.

ಮೂರನೆಯ ತರಗತಿಯಲ್ಲಿದ್ದ ಆ ಬಾಲೆ ಗುಂಡು ಮುಖದ ಬಟ್ಟಲು ಕಂಗಳ ಗುಂಗುರು ಕೂದಲ ಪುಟ್ಟ ಹುಡುಗಿ. ಸಾಕಷ್ಟು ಸ್ಥಿತಿವಂತರ ಮನೆಯ ಮಗಳು. ಸ್ವಲ್ಪ ಮೊಂಡುತನ ಜಾಸ್ತಿ. ನನ್ನನ್ನು ಕಂಡರೆ ಪ್ರಾಣ. ಮನೆಯಲ್ಲಿ ನಾಗರತ್ನ ಮಿಸ್‌ನ ಬಗ್ಗೆ ಮಾತು ಬಿಟ್ಟರೆ ಅವಳಿಗೆ ಬೇರೆ ಜಗತ್ತೇ ಇಲ್ಲ ಎನ್ನುವಂತೆ.

ಒಂದು ದಿನ ದುಗುಡ ತುಂಬಿದ ಮುಖದಿಂದ ಶಾಲೆಗೆ ಬಂದಾಗ ನನಗೆ ತುಂಬಾ ಆಶ್ಚರ್ಯವಾಯಿತು. ಕೆನ್ನೆಯ ಮೇಲೆ ಬೆರಳ ಗುರುತು. ನನ್ನ ಕರುಳೇ ಚುರುಗುಟ್ಟಿದಂತಾಗಿ,
ಯಾಕೇ ಪುಟ್ಟಿ ಏನಾಯಿತು? ಎಂದು ವಾತ್ಸಲ್ಯದಿಂದ ಕೇಳಿದ್ದೇ ತಡ ಅವಳ ಅಳುವಿನ ಅಣೆಕಟ್ಟೆಯೊಡೆಯಿತು. ನನ್ನನ್ನು ತಬ್ಬಿಕೊಂಡು ಮಿಸ್ ನಮ್ಮಮ್ಮ ಕೆಟ್ಟೋರು. ನಂಗೆ ತುಂಬಾ ಹೊಡೆದುಬಿಟ್ರು ಎಂದು ಭೋರೆಂದು ಅಳತೊಡಗಿದಳು.
ಅವಳನ್ನು ಮೃದುವಾಗಿ ಅಪ್ಪಿಕೊಂಡು, ಯಾಕೆ ಹೊಡೆದ್ರು? ನೀನೇನ್ಮಾಡ್ದೆ ಪುಟ್ಟೀ? ಎಂದು ಮೃದುವಾಗಿ ಕೇಳಿದೆ. ಏನೋ ತಪ್ಪು ಮಾಡಿ ಹೊಡೆಸಿಕೊಂಡು ಬಂದು ಅಮ್ಮನ ಮೇಲೆ ದೂರು ಹೇಳುವ ಸಂಗತಿ ಹೊಸತೇನಾಗಿರಲಿಲ್ಲವಾದ್ದರಿಂದ ಸ್ವಲ್ಪ ನಗುಬರುವಂತಾಗಿತ್ತು.

"ನಾನೇನೋ ಕೇಳ್ದೆ. ಅದಕ್ಕೆ ಹೊಡೆದುಬಿಟ್ರು ಮಿಸ್* ಎಂದಳು ಬಿಕ್ಕುತ್ತಾ.

ಹೊಡೆಯೋ ಅಂತ ಪ್ರಶ್ನೆ ನೀನೇನ್ ಕೇಳ್ದೆ ಪುಟ್ಟಿ?* ಎಂದು ಅನುನಯದಿಂದ ಕೇಳಿದೆ. ಅವಳ ಅಳುವ ಮುದ್ದು ಮುಖವೂ ಸೊಗಸೆನಿಸುತ್ತಾ ಪ್ರೀತಿ ಉಕ್ಕಿಸುತ್ತಿತ್ತು.

ಮಕ್ಳು ಹೇಗೆ ಹುಟ್ತಾರೆ ಅಂತ ಕೇಳ್ದೆ ಮಿಸ್. ಮೊದ್ಲು ಅಮ್ಮ ನನ್ ಪ್ರಶ್ನೆ ಕೇಳಿಸ್ಕೊಳ್ಳೇ ಇಲ್ಲಾ. ನಾನು ಬಿಡ್ತೀನಾ??.. ಅಮ್ಮನ ಸೀರೆ ಜಗ್ಗಿ ಮತ್ತೆ ಮತ್ತೆ ಕೇಳ್ದೆ ಮಿಸ್. ಅದಕ್ಕೆ "ನಡೀ ಆಚೆ. ಇನ್ನೊಂದ್ಸಲ ಕೇಳಿದ್ರೆ ಬಾರಿಸಿ ಬಿಡ್ತೀನಿ" ಅಂದ್ರು. "ನಾನು ಯಾಕೆ ಕೇಳ್ಬಾರ್ದು?? ಮಕ್ಳು ಹೇಗೆ ಹುಟ್ತಾರೆ ನೀನು ಹೇಳ್ಲೇ ಬೇಕು" ಅಂತ ಹಠ ಹಿಡ್ದೆ ಮಿಸ್., ಸ್ಕೂಲ್ಗೆ ಹೊತ್ತಾಗ್ತಿದೆ ಹೊರಡೇ. ಅಂತ ಬೆನ್ನಿಗೆ ಜೋರಾಗಿ ಗುದ್ದಿದ್ರು ಮಿಸ್. ನಂಗೆ ಸಿಟ್ ಬಂದು, "ನಿಂಗೇನೂ ಗೊತ್ತಿಲ್ಲ ಅದಕ್ಕೆ ಹೊಡಿತೀಯ ನಮ್ಮ ನಾಗರತ್ನಾ ಮಿಸ್ಗೆ ಕೇಳ್ತೀನಿ. ಅವರ್ಗೆ ಎಲ್ಲಾ ಗೊತ್ತಿರುತ್ತೆ ಅವ್ರು ಮಕ್ಳುಹೇಗೆ ಹುಟ್ತಾರೆ ಅಂತ ಹೇಳೇ ಹೇಳ್ತಾರೆ" ಅಂದೆ ಮಿಸ್.

ಅದಕ್ಕೆ *"ನಾಚಿಕೆಟ್ಟೋಳೆ ನಿಮ್ಮ ಮಿಸ್ಗೆ ಹಾಗಂತ ಕೇಳಿ ನಮ್ಮ ಮರ್ಯಾದೆ ಕಳೀಬೇಡ. ಹುಷಾರ್" ಅಂತ ಕೆನ್ನೆಗೇ ಟಪಾರನೆ ಹೊಡೆದು ಬಿಟ್ರು ಮಿಸ್. ನಿಮಗೆಲ್ಲಾ ಗೊತ್ತಿರುತ್ತೆ ನೀವೇ ಹೇಳಿ ಮಿಸ್* ಎಂದು ಇಷ್ಟನ್ನು ನಡು ನಡುವೆ ಬಿಕ್ಕುತ್ತಾ ಹೇಳಿದಳು.

ಕೇಳಿ ನನ್ನ ಎದೆ ಧಸಕ್ಕೆಂದಿತು. *ಆಗ ನಾನಿನ್ನೂ ಅವಿವಾಹಿತೆ*. ಅದು ೭೦ರ ದಶಕದ ಕಡೆಯ ಭಾಗ. ನಾನು ಸಣ್ಣ ಊರಿನ ಮಧ್ಯಮವರ್ಗ ಕುಟುಂಬದ ಹೆಣ್ಣು ಮಗಳು. ಸತ್ಯವಾಗಿಯೂ ಹೇಳಬೇಕೆಂದರೆ ನನಗೇ ವೈವಾಹಿಕ ಜೀವನ ಇತ್ಯಾದಿಗಳ ಬಗ್ಗೆ ಏನೂ ತಿಳುವಳಿಕೆಯೇ ಇರಲಿಲ್ಲ ಎಂದರೂ ನಡೆದೀತು. ಚಿಕ್ಕವಯಸ್ಸಿನಿಂದ ಆಟೋಟ, ಹಾಡು, ಚರ್ಚಾಸ್ಪರ್ಧೆ, ಚಿತ್ರಕಲೆ, ತೋಚುತ್ತಿದ್ದ ಸಾಹಿತ್ಯ ರಚನೆ ; ಸಮವಯಸ್ಕರು, ಚಿಕ್ಕ ಮಕ್ಕಳು ಇವರನ್ನು ಗುಂಪುಗೂಡಿಸಿಕೊಂಡು ಕಥೆ ಹೇಳೋದು, ಮಕ್ಕಳಿಗೆ ಹಾಡು ಕಲಿಸೋದು, ನಾಟಕ ರಚಿಸಿ ಮಾಡಿಸೋದು, ಕರಕುಶಲವಸ್ತುಗಳ ತಯಾರಿಕೆ ಇತ್ಯಾದಿ ಇತ್ಯಾದಿ ಇತ್ಯಾದಿ.... ಉಪಾಧ್ಯಾಯಿನಿಯಾದ ಮೇಲೆ ಇವುಗಳ ಜೊತೆಗೆ ಪಾಠ ಪ್ರವಚನ ಇದರಲ್ಲಿಯೇ ಮುಳುಗಿದ್ದವಳು.

ನನಗೇ ಸರಿಯಾದ ಜ್ಞಾನವಿರದ ನಾನು ಅದನ್ನು ಎಲ್ಲಿಂದ ಯಾರಿಂದ ಹೇಗೆ ತಿಳಿದುಕೊಳ್ಳಲಿ. ಹೇಗೆ ಹೇಳಲಿ? ತಲೆ ಗಿಮ್ಮೆನ್ನತೊಡಗಿತು. ಆದರೆ ಅಪಾರವಾದ ಅಸ್ಖಲಿತ ನಂಬಿಕೆಯಿಂದ ಆ ಬಾಲೆ ಕೇಳುತ್ತಿರುವಾಗ ನಾನೂ ಅವರಮ್ಮನಂತೆ ಗದರಿಸಿ ಅಥವಾ ಏಟು ಬಿಗಿದು ಬಾಯಿ ಮುಚ್ಚಿಸಲು ಸಾಧ್ಯವೇ? ಹಾಗೆ ಮಾಡಿದರೆ ಮಗುವಿನ

ಮನಸ್ಸು ಒಡೆದು ಹೋಗುವುದಿಲ್ಲವೇ? ಹೊಡೆದು ಹೆದರಿಸಿದ ತಕ್ಷಣ ಪ್ರಶ್ನೆ ಅಲ್ಲಿಗೇ ಸತ್ತುಹೋಗುತ್ತದೆಯೇ? ಮುಗ್ಧ ಬಾಲೆ ಛಲ ಬಿಡದೆ ಇನ್ಯಾರನ್ನೋ ಕೇಳದಿರುತ್ತಾಳೆಯೇ????

ನನ್ನನ್ನು, ಅವಿವಾಹಿತಳನ್ನು ಇವಳು ಇದೇನು ಕೇಳಿಬಿಟ್ಟಳು!!?? ವಿವಾಹಿತರಿಗೂ ಉತ್ತರಿಸಲು ಮುಜುಗರವಾಗಬಹುದಾದ ಪ್ರಶ್ನೆಗೆ ನಾನೇನು ಹೇಳಬಹುದು!??? ಭಯವಾಯಿತು!.

ಸಧ್ಯಕ್ಕೆ ಹೇಗಾದರೂ ಸಮಾಧಾನ ಮಾಡಿ, ನಿಧಾನವಾಗಿ ಉತ್ತರಿಸುವೆನೆಂಬ ಭರವಸೆ ಕೊಟ್ಟು ಅವಳ ಜಾಗಕ್ಕೆ ಕಳಿಸುವುದು. ಬೀಸುವ ದೊಣ್ಣೆ ತಲೆ ತಪ್ಪಿದರೆ ಸಾವಿರ ವರ್ಷ ಆಯುಸ್ಸು ತಾನೇ? ಆಮೇಲೆ ನೋಡೋಣ. ಕ್ರಮೇಣ ಮರೆಯಲೂ ಬಹುದು ಎನಿಸಿ *ಆಯಿತು ಪುಟ್ಟಿ ಹೇಳ್ತೀನಿ. ನೋಡಿಲ್ಲಿ ಎಷ್ಟೊಂದು ನೋಟ್ ಬುಕ್ ಕರೆಕ್ಷನ್ ಮಾಡೋದು ಇದೆ. ಈಗ ನಂಗೆ ಟೈಮಾಗೋದಿಲ್ಲ ಅಲ್ವಾ?. ನಿಧಾನವಾಗಿ ಹೇಳ್ತೀನಿ. ನಿನ್ನ ಜಾಗಕ್ಕೆ ಹೋಗು ಮರಿ, ಎಂದು ರಮಿಸಿ ಕಳಿಸಿದೆ.

ಕ್ರಮೇಣ ತನ್ನ ಪ್ರಶ್ನೆಯನ್ನೇ ಮರೆಯಬಹುದು, ಮರೆಯಲಿ ಎಂಬ ನನ್ನ ನಿರೀಕ್ಷೆ ಅಪೇಕ್ಷೆ ಎರಡೂ ಹುಸಿಯಾಯಿತು

ತನ್ನ ಪ್ರಶ್ನೆಗೆ ಉತ್ತರ ಪಡೆಯಲೇಬೇಕೆಂದು ಪಟ್ಟು ಹಿಡಿದವಳಂತೆ ದಿನಾ ಕೇಳತೊಡಗಿದಳು.

ನಾನೂ ಸಬೂಬುಗಳನ್ನು ಹುಡುಕಿ ಹುಡುಕಿ ಉತ್ತರಿಸಬೇಕಾದ ಸಂದಿಗ್ಧ ಘಳಿಗೆಯನ್ನು ಮುಂದೂಡುತ್ತಾ ಬರುತ್ತಿದ್ದೆ.

ಹೌದು. ನಾನಾದರೂ ಎಲ್ಲಿಂದ ಯಾರಿಂದ ತಿಳಿದುಕೊಳ್ಳಲಿ???. ವಿವಾಹಿತರು ಬೇಕಾದಷ್ಟು ಬಂಧುಗಳು ಗೆಳತಿಯರಿದ್ದರೂ ಅವರನ್ನು ಕೇಳಲು ಸಾಧ್ಯವೇ???

ಬಸ್ ಸ್ಟಾಂಡಿನ ಬುಕ್ ಸ್ಟಾಲ್ನಲ್ಲಿ ನಾವು ಕೊಳ್ಳಬಹುದಾದ ಹಲವಾರು ವೈವಿಧಮಯ ಪುಸ್ತಕಗಳ ಜೊತೆ ಲೈಂಗಿಕ ಸಾಹಿತ್ಯದ ಪುಸ್ತಕಗಳೂ ಇರುತ್ತಿದ್ದರೂ ಮಧ್ಯಮವರ್ಗದ ಮನೆಯ ಯುವತಿ, ಅದೂ ಮಕ್ಕಳಿಗೆ ಪಾಠ ಕಲಿಸುವ ಶಿಕ್ಷಕಿ ಅಂತಹ ಪುಸ್ತಕಗಳನ್ನು ಕೊಳ್ಳುವುದಿರಲಿ, ಆ ಕಾಲದಲ್ಲಿ ಹರಿಹರದಂತಹ ಅತೀ ಪುಟ್ಟ ಊರಿನಲ್ಲಿ ಅಂತಹ ಪುಸ್ತಕಗಳ ಮೇಲೆ ಕಣ್ಣು ಹಾಯಿಸುವುದೂ ನಮಗೆ ಸಾಧ್ಯವಿರಲಿಲ್ಲ. ಹಾಗಾದರೆ ಏನು ಮಾಡಲಿ???

ನನಗೆ ಗೊತ್ತಿದ್ದ ಹೈಸ್ಕೂಲು ವಿದ್ಯಾರ್ಥಿಗಳಿಂದ ಅವರ ಜೀವ ಶಾಸ್ತ್ರದ ಪಠ್ಯ ಪುಸ್ತಕಗಳನ್ನು ಪಡೆದು ಕಣ್ಣಾಡಿಸಿದೆ. ಪ್ರಯೋಜನವೆನಿಸಲಿಲ್ಲ.

ಪುಟ್ಟ ಬಾಲೆಯ ಕುತೂಹಲದ ಪ್ರಶ್ನೆ ಉತ್ತರಕ್ಕಾಗಿ ಪಟ್ಟು ಹಿಡಿದು ಕೂತಿತ್ತು.

ತನ್ನ ಅಚ್ಚುಮೆಚ್ಚಿನ ನಾಗರತ್ನ ಮಿಸ್ ಖಂಡಿತಾ ಉತ್ತರ ಹೇಳುತ್ತಾರೆ ಎಂಬ ಅತೀವ ವಿಶ್ವಾಸದಿಂದ ಕಾಯುತ್ತಲೇ ಇದ್ದಳು.

ನನಗೂ ದಿಕ್ಕು ತೋಚದ ಪರಿಸ್ಥಿತಿ... ಅವಳ ಪ್ರಶ್ನೆ ನನ್ನ ನಿದ್ದೆಗೆಡಿಸುತ್ತಿತ್ತು.

ಕಡೆಗೆ ಒಂದು ದಿನ ದಾವಣಗೆರೆಯ ಮೆಡಿಕಲ್ ಕಾಲೇಜಿಗೆ ಹೋದೆ. ಅಂತೂ ಇಂತೂ ಒಬ್ಬ ಸೀನಿಯರ್ ಹುಡುಗಿಯ ಪರಿಚಯ ಮಾಡಿಕೊಂಡು ಬಹಳ ಸಂಕೋಚದಿಂದ ನನ್ನ ಸಮಸ್ಯೆ ತಿಳಿಸಿದೆ. ಆಕೆ ಮೊದಲಿಗೆ

ಗೊಳ್ಳೆಂದು ಜೋರಾಗಿ ನಕ್ಕು ಬಿಟ್ಟರೂ, ಬಹಳ ಸಹೃದಯತೆಯಿಂದ ನನ್ನ ಸಮಸ್ಯೆ ಬಗೆಹರಿಸುವಂತೆ ಮೆಡಿಕಲ್ ಪುಸ್ತಕ ತೋರಿಸಿ ವಿವರಿಸುತ್ತಿದ್ದರೆ ನಾನು ಸಂಕೋಚದಿಂದ ಮುದುಡಿ ಹೋಗುತ್ತಿದ್ದೆ.

ಆ ಬಾಲೆಯ ಕುತೂಹಲದ ಪ್ರಶ್ನೆಗೆ ಉತ್ತರವನ್ನಂತೂ ದೊರಕಿಸಿಕೊಳ್ಳುವಲ್ಲಿ ಯಶಸ್ವಿಯಾಗಿದ್ದೆ.

ಆದರೆ ಆದರೆ ಆದರೆ ... ಆ ಮಗುವಿನ ಕುತೂಹಲ ತಣಿಸಿ ಕೆಟ್ಟ ಕುತೂಹಲ ಮೂಡದಂತೆ ಇದನ್ನು ನಿಭಾಯಿಸುವ ಪರಿ ಹೇಗೆ???

ವಿಜ್ಞಾನ ಗಣಿತದ ಶಿಕ್ಷಕಿಯಾಗಿದ್ದ ನನಗೀಗ ಅವಳ ಪ್ರಶ್ನೆಗೆ ಶುದ್ಧ ವೈಜ್ಞಾನಿಕವಾಗಿ ಉತ್ತರಿಸುವ ಮಹತ್ತರವಾದ ಮತ್ತು ಅತ್ಯಂತ ಕಠಿಣವಾದ ಜವಾಬ್ದಾರಿ ಇತ್ತು.

ಬಹಳ ಬಹಳ ಯೋಚಿಸಿದೆ. ಕಡೆಗೆ ಒಂದೆರಡು ದಿನ ಹೇಗೆ ಹೇಳಬೇಕು ಎಂಬುದನ್ನು ಕೂಲಂಕುಷವಾಗಿ ರಿಹರ್ಸಲ್ ಮಾಡಿಕೊಂಡೆ. ಅವಳಿಂದ ಮತ್ತೆ ಬರಬಹುದಾದ ಪ್ರಶ್ನೆಗಳನ್ನೂ ಊಹಿಸಿಕೊಂಡು ಅವಕ್ಕೂ ಉತ್ತರ ಸಿದ್ಧ ಮಾಡಿಕೊಂಡೆ.

ಅಂತೂ ಇಂತೂ ಆ ಪುಟ್ಟ ಜಿಜ್ಞಾಸುವಿನ ಪ್ರಶ್ನೆಗೆ ತೃಪ್ತಿಯಾಗುವಂತೆ ಸೂಕ್ಷ್ಮದಲ್ಲಿಯೇ ಆದರೆ ಮತ್ತೆ ಹೊಸ ಪ್ರಶ್ನೆಗಳೇಳದಂತೆ ಉತ್ತರಿಸುವಲ್ಲಿ ಜಯಶೀಲಳಾಗಿದ್ದೆ.

ಹೌದಾ.. ಮೀಸ್?!!! ನಂಗೊತ್ತೇ...ಇರ್ಲಿಲ್ಲಾ* ಎಂದು ಮುಖವನ್ನೇ ಆಶ್ಚರ್ಯಸೂಚಕ ಚಿನ್ಹೆಯಾಗಿಸಿ ಕಣ್ಣುಗಳನ್ನು ಕಮಲದಂತೆ ಅರಳಿಸಿ ಅವಳು ಮುಗ್ಧತೆಯ ಪರಾಕಾಷ್ಠೆಯಿಂದ ನುಡಿದಾಗ ಉಕ್ಕಿ ಬಂದ ನಗುವನ್ನು ತಡೆಯಲು ಸಾಧ್ಯವಿತ್ತೇ??

ಮಿಸ್, ನೀವು ತುಂಬಾ ಒಳ್ಳೋರು, I love you miss ಎಂದು ಆ ಬಾಲೆ ನನ್ನನ್ನು ಅಪ್ಪಿ ಕೆನ್ನೆಗೆ ಹೂ ಮುತ್ತನ್ನಿಕ್ಕಿದಾಗ.......

ಅತ್ಯಂತ ಕಠಿಣವಾದೊಂದು ಪರೀಕ್ಷೆಯಲ್ಲಿ ತೇರ್ಗಡೆಯಾದ ಧನ್ಯತೆಯ ನಿರಾಳದ ನಿಟ್ಟುಸಿರು ಬಿಟ್ಟೆ.

ಮಹಿಳೆಯರಿಗಾಗಿ ಉಳಿತಾಯ ಮತ್ತು ಹೂಡಿಕೆ ಸಲಹೆಗಳು. - ಶ್ರೀಧರ ಬಾಣಾವರ

ಸ್ವಂತ ಆದಾಯ ಹೊಂದಿರುವ ಅಥವ ಹೊಂದಿರದ ಆದರೆ ಕುಟುಂಬ ನಿರ್ವಹಣೆಯಲ್ಲಿ ಪ್ರಮುಖ ಪಾತ್ರವಹಿಸುತ್ತಿರುವ ಮಹಿಳೆಯರಲ್ಲರೂ ಹಣಕಾಸಿನ ನಿರ್ವಹಣೆಯಲ್ಲಿ ಜವಾಬ್ದಾರಿಯುತ ಪಾತ್ರ ವಹಿಸುವುದು ಅಗತ್ಯವಾಗಿದೆ ಹಾಗು ಅದು ಕುಟುಂಬದ ದೀರ್ಘಕಾಲಿಕ ಹಣಕಾಸು ನಿರ್ವಹಣೆಗೆ ಅತ್ಯಂತ ಅಗತ್ಯವಾಗಿದೆ. ದಿನವಹಿ, ವಾರ, ಮಾಸಿಕ ಹಾಗೂ ವಾರ್ಷಿಕ ಖರ್ಚು ನಿರ್ವಹಣೆಯಲ್ಲಿ ಮಹಿಳೆಯ ಪಾತ್ರ ಪ್ರಮುಖವಾಗಿದ್ದರೂ ಆಕ ಕುಟುಂಬದ ದೀರ್ಘ ಕಾಲಿಕ ಹಣಕಾಸು ಯೋಜನೆಯಬಗ್ಗೆ ಸಹಾ ಗಮನವಹಿಸುವುದು ಅನಿವಾರ್ಯವಾಗುತ್ತದೆ. ಉಳಿಸಿದ ಒಂದೊಂದು ರೂಪಾಯಿಯ ಹೊಸ ಗಳಿಕೆ ಎಂದು ಪರಿಗಣಿಸಬೇಕು. ಕುಟುಂಬಕ್ಕೆ ಸಂಬಂಧಿಸಿದ ಬ್ಯಾಂಕಿಂಗ್ ವ್ಯವಹಾರ ಸ್ವತಂತ್ರವಾಗಿ ಪ್ರತಿ ಮಹಿಳೆಯೂ ಮಾಡಲೇಬೇಕು, ಪತ್ರಿಕೆ, ನಿಯತಕಾಲಿಕ ಹಾಗೂ ವಾಹಿನಿಗಳಲ್ಲಿ ಬರುವ ನಂಬಲರ್ಹವಾದ ಆರ್ಥಿಕ ವಿಷಯಗಳ ಬಗೆಗಿನ ಲೇಖನ/ಮಂಡನೆಗಳನ್ನು ಸಾಧ್ಯವಾದಷ್ಟೂ ಗಮನಿಸಬೇಕು. ಹಣದುಬ್ಬರ, ಉಳಿತಾಯ ವಿಮೆ ಇವುಗಳ ಬಗ್ಗೆ ಸರಳ ವಿಷಯಗಳನ್ನು ತಿಳಿದುಕೊಳ್ಳುವುದು ಸಾಧಾರಣ ವಿದ್ಯಾವಂತ ಮಹಿಳೆಯರಿಗೆ ಕಷ್ಟವಾಗಲಾರದು.

ಮನೆಯ ಖರ್ಚು ವೆಚ್ಚಗಳ ಸರಳ ದಾಖಲೆ ಅವಶ್ಯಕ. ದುಡಿಯುವ ಕೈ ಬೇರೆ ಆಗಿದ್ದರೂ ಕುಟುಂಬದ ಆದಾಯದ ಮೂಲಗಳು, ಕುಟುಂಬದ ಹೊರಗಿನ ಖರ್ಚುಗಳೇನಾದರೂ ಇದ್ದಲ್ಲಿ ಅವುಗಳ ಬಗ್ಗೆ ಮಾಹಿತಿ, ಆಸ್ತಿ ಜವಾಬ್ದಾರಿಗಳ ಸ್ಥೂಲ ಪರಿಚಯ ಗೃಹಿಣಿಯಾದವಳಿಗೆ ಇರಲೇಬೇಕು. ಎಲ್ಲಾ ಹೂಡಿಕೆಗಳ ಬಗ್ಗೆ ಇರುವ ದಾಖಲೆಗಳನ್ನು ವ್ಯವಸ್ತಿತವಾಗಿ ಇಟ್ಟುಕೊಳ್ಳುವುದರಲ್ಲಿ ಕುಟುಂಬಸ್ಥ ಮಹಿಳೆಯರು ಸಹಕರಿಸಬೇಕು. ಆರೋಗ್ಯ ವಿಮೆ, ಜೀವ ವಿಮೆ ಇವುಗಳು ಕುಟುಂಬದ ನೆರವಿಗೆ ಬರುವ ಆಕರಗಳಾಗಿರುವುದರಿಂದ ಅವುಗಳ ಬಗ್ಗೆ ಹೂಡಿಕೆ ಮಾಡುವ ಬಗ್ಗೆ ಕುಟುಂಬದ ದುಡಿಯುವ ವ್ಯಕ್ತಿಗೆ ಮನದಟ್ಟು ಮಾಡಿಸಿ ಅಂತಹ ಪಾಲಿಸಿಗಳನ್ನು ಅವಶ್ಯಕತೆಗನುಗುಣವಾಗಿ ಮಾಡಿಸುವಲ್ಲಿ ಹಾಗೂ ಚಾಲ್ತಿಯಲ್ಲಿಟ್ಟುಕೊಳ್ಳುವಲ್ಲಿ ಪ್ರಮುಖ ಪಾತ್ರ ವಹಿಸಬೇಕು. ಏಕಾಂಗಿ ಮಹಿಳೆಯರೂ ಸಹ ತಮ್ಮ ಹಣ ಕಾಸಿನ ವ್ಯವಹಾರಗಳ ಬಗ್ಗೆ ಸೂಕ್ತ ದಾಖಲೆಗಳನ್ನು ಲಿಖಿತ ರೂಪದಲ್ಲಿ ಇರಿಸಿರಬೇಕು ಮತ್ತು ಅವುಗಳ ವಿಲೇವಾರಿಯ ಬಗ್ಗೆ ಸೂಕ್ತ ಸೂಚನೆಗಳನ್ನು ನಂಬಲರ್ಹರಾದವರ ಮೂಲಕ ದಾಖಲಿಸಿಟ್ಟಿರಬೇಕು.

ನಮ್ಮ ಭಾರತೀಯ ಸಂಸ್ಕೃತಿಯಲ್ಲಿ ಪ್ರಾಚೀನ ಕಾಲದಿಂದಲೂ ಕಂಡುಬರುವ ಗೃಹಿಣಿಯ ಸಾಸಿವ ಡಬ್ಬಿಯ ಆಪದ್ಧನ ಉಳಿತಾಯ ಪದ್ಧತಿ ಬಹುಷಃ ವಿಶ್ವದ ಯಾವ ಗಂಡುಜಾತಿಗಳಲ್ಲೂ ಕಂಡುಬಂದಿಲ್ಲ. ತಿಂಗಳ ಆದಾಯದ ವಿಲೇವಾರಿಯಲ್ಲಿ ಉಳಿತಾಯಕ್ಕೆ ನಿರ್ದಿಷ್ಟ ಭಾಗ (ಶೇ. ೧೦ ರಿಂದ ೨೦) ನಿಗದಿಪಡಿಸಿ ಅದನ್ನು ಆದ್ಯತೆಯ ಮೇರೆಗೆ ಸೂಕ್ತ ಹೂಡಿಕೆಯಲ್ಲಿ ತೊಡಗಿಸುವ ಜವಾಬ್ದಾರಿ ಮಹಿಳಯದೇ ಆಗಿರಲಿ, ಸ್ವಂತ ಆದಾಯವಿರುವ ಮಹಿಳೆಯರು ತಮ್ಮ ಆದಾಯದ ಹೆಚ್ಚು ಪಾಲನ್ನೂ ಜೊತೆಗೆ ತಮಗೆ ಬರುವ ಆದಾಯತರಿಗೆ ಹಿಂಪಾವತಿ, ಪೋಷಕರಿಂದ, ಸಮಾರಂಭಗಳಲ್ಲಿ ಬಂದ ಹಣರೂಪದ ಉಡುಗೊರೆ ಮುಂತಾದವುಗಳನ್ನು ಬೇರೆ ಏತಕ್ಕೂ ಬಳಸದೇ ಉಳಿತಾಯದ ಹೂಡಿಕೆಗಳಲ್ಲಿ ತೊಡಗಿಸಬೇಕು. ಸ್ವಂತ ಆದಾಯವಿಲ್ಲದ ಗೃಹಿಣಿಯರು ತಮ್ಮ ಖರ್ಚನ್ನು ನಿಯಂತ್ರಣದಲ್ಲಿಟ್ಟುಕೊಂಡು ಸಾಧ್ಯವಾದಷ್ಟೂ ಉಳಿತಾಯ ಮಾಡುವ ಪ್ರಯತ್ನ ಮಾಡಬೇಕುಹೂಡಿಕೆಗಳನ್ನು ಎಚ್ಚರಿಕೆಯಿಂದ ಯಾವುದೇ ನಷ್ಟಸಂಭಾವ್ಯತೆಗೆ ಎಡೆಗೊಡದ ಕಡೆಗಳಲ್ಲಿ ಮಾಡಬೇಕು. ಹೂಡಿಕೆಗಳ ಆಯ್ಕೆಯಲ್ಲಿಯೇ ಕಾಲಕಳೆಯಬಾರದು. ಸೂಕ್ತ ವ್ಯಕ್ತಿಗಳಿಂದ ಹೂಡಿಕೆಗಳ ಬಗ್ಗೆ ಮಾಹಿತಿ ಪಡೆದುಕೊಳ್ಳುವುದು ಅಪೇಕ್ಷಣೀಯ. ಎಲ್ಲಾ ಮಹಿಳೆಯರೂ ತುರ್ತು ನಿಧಿಯಾಗಿ ತಮ್ಮ ನಿಯಂತ್ರಣದಲ್ಲಿ ಸ್ವಲ್ಪ ಮೊತ್ತವನ್ನು ಇಟ್ಟುಕೊಂಡಿರಬೇಕು. ಗ್ರಣಿಯಾದರೂ ತನ್ನದೂ ಆದ ಇಳಿವಯಸ್ಸಿನ ಜೀವನವನ್ನು ದೃಷ್ಟಿಯಲ್ಲಿಟ್ಟುಕೊಂಡು ದೀರ್ಘಕಾಲದ ಸಂಪತ್ತು ಕ್ರೋಡೀಕರಿಸುವಂತಹ ಯೋಜನೆಯನ್ನು ರೂಪಿಸಿಕೊಂಡು ಸೂಕ್ತವಾದ ಉಳಿತಾಯ/ ಹೂಡಿಕೆಯನ್ನು ಮಾಡುವುದು ಒಳ್ಳೆಯದು.

ನಿರಂತರ ಆದಾಯ ಮೂಲಗಳು ಚಾಲ್ತಿಯಲ್ಲಿರುವಾಗ ಹಣಕಾಸಿನ ನಿರ್ವಹಣೆ ಒಂದು ರೀತಿಯದಾದರೆ, ಇಳಿ ವಯಸ್ಸಿನಲ್ಲಿ ನಿವೃತ್ತಿ ಅಥವಾ ಆರ್ಥಿಕ

ನಿರಂತರ ಆದಾಯ ಮೂಲಗಳು ಚಾಲ್ತಿಯಲ್ಲಿರುವಾಗ ಹಣಕಾಸಿನ ನಿರ್ವಹಣೆ ಒಂದು ರೀತಿಯದಾದರೆ, ಇಳಿ ವಯಸ್ಸಿನಲ್ಲಿ ನಿವೃತ್ತಿ ಅಥವಾ ಆರ್ಥಿಕ ವ್ಯವಹಾರವನ್ನು ಕೊನೆಗೊಳಿಸಿದ ನಂತರದ ಕಾಲ ಅಂದರೆ ನಿರಂತರ ಆದಾಯ ಗಳಿಕೆ ಇಲ್ಲವಾಗುವುದು, ಹೆಚ್ಚಿನ ಸಂಪತ್ತು ಗಳಿಸುವ ಮಾರ್ಗಗಳು ಇಲ್ಲವಾಗುವುದು. ಹೊಸ ಆದಾಯದ ಮಾರ್ಗಗಳು ಇಲ್ಲವಾಗುವುದು ಮುಂತಾದ ಸಂದರ್ಭದಲ್ಲಿ ಹಣಕಾಸು ನಿರ್ವಹಣೆಯಲ್ಲಿ ಮಹಿಳೆಯ ಪಾತ್ರ ಇನ್ನೂ ಹೆಚ್ಚಿನದಾಗುತ್ತದೆ.

ಈ ಸ್ಥಿತಿಯಲ್ಲಿ ಸುದೀರ್ಘ ಕಾಲದ ದುಡಿಮೆಯಿಂದ ಕ್ರೋಢೀಕರಿಸಿದ ಸಂಪತ್ತಿನಿಂದ ಮುಂದಿನ ಜೀವನ ನಿರ್ವಹಣೆ ಮಾಡುವ ಸಂದರ್ಭದಲ್ಲಿ ಬರಬಹುದಾದ ಪಿಂಚಣಿ , ಬಡ್ಡಿ, ಬಾಡಿಗೆ ಆದಾಯಗಳು ಸಹಾ ಸೇರುತ್ತವೆ. ಹಲವೊಮ್ಮೆ ದುಡಿಮೆಯ ಕಾಲದಲ್ಲಿ ಜೀವನದ ಗುರಿಗಳಿಗೆ ಅನುಗುಣವಾಗಿ ಉಳಿತಾಯ ಮಾಡಿ ಬೆಳೆಸದೇ ಇರುವ ಪರಿಸ್ಥಿತಿಯಲ್ಲಿ ಬೇಕಾಗುವ ಮೂಲ ಬಂಡವಾಳದಲ್ಲಿ ಕೊರತೆ ಸಹಾ ಕಾಡಬಹುದು. ಈ ವಯಸ್ಸಿನಲ್ಲಿ ಸಹ ಉಳಿದುಕೊಂಡಿರಬಹುದಾದ ಜವಾಬ್ದಾರಿಗಳನ್ನೂ ಪೂರೈಸಬೇಕಾದ ಸಂದರ್ಭದಲ್ಲಿ ಇದು

ಕ್ರೋಢೀಕೃತ ಸಂಪತ್ತಿನ ಒಂದು ಭಾಗವನ್ನು ತಿಂದು ಹಾಕಲೂ ಬಹುದು. ಮಕ್ಕಳ ಮದುವೆ, ತೀರಿಸಬೇಕಾದ ಸಾಲಗಳು, ಆಸ್ತಿಗಳ ರಿಪೇರಿ, ಪರಿವರ್ತನೆ, ಮಕ್ಕಳನ್ನು ದುಡಿಯುವ ಹಂತಕ್ಕೇರಿಸುವುದು ಇವು ಈ ವರ್ಗಕ್ಕೆ ಸೇರುವವಾಗಿವೆ. , ಇಂತಹ ಖರ್ಚುಗಳಿಂದಾಗಿ ಮುಂದಿನ ಜೀವನ ನಿರ್ವಹಣೆಗೆ ಬೇಕಾಗುವ ಸಂಪತ್ತಿನಲ್ಲಿ ಏರುಪೇರು ಹಾಗು ಅವುಗಳ ಸಮತೋಲನ ಸಾಧಿಸುವುದೇ ಒಂದು ಸವಾಲಾಗಬಹುದು.ಹಾಗಾಗಿ ಇರುವ ಸಂಪತ್ತನ್ನು ಚಾಕಚಕ್ಯತೆಯಿಂದ ಬಳಸಿಕೊಳ್ಳಬೇಕಾದ ಅನಿವಾರ್ಯತೆ ಈ ವಯಸ್ಸಿನಲ್ಲಿ ಉಂಟಾಗಬಹುದು.

ಇಲ್ಲಿ ಕರಣೀಶು ಮಂತ್ರಿಯಾಗಿ ನಿಮ್ಮ ಪಾತ್ರ ನಿರ್ವಹಿಸಿ, ಆದಾಯದ ಮಿತಿಯೊಳಗೆ ಜೀವನ ನಿರ್ವಹಣೆಗೆ ಮಿತವ್ಯಯದ ದಾರಿ ಆರಿಸಿಕೊಳ್ಳುವ ಅನಿವಾರ್ಯತೆ ಎದುರಾಗುತ್ತದೆ. ಇದು ಗೃಹಲಕ್ಷ್ಮಿಯಾಗಿ ನಿಮ್ಮಿಂದಲೇ ಸಾಧ್ಯ. ಸಾಧ್ಯವಾದಷ್ಟು ಕಡಿಮೆ ಖರ್ಚಿನಲ್ಲಿ ಜೀವನವನ್ನು ಅನುಭವಿಸುವ ಮಾರ್ಗ ಕಂಡುಕೊಳ್ಳಬೇಕಾಗುತ್ತದೆ ಇದರಲ್ಲಿ ಮಹಿಳೆಯಾಗಿ ನಿಮ್ಮ ಪಾತ್ರ ಪ್ರಮುಖವಾಗುತ್ತದೆ. ಈ ಸ್ಥಿತಿಯಲ್ಲಿ ಹಣದ ಕೊರತೆ ನಿವಾರಿಸುವ ಮಾರ್ಗಗಳು ಹಲವಾರು ಇವೆ. ಆದಾಯಕ್ಕೆ ಮೀರಿದ ಖರ್ಚು ಕೊರತೆಯನ್ನು ಸೃಷ್ಟಿಸುತ್ತದೆ. ಈಗ ಮೇಲೆ ಹೇಳಿದಂತೆ ಆದಾಯ ಹೆಚ್ಚಿಸಿಕೊಳ್ಳುವ ಮಾರ್ಗಗಳು ಮುಚ್ಚಿ ಹೋಗಿರಬಹುದು. ಹಾಗಾಗಿ ಖರ್ಚಿನ ನಿಯಂತ್ರಣವೊಂದೇ ದಾರಿ. ನಿಮ್ಮ ತಿಂಗಳ ಆದಾಯಕ್ಕನುಗುಣವಾಗಿ ನಿಮ್ಮ ಖರ್ಚಿನ ಪಟ್ಟಿ ಸಿದ್ಧಗೊಳಿಸಿಕೊಳ್ಳಬೇಕು. ಕೊರತೆ ಕಂಡು ಬಂದಲ್ಲಿ ಖರ್ಚಿನ ಪಟ್ಟಿಯನ್ನು ಪುನರ್ ಪರಿಶೀಲಿಸಿ ಅತಿ ಅವಶ್ಯಕವಾದ್ದನ್ನು ಮಾತ್ರಾ ಉಳಿಸಿಕೊಳ್ಳ ಬೇಕಾಗಬಹುದು. ಖರ್ಚುಗಳನ್ನು ಮಾಡಲೇ ಬೇಕಾದವು, ಮಾಡಬಹುದಾದುವು, ಮಾಡದಿದ್ದರೂ ನಡೆಯುವಂತಹವು ಎಂದು ವರ್ಗೀಕರಿಸಿಕೊಂಡರೆ ಈ ಕೆಲಸ ಸುಲಭವಾಗುತ್ತದೆ. ಆದಾಯದ ಕೊರತೆಯ ಪೂರಣಕ್ಕೆ ಅನುಪಯುಕ್ತ ಆಸ್ತಿಯನ್ನು ವಿಲೇವಾರಿ ಮಾಡಬಹುದೇ ಯೋಚಿಸಿ. ಇದರಿಂದ ನಿಮ್ಮ ಮೂಲ ಧನವನ್ನು ವೃದ್ಧಿಸಿಕೊಂಡು ಬಡ್ಡಿ ಆದಾಯ ಹೆಚ್ಚುವಂತೆ ಮಾಡಿಕೊಳ್ಳಬಹುದೇ? ಹಲವಾರು ವರ್ಷಗಳಿಂದ ಉಪಯೋಗಿಸದೇ ಬೀರುವಿನಲ್ಲೋ, ಬ್ಯಾಂಕ್ ಲಾಕರಿನಲ್ಲೋ ಇರುವ ನಿಮ್ಮದಾದ ಬೆಳ್ಳಿ ಚಿನ್ನದ ಸಾಮಾನುಗಳನ್ನು ಒಳ್ಳೆಯ ದರ ವಿರುವಾಗ ವಿಕ್ರಯಿಸಿ ಅವನ್ನು ಬಡ್ಡಿ ಗಳಿಸುವ ಗಂಟಾಗಿ ಪರಿವರ್ತಿಸಿ ಕೊಂಡು ನಿಮ್ಮ ಕುಟುಂಬ ನಿರ್ವಹಣೆಯಲ್ಲಿ ನಿಮ್ಮ ಪಾಲನ್ನು ಸಲ್ಲಿಸ ಬಹುದೇ ಯೋಚಿಸಿ. ಇದರಲ್ಲಿ ಮಹಿಳೆಯಾಗಿ ನಿಮ್ಮ ತ್ಯಾಗ ಹೆಚ್ಚಿನದಾಗುತ್ತದೆ. ಈ ರೀತಿಯ ವಸ್ತುಗಳ ಮೇಲೆ ಮಕ್ಕಳಿಗೆ ಮೋಹವಿದ್ದರೆ ಹಾಗೂ ಆರ್ಥಿಕವಾಗಿ ಶಕ್ಯರಾಗಿದ್ದರೆ ಅವರೇ ಅದರ ಮಾರುಕಟ್ಟೆ ಮೌಲ್ಯವನ್ನು ನಿಮಗೆ ಕೊಡಲಿ. ಯಾವ ಪರಿಸ್ಥಿತಿಯಲ್ಲಾದರೂ ಅದರ ಆರ್ಥಿಕ ಮೌಲ್ಯ ನಿಮ್ಮ ನಂತರ ಅವರಿಗೇ ಸೇರುತ್ತದೆ. ನೀವು ದುಬಾರಿ ಲಾಕರ್ ಬಾಡಿಗೆ ಕೊಡುವುದೂ ತಪ್ಪುತ್ತದೆ. ಅನಿರೀಕ್ಷಿತ ಖರ್ಚುಗಳಿಗಾಗಿ ಮೀಸಲಿಟ್ಟ ಹಣಕ್ಕೆ ಸಾದಾರಣ ಪರಿಸ್ಥಿತಿಯಲ್ಲಿ ಕೈಹಾಕಬೇಡಿ . ಮುಂದಿನ ಆದಾಯದಲ್ಲಿ ಸರಿತೂಗಿಸಬಲ್ಲಿರಾದರೆ ಸಣ್ಣಪುಟ್ಟ ಸಾಲದ ಮೊರೆಹೋಗಬಹುದು ಹಾಗೂ ಆ ಸಾಲವನ್ನು ಅಷ್ಟೇ ಪ್ರಾಮಾಣಿಕವಾಗಿ

ಸರಿತೂಗಿಸಬಲ್ಲಿರಾದರೆ ಸಣ್ಣಪುಟ್ಟ ಸಾಲದ ಮೊರೆಹೋಗಬಹುದು ಹಾಗೂ ಆ ಸಾಲವನ್ನು ಅಷ್ಟೇ ಪ್ರಾಮಾಣಿಕವಾಗಿ ಹಿಂದಿರುಗಿಸಿ.

ನಿಮ್ಮ ಸಂಪತ್ತು ನಿಮ್ಮ ಆಪತ್ಕಾಲದ ರಕ್ಷಕ ಹಾಗೂ ಅದರ ಮೇಲೆ ಜೀವಿತಾವಧಿಯವರೆಗೂ ಹಿರಿಯ ನಾಗರಿಕರಾದ ನಿಮ ಹಕ್ಕೇ ಇರಲಿ, ನಮ್ಮ ನಂತರವೇ ಅದರ ಹಕ್ಕು ಅದರ ವಾರಸುದಾರರಿಗೆ ದೊರಕಬೇಕು. ಯಾವುದೇ ಪರಿಸ್ಥಿತಿಯಲ್ಲಿ ನಿಮ್ಮ ಸಂಪತ್ತಿನ ಮೇಲಿನ ನಿಮ್ಮ ಹಿಡಿತವನ್ನು ಕಳೆದುಕೊಳ್ಳ ಬೇಡಿ. ಇದಕ್ಕೆ ಪರ್ಯಾಯ ಮಾರ್ಗಗಳು ಮರಣ ಪತ್ರ (ವಿಲ್) , ವಿಲ್ ಮಾಡುವುದು ಒಂದು ಸರಳ ಪ್ರಕ್ರಿಯೆ.

ಹೂಡಿಕೆಗಳ ಬಗ್ಗೆ ಎಚ್ಚರವಿರಲಿ. ಹೆಚ್ಚಿನ ಆದಾಯದ ಆಸೆಗೆ ಮರುಳಾಗಿ ತೊಂದರೆ ತಂದುಕೊಳ್ಳಬೇಡಿ. ಸಮರ್ಪಕ ಆದಾಂ ದ್ರವ್ಯತೆ, ಸುರಕ್ಷತೆ ಈ ಮೂರೂ ಪ್ರಮುಖ ಅಂಶಗಳನ್ನು ಗಮನದಲ್ಲಿಟ್ಟುಕೊಂಡು ಹೂಡಿಕೆಗಳನ್ನು ಆಯ್ದುಕೊಳ್ಳಿ. ಸುರಕ್ಷಿತ ಹೂಡಿಕೆಗಳಲ್ಲಿ ಯಾವಾಗಲೂ ಹೆಚ್ಚಿನ ಆದಾಯವನ್ನು ನಿರೀಕ್ಷಿಸಲಾಗುವುದಿಲ್ಲವೆಂಬ ತತ್ವದಲ್ಲಿ ನಂಬಿಕೆ ಇಡಿ, ಸರ್ಕಾರ ಸಹ ಹಿರಿಯ ನಾಗರಿಕರ ಸಲುವಾಗಿ ಹಲವಾರು

ಸುರಕ್ಷಿತ ಹೂಡಿಕೆಗಳನ್ನು ಜಾರಿಗೆ ತಂದಿದೆ. ಅವುಗಳ ಬಗ್ಗೆ ಮಾಹಿತಿ ಸುಲಭವಾಗಿ ದೊರಕುವುದರಿಂದ ಅವುಗಳ ಪ್ರಯೋಜನ ಪಡೆದುಕೊಳ್ಳಿ. ಆದಾಯ ತೆರಿಗೆ ನಿಯಮಗಳನ್ನು ಅರಿತುಕೊಳ್ಳಿ ಹಾಗೂ ಪಾಲಿಸಿರಿ, ಅವಶ್ಯಕತೆಗನುಗುಣವಾಗಿ ರಿಟರ್ನ್ ತುಂಬಿ, 15 H ಬಗ್ಗೆ ಸಂಪೂರ್ಣ ಮಾಹಿತಿ ಪಡೆದುಕೊಂಡು ಅದಕ್ಕೆ ಅರ್ಹರಾಗಿದ್ದಲ್ಲಿ ಪ್ರಯೋಜನ ಪಡೆದುಕೊಳ್ಳಿ.

ಒಟ್ಟಿನಲ್ಲಿ ಸದಾಕಾಲವೂ ಹಣಕಾಸು ಅದರ ಕಷ್ಟ ಕಾರ್ಪಣ್ಯಗಳ ಬಗ್ಗೆ ಯೋಚಿಸಿ ತಲೆ ಕೆಡಿಸಿ ಕೊಳ್ಳುವ ಬದಲು, ಎಲ್ಲವನ್ನೂ ವ್ಯವಸ್ಥಿತ ರೀತಿಯಲ್ಲಿ ಅಣಿಗೊಳಿಸಿ ಜೀವನದ ಇತರ ಮಧುರ ಅನುಭವಗಳನ್ನು ಸವಿಯುತ್ತಾ ನಿಮ್ಮ ಇಳಿವಯಸನ್ನು ಸಂತೋಷಮಯವಾಗಿ ಕಳೆಯುವುದು ನಿಮ್ಮ ಕೈಲಿದೆ.

ಆಧುನಿಕ ರೈತ - ಹೀಗೊಂದು ಸಂವಾದ - ವೆಂಕಟೇಶ್ ಕೆ ಆರ್ (ಮನೋಹಂಸ)

ನಾಗೇನಹಳ್ಳಿಯ ರಾಮೇಗೌಡ ೭೬ ವರ್ಷದ ಮುದುಕ....ಅಲ್ಲಲ್ಲ ..ಯುವಕ. ಅಲ್ಲೇ ಹುಟ್ಟಿ ಬೆಳದ ರಾಮೇಗೌಡ ತನ್ನ ಸಮವಯಸ್ಕರಲ್ಲಿ ಸುಮಾರು ಜನ ಊರಿನಲ್ಲಿದ್ದ ಹೊಲ ಮಾರಿ ತಮ್ಮ ಮಕ್ಕಳ ಜೊತೆ ಪಟ್ಟಣ ಸೇರಿರುವ ಹಿನ್ನೆಲೆಯಲ್ಲಿ ತಾನು ತನ್ನ ೧೦ ಎಕರೆ ಭೂಮಿ ಹಾಗೇ ಉಳಿಸಿಕೊಂಡು ಕೆಲಸಗಾರರಾದ ಗೋಪಿ ಹಾಗೂ ಸೀನನ ಸಹಾಯದಿಂದ ಕೃಷಿ ಮಾಡುತ್ತಿದ್ದಾನೆ.

ಅಲ್ಲೇ ಹೊಲಕ್ಕೆ ಬಂದು ಕೆಲಸದ ಮೇಲ್ವಿಚಾರಣೆ ಮಾಡುತ್ತಿದ್ದಾಗ ತನ್ನ ಪಕ್ಕದ ಹೊಲದಲ್ಲಿ ಯಾವುದೋ ಯುವಕ ಜೀನ್ಸ್ ಪ್ಯಾಂಟ್ ಹಾಕಿಕೊಂಡು ತನ್ನ ಕೆಲಸಗಾರರ ಜೊತೆ ಮಾತನಾಡುತ್ತಿದ್ದಾನೆ.

ನಗರದ ಒಬ್ಬ ಯುವಕನನ್ನು ಇದೀಗ ತನ್ನ ಹಳ್ಳಿಯಲ್ಲಿ ಹೊಸದಾಗಿ ನೋಡುತ್ತಿರುವ ರಾಮೇಗೌಡರಿಗೆ ಕುತೂಹಲ ಆಶ್ಚರ್ಯ ಎರಡೂ ಒಟ್ಟಿಗೇ ಉಂಟಾಗುತ್ತದೆ. ಅವನನ್ನು ಮಾತನಾಡಿಸುವ ಸಲುವಾಗಿ ಅವನ ಹತ್ತಿರ ಬರುತ್ತಾನೆ.

ಅವರ ಸಂಭಾಷಣೆ

ರಾಮೇಗೌಡ : " ಏನಪ್ಪಾ ...ಯಾರು ನೀವು ...ಈ ಮುಂಚೆ ಇಲ್ಲಿ ನೋಡೇ ಇಲ್ವಲ್ಲಾ..."

ಆ ಯುವಕ : " ನಮಸ್ತೆ.. ಸಾರ್ ನಾನು ಯಶವಂತ್ ಅಂತ..ಈ ಹೊಲವನ್ನು ಮೂರು ತಿಂಗಳ ಹಿಂದೆ ಕೊಂಡ್ಕೊಂಡೆ."

ರಾಮೇಗೌಡ : " ಓ ಹಂಗಾ...ಇದು ಸಿದ್ದೇಗೌಡ್ರು ಅವರ ಹೊಲ..."

ಯಶವಂತ್ : " ಹೌದು.. ಅವರ ಇಬ್ರು ಮಕ್ಕಳಿಂದ ಕೊಂಡ್ಕೊಂಡೆ.."

ರಾಮೇಗೌಡ : " ಓಹೋ... ಎಷ್ಟಕ್ಕೆ ತಗೊಂಡ್ರಿ... ನೀವು ಏನೂ ಅನ್ಕೊಳ್ದಿದ್ರೆ.."

ಯಶವಂತ್ (ನಗುತ್ತಾ) : " ಇಲ್ಲಾ ಪರವಾಗಿಲ್ಲ.. ೨೫ ಲಕ್ಷ "

ರಾಮೇಗೌಡ : "ಹೌದಾ...ಆಟೊಂದಾ... ಇರ್ಲಿ... ನಿಮ್ಮೂರು ಯಾವ್ದು..."

ಯಶವಂತ್ : " ಬೆಂಗಳೂರು... "

ರಾಮೇಗೌಡ : " ಓ... ಅಲ್ಲೇನಾ ನೀವು ಕೆಲಸ ಮಾಡೋದು..."

ಯಶವಂತ್ : " ಇಲ್ಲ... ನಾನು ಅಮೇರಿಕಾದಲ್ಲಿ ೧೦ ವರ್ಷ ಕೆಲಸ ಮಾಡಿ ಇದೀಗ ಕೆಲಸ ಬಿಟ್ಟು.. ಇದೀಗ ಸಾವಯವ ಕೃಷಿ ಮಾಡೋಣ ಅಂತ ಬಂದಿದೀನಿ "

ರಾಮೇಗೌಡ : " ಅಮೇರಿಕಾ ನಾ... ಅಲ್ಲಿ ಕೆಲಸ ಬಿಟ್ಟು ಇಲ್ಲಿ ಕೃಷಿ ಮಾಡಕ್ಕೆ ಬಂದಿದೀರಾ.. ಕೇಳಕ್ಕೆ ವಿಚಿತ್ರವಾಗಿದೆ "

ಯಶವಂತ್ : " ಯಾಕೆ ಸಾರ್ "

ರಾಮೇಗೌಡ : " ಅಲ್ಲಪ್ಪಾ... ಎಲ್ರೂ ಹಳ್ಳಿ ಬಿಟ್ಟು ಪಟ್ಟಣ...ಸೇರ್ತಾರೆ.. ಅದೇನೋ ಹೇಳ್ತಾರಲ್ಲಾ.. ಕೆಟ್ಟು ಪಟ್ಟಣ ಸೇರಿದ್ರು ಅಂತಾ.. ಇನ್ಕೆಲವ್ರು ನಮ್ಮ ದೇಸ ಬಿಟ್ಟು ವಿದೇಶಕ್ಕೆ ಹೋಯ್ತಾರೆ... " ನನ್ ಮೊಮ್ಮಗ ಒಬ್ಬ ಅಮೇರಿಕಾ ಗೆ ಹೋಗಿದ್ದಾನೆ.. ಅದೆಷ್ಟೋ ಲಕ್ಷ ಖರ್ಚಾಗುತ್ತದೆ ಅಂತಾರೆ.. ಅದಕ್ಕೇ ಅದನ್ನು ಸಂಪಾದಿಸದಕ್ಕೆ

ಅಲ್ಲೇ ಉಳ್ಕೊಂಡು ಬಿಡುತ್ತವೆ. ಅಂತದರಲ್ಲಿ ನೀನು ಅಮೇರಿಕಾ ಬಿಟ್ಟು ವಾಪಸ್ ಬಂದು ಇಲ್ಲಿ ಹಳ್ಳೀಲಿ ಕೃಷಿ ಮಾಡ್ಬೇಕು ಅಂತ ಇದ್ದೀಯಾ ಅಂದ್ರೆ ಆಶ್ಚರ್ಯ ಆಗ್ತಾ ಇದೆ"

ಯಶವಂತ್ : " ಆಶ್ಚರ್ಯ ಯಾಕೆ ಸಾರ್.. ಒಂದಷ್ಟು ದುಡ್ಡು ಸಂಪಾದನೆ ಮಾಡಿದ ಮೇಲೆ... ಬರೀ ದುಡ್ಡು ಮಾಡದೇನೇ ಜೀವನ ನಾ.. ಬೇರೆ ನಮ್ಮ ಸಂತೋಷಕ್ಕೆ ಮಾಡೋ ಕೆಲಸ ಏನೂ ಇಲ್ವಾ ಅನ್ನಿಸಿತು... ಕೃಷಿ ಮಾಡಿದರೆ ಖುಷಿ ಸಿಗುತ್ತದೆ.. ಮತ್ತೆ ಪ್ರಕೃತಿಗೆ ಹತ್ತಿರ ಆಗ್ತೀವಿ ಅನ್ನಿಸ್ತು.. ಅದಕ್ಕೇ ವಾಪಸ್ ಬಂದು ಬಿಟ್ಟೆ."

ರಾಮೇಗೌಡ : " ಭೇಷ್. ನಿನ್ನಂಥವರು ಬಹಳ ಅಪರೂಪ.. ಅಷ್ಟು ದುಡ್ಡು ಬರೋ ಕೆಲಸ ಬಿಟ್ಟು ಬಂದು ಕೃಷಿ ಮಾಡ್ಬೇಕು ಅಂತಿದ್ಯಲ್ಲಾ ಮೆಚ್ಚಲೇಬೇಕು "
ರಾಮೇಗೌಡ : "ಅದ್ಸರಿ... ಹೆಂಡ್ರು ಮಕ್ಳು"

ಯಶವಂತ್ : " ನನ್ನ ಹೆಂಡತಿ ಡಾಕ್ಟರ್. ಮಗ ೮ ವಯಸ್ಸು.. ಮಗಳು ೪ ವಯಸ್ಸು.

" ಹೆಂಡತಿಯೂ ಬರಕ್ಕೆ ಒಪ್ಪಿದ್ದಕ್ಕೆ ನಾನು ಈ ನಿರ್ಧಾರ ಮಾಡಿದ್ದು... ಅವಳು ಬೆಂಗಳೂರಿನಲ್ಲಿ ಕ್ಲಿನಿಕ್ ತೆಗೆದು ಇಲ್ಲಿ ಹಳ್ಳಿಯಲ್ಲಿಯೂ ವಾರದ ಕೊನೆಯಲ್ಲಿ ಬಂದು ಹೋಗುವ ಯೋಜನೆಯಿದೆ.

ರಾಮೇಗೌಡ : " ಬಹಳ ಒಳ್ಳೆಯದಪ್ಪ.. ಅದೇನೋ ಈಗಿನ ಕಾಲದ ಹುಡುಗರು... ಹುಡುಗೀರು ಅಮೆರಿಕಾ ಅಮೇರಿಕಾ ಅಂತ ಕುಣೀತವೆ.. ಅದೇ ಹಳ್ಳಿ ಹೈಕ್ಳು ಬೆಂಗಳೂರು ಅಂತ ಕುಣದಂಗೆ... ನಮ್ಮನೇನಲ್ಲೇ ಅವೆ.."

ರಾಮೇಗೌಡ ಮುಂದುವರೆಸುತ್ತಾ

" ಅಬ್ಬಬ್ಬಾ ಅವರ ಊಟನೋ... ವೇಷ ಭೂಷಣ ನೋ ದೇವರಿಗೇ ಪ್ರೀತಿ.. ಅದೇನೋ ಪಿಜ್ಜಾ ಅಂತೆ. ಬಗ್ಗರಾ ಅಂತೆ.."

ಆಗ ಯಶವಂತ್ ಮಧ್ಯೆ ಪ್ರವೇಶಿಸಿ

" ಅಯ್ಯೋ ಸಾರ್ ಅದು ಪಿಜ್ಜಾ ಬಗ್ಗರಾ ಅಲ್ಲ. ಪಿಟ್ಜಾ.. ಮತ್ತೆ ಬರ್ಗರ್..."

ರಾಮೇಗೌಡ : " ಅದೇನೇ ಇರಲಿ. ಅದೂ ಒಂದು ಊಟನಾ. ನಮ್ಗೆ ಮುದ್ದೆ ಸೊಪ್ಪಿನ ಸಾರು ಎಷ್ಟು ಹಿತ.. ಅದೇ ಅಮೃತ ...ಆದರೆ ಅದನ್ನು ನೋಡಿದ್ರೆ ಅಯ್ಯೋ ಏನಿದು ಅನ್ನತ್ತೆ... ಇನ್ನು ಆ ಮಗ್ಗೀ ಅಂತೆ. ಅದೇ ಜಂತು ಹುಳುಗಳ ತರಾ ಇರತ್ತಲ್ಲಾ... ಅದನ್ನು ನೋಡಿದ್ರೇನೇ ವಾಕರಿಕೆ ಬರುತ್ತೆ.."

ಯಶವಂತ್ : " ಅದು ಮ್ಯಾಗಿ.."

ರಾಮೇಗೌಡ : " ನಮ್ಮ ಕಾಲ್ದಾಗೆ ಬ್ರಾಹ್ಮಣರು ಅನ್ನು ಪುಳ್ಚಾರು ತಿನ್ನೋರು...ಏಕೆಂದ್ರೆ ಅವರು ಟೀಚರ್ ಕೆಲಸ, ಪೂಜಾರಿ ಕೆಲಸ ಮಾಡ್ತಿದ್ರು..."

"ಪುರೋಹಿತರಾಗಿ ಕೆಲಸ ಮಾಡ್ತಿದ್ರು... ನಾವು ಗೌಡ್ರು ಗಳು ದೇಹ ದಣಿಸಿ ಹೊಲದ ಕೆಲಸ ಹೊರುವ ಕೆಲಸ ಕೂಲಿ ಕೆಲಸ ಮಾಡ್ತಾ ಇದ್ದಿದ್ರಿಂದ ಮುದ್ದೆ ತಿನ್ನುತ್ತಾ ಇದ್ವಿ.. ಅದು ಪ್ರಕೃತಿ ಸಹಜವಾಗಿತ್ತು..

" ಆದರೆ ಈಗ ಪಟ್ಟಣದಾಗೆ ಯಾವುದೇ ಜಾತಿಯಿರಲಿ..
ಈಗಿನ ಕಾಲದವರೆಲ್ಲಾ...ಅದೇನೋ ಆವಾಗ್ಲೇ ಹೇಳಿದೆನಲ್ಲಾ..ಪಿಜ್ಜಾ ಅದೇ ತಿನ್ನೋದು..!ಏನೋ ನನ್ನಂತೆ ಹಳ್ಳಿ ಗಮಾರರು ಅಲ್ಲಿ. ಇಲ್ಲಿ ಮುದ್ದೆ ತಿಂತಾರೆ..."

ಯಶವಂತ್ : " ಹೌದು.. ನಮ್ಮ ತಾತ ಅಜ್ಜಿ ನಾವು ಚಿಕ್ಕವರಾಗಿರಬೇಕಾದರೆ ಹೇಳ್ತಾ ಇದ್ರು.. ಅದು ದೇಹಕ್ಕೂ ಒಳ್ಳೇ ಪುಷ್ಟಿಕರ ಅಂತ "

ರಾಮೇಗೌಡ : " ನಿಮ್ಮ ಮನೇಲಿ ಯಾರಾದ್ರೂ ರೈತರಿದ್ದಾರಾ.. ಅದು ಹೇಗೆ ನಿಮಗೆ ಕೃಷಿ ಯಲ್ಲಿ ಆಸಕ್ತಿ ಬಂತು "

ಯಶವಂತ್ : " ಇಲ್ಲ.. ನಮ್ಮ ಮನೆತನದಲ್ಲಿ ರೈತರು ಯಾರೂ ಇಲ್ಲ. ಆದರೆ ನನಗೆ ಚಿಕ್ಕ ವಯಸ್ಸಿನಿಂದಾನೂ ಗಿಡ ಮರ ಅಂದ್ರೆ ಇಷ್ಟ. ನಮ್ಮ ಮನೆಯ ಹಿತ್ತಲಲ್ಲಿ ಇರುವ ಗಿಡಕ್ಕೆ ನಮ್ಮಮ್ಮನ ಜೊತೆ ನಾನೂ ನೀರು ಹಾಕ್ತಾ ಇದ್ದೆ. ಅದರ ಬಗ್ಗೆ ಇರುವ ಪ್ರೀತಿ ಇನ್ನೂ ಜಾಸ್ತಿ ಆಗಿದ್ದೇ ಹೊರತು ಕಡಿಮೆಯಾಗಿಲ್ಲ "

ರಾಮೇಗೌಡ : " ಅದ್ಸರಿ... ಸಾವಯವ ಕೃಷಿ ಮಾಡ್ತೀನಿ ಅಂದ್ರಲ್ಲಾ.. ನಿಮ್ಮ ಇಂಗ್ಲೀಷ್ ನಾಗೆ ಏನೋ ಹೇಳ್ತಾರಲ್ಲ..
ಯಶವಂತ್ : " Organic farming"

ರಾಮೇಗೌಡ : " ಹ್ಞಾ..ಹ್ಞಾಂ.. ಅದೇಯ.. ಏನೇನು ಬೆಳೀಬೇಕು ಅಂತ ಇದ್ದೀರಾ.. "

ಯಶವಂತ್ : " ತರಕಾರಿ ಮತ್ತು ಹಣ್ಣುಗಳು ...ಯಾವ ಯಾವ್ದು ಅಂತ ಇನ್ನೂ ನಿರ್ಧಾರ ಮಾಡಿಲ್ಲ... ನೀವು ದಯವಿಟ್ಟು ಸಲಹೆ ಕೊಡಬೇಕು... ಸಹಾಯ ಮಾಡಬೇಕು..."

ರಾಮೇಗೌಡ : " ಅಯ್ಯೋ.. ಅದಕ್ಕೇನು.. ಮಾಡೋಣ
ನಮ್ಮ ತಂದೆಯನ್ನು ಕಾಲ್ದಾಗೆ ನಾವು ಸಗಣಿ.. ಕುರಿಗೊಬ್ಬರ ಬಿಟ್ಟರೆ ಮತ್ತೇನೂ ಹಾಕುತ್ತಿರಲಿಲ್ಲ.. ಆದ್ರೆ ಆಮೇಲೆ ಈ ಹುಳು ಹುಪ್ಪಟೆಗಳು ಬರೋಕೆ ಶುರು ಆದ್ಮೇಲೆ ನಾವೇ ಬೇವು ರಸ ಅದು ಇದು ಹಾಕಿ ಹೆಂಗೋ ಸರಿಮಾಡ್ಕೋತಿದ್ವಿ. ಈ ಕೀಟನಾಶಕ ಗಳು ಬಂದ್ಮೇಲೆ ಅದರ ದಬ್ಬಾಳಿಕೆಗೆ ನಾವು ಅದರ ಮೇಲೇ ಅವಲಂಬನೆ ಮಾಡುವಂತಾಯಿತು"

ಯಶವಂತ್ : " ಹೌದು. ಕೀಟನಾಶಕಗಳು ನಮ್ಮ ಆರೋಗ್ಯಕ್ಕೆ ಹಾನಿಕರ. ಹಾಗೂ ಹೆಚ್ಚು ಬಳಸಿದರೆ ಗಿಡಗಳಿಗೂ ಒಳ್ಳೆಯದಲ್ಲ. ಆದರೆ ಅದರ ಬಗ್ಗೆ ಸುಮಾರು ರೈತರಿಗೆ ಇನ್ನೂ ಅರಿವು ಮೂಡಿಲ್ಲ.. ಅರಿವು ಸರ್ಕಾರ ಮೂಡಿಸಬೇಕು.."

ರಾಮೇಗೌಡ : " ಅವಾಗ ಕೀಟನಾಶಕ ಕಂಪನಿ ಮುಚ್ಚಬೇಕಾಗತ್ತಲ್ಲ.. ಅವರು ಸರ್ಕಾರಕ್ಕೆ ಮುಚ್ಚಲು ಬಿಡಲ್ಲ.."

ರಾಮೇಗೌಡ : " ಈಗೀಗ ನಗರದಲ್ಲಿ ಸಾವಯವ ಉತ್ಪನ್ನಗಳಿಗೆ ಹೆಚ್ಚು ಬೇಡಿಕೆ ಹಾಗೂ ಮಾರುಕಟ್ಟೆ ಇದೆಯಂತೆ.. ದುಡ್ಡಿರೋರು ಒಂದಕ್ಕೆರಡು ಬೆಲೆಯಾದ್ರೂ ಲೆಕ್ಕಿಸದೆ ಕೊಂಡ್ಕೋತಾರಂತೆ ಹೌದು "

ಯಶವಂತ್ : " ಹೌದು.. ಆದರೆ ಸಾವಯವ ಉತ್ಪನ್ನ ಅಂತ ಮಾರೋರೆಲ್ಲಾ ನಿಜವಾದ ಸಾವಯವ ಉತ್ಪನ್ನಗಳನ್ನೇ ಮಾರೋದಿಲ್ಲ. ಸಾವಯವ ಅಂಥ ಹೇಳಿ ಮೋಸ ಮಾಡೋವ್ರೂ ಇದಾರೆ "

ರಾಮೇಗೌಡ : " ನೀವು ಯಾವ ಥರ ಕೃಷಿ ಮಾಡ್ತೀರ.."

ಯಶವಂತ್ : " ನನ್ನ ಸ್ನೇಹಿತ ನೊಬ್ಬ ಕೃಷಿ ವಿಶ್ವವಿದ್ಯಾಲಯ ನಡೆಸುವ ವಿಚಾರ ಸಂಕಿರಣಕ್ಕೆ ಕರೆದುಕೊಂಡು ಹೋಗಿದ್ದ.. ಅಲ್ಲಿ ಅವರು ಸಾವಯವ ಗೊಬ್ಬರ , ಕೃಷಿಯ ಬಗ್ಗೆ ಮಾತಾಡಿ ಪ್ರಾಯೋಗಿಕವಾಗಿ ತೋರಿಸಿಕೊಟ್ಟರು.. ನಿಮ್ಮಂತ ಹಿರಿಯ ಅನುಭವೀ ರೈತರು ಕೃಷಿ ಮಾಡುವ ಹಾಗೂ ಗೊಬ್ಬರಗಳ ಬಗ್ಗೆ ಅದರ ಬಗೆಗಳನ್ನೇ ಪರಿಷ್ಕರಿಸಿ ವೈಜ್ಞಾನಿಕವಾಗಿ ಉತ್ತಮೀಕರಿಸುವ ಬಗ್ಗೆ ತೋರಿಸಿಕೊಟ್ಟರು "

ರಾಮೇಗೌಡ : " ಅದು ನಾವು ನಮ್ಮ ಹಿರಿಯರು ಮಾಡೋದನ್ನ ನೋಡಿ ನೋಡಿ ಕಲಿತ್ವಿ. ನೀವು ಓದ್ಕೊಂಡೋರು ಓದಿ ವಿಚಾರ ಮಾಡಿ ಪ್ರಯೋಗ ಮಾಡಿ ಕಲೀತೀರಿ. ಅದೇ ವ್ಯತ್ಯಾಸ.."

ಯಶವಂತ್ : " ಒಳ್ಳೆಯ ಕೃಷಿ ಮಾಡಕ್ಕೆ ನಿಮ್ಮಂತ ಹಿರಿಯ ಅನುಭವೀ ರೈತರ ಮಾರ್ಗದರ್ಶನ ನೂ ಇರಬೇಕು. ಹಾಗೇ ಆಧುನಿಕ ವೈಜ್ಞಾನಿಕವಿಚಾರಗಳೂ ಬೇಕು."

ರಾಮೇಗೌಡ (ನಗುತ್ತಾ) : " ಅದೇನೋ ಸರಿ.. ಅದ್ಸರಿ ಈವಾಗ ಮಧ್ಯಾಹ್ನದ ಊಟಕ್ಕೆ ಏನು ಮಾಡ್ತೀರಾ?. ಬನ್ನಿ ನಮ್ಮನೆಗೇ ಒಟ್ಟಿಗೇ ಊಟ ಮಾಡ್ತಾ ಮಾತಾಡೋಣ "

ಯಶವಂತ್ ; " ಇಲ್ಲ ಪರವಾಗಿಲ್ಲ. ಥ್ಯಾಂಕ್ಸ್. ನಾನು ಆಚೆ ಹೋಗಿ ಊಟ ಮಾಡ್ತೀನಿ."

ರಾಮೇಗೌಡ : " ಓಂ ಹಾಗಾ... ನಿಮಗೆ ನಮ್ ಊಟ ಹಿಡಿಸತ್ತೋ ಇಲ್ವೋ.."

ಯಶವಂತ್ : " ಅಯ್ಯೋ ಹಾಗೇನಿಲ್ಲ. ನನ್ನ ಸ್ನೇಹಿತನೊಬ್ಬನ ಫಾರ್ಮ್ ಹೌಸ್ ಗೌರೀಬಿದನೂರಿನಲ್ಲಿದೆ. ಅವನು ಅಲ್ಲೇ ಊಟಕ್ಕೆ ಕರೆದಿದ್ದಾನೆ. "

ರಾಮೇಗೌಡ : " ಆಯ್ತಪ್ಪಾ. ನಿಮ್ಮನ್ನ ಭೇಟಿ ಮಾಡಿ ಬಹಳ ಸಂತೋಷವಾಯಿತು. ಮುಂದೆನೂ ಹೀಗೆ ಭೇಟಿ ಮಾಡೋಣ "

ಯಶವಂತ್ : " ಖಂಡಿತ ಸಾರ್. ನಿಮ್ಮ ಸಹಾಯ ಮಾರ್ಗದರ್ಶನ ನನಗೆ ಬೇಕೇಬೇಕು.."

ರಾಮೇಗೌಡ : " ಆಯ್ತು. ಅದಕ್ಕೇನಂತೆ. ಬರ್ತಿನಪ್ಪ"

ಅಲ್ಲಿಂದ ರಾಮೇಗೌಡ ತನ್ನ ಮನೆಯ ಕಡೆ ಹೊರಡುತ್ತಾನೆ.

ಮಾರ್ಚ್ 31 - ವಿಠ್ಠಲ್. ಇಜೇರಿ

ನಮ್ಮ ಸಿದ್ದಣ್ಣನದು ರಾಕ್ಷಸಿ ಬುದ್ಧಿ. ಪ್ರಳಯಾಂತಕ, ಯಾವಾಗಲೂ ಹೊಸನಮೂನೆ ಕ್ರಾಂತಿಕಾರಿ ಯೋಚನೆಗಳು. ಮೊನ್ನೆ ಮಾರ್ಚ್ 31 ರಂದು ಮರುದಿನಕ್ಕಾಗಿ ಒಂದು ಸ್ಕೆಚ್ ಹಾಕಿದ. ಆಗಾಗ ವರ್ಷವಿಡಿ ಹೆಂಡತಿ ನನ್ನನ್ನು ಮೂರ್ಖನನ್ನಾಗಿಸುತ್ತಾಳೆ, ನಾಳೆ ಏಪ್ರಿಲ್ ಮೊದಲ ತೇದಿ, ಮೂರ್ಖರ ದಿನ, ನಾಳೆ ಹೆಂಡತಿಗೆ ಮೂರ್ಖಳನ್ನಾಗಿಸಿದರೆ ಪಾಪವಿಲ್ಲ. ಎಂದು ಯೋಜನೆ ರೂಪಿಸಿದ. ತನ್ನ ಬೀದಿಯ ಮೂರು ಹುಡುಗರಿಗೆ " ನೋಡ್ರಯ್ಯ, ನಾನು ದಿನಾಲು ಬೆಳಿಗ್ಗೆ 9 ಗಂಟೆಗೆ ಈಜಲು ಹೋಗುತ್ತೇನೆ. ನಾಳೆಯೂ ಬೆಳಿಗ್ಗೆ 9 ಗಂಟೆಗೆ ಈಜಲು ಹೋಗುತ್ತೇನೆ. ಬೆಳಿಗ್ಗೆ 9.30 ಕ್ಕೆ ಐದೇದು ನಿಮಿಷದ ಅಂತರದದಲ್ಲಿ ನನ್ನ ಹೆಂಡತಿಗೆ " ಅಂಟಿ, ಈಜಲು ಹೋಗಿದ್ದರಲ್ಲ ಸಿದ್ದಣ್ಣ ಅಂಕಲ್, ನೀರಲ್ಲಿ ಮುಳಗಿದವರು ಮೇಲೆ ಎದ್ದೇ ಇಲ್ಲ. ಅಂತಾ ಹೇಳಿ, ಸಂಜೆ ನಾವೆಲ್ಲಾ ಏಪ್ರಿಲ್ ಫೂಲ್ ಪಾರ್ಟಿ ಮಾಡೋಣ " ಅಂದ.
ಮರುದಿನ ಬೆಳಿಗ್ಗೆ 9.30 ಕ್ಕೆ ಮೊದಲನೇ ಹುಡುಗ ಸಿದ್ದಣ್ಣ ಹೇಳಿಕೊಟ್ಟದ್ದು ಚಾಚೂ ತಪ್ಪದೆ ಹೇಳಿದ. ಗಾಬರಿಗೆ ಬಿದ್ದ ಸಿದ್ದಮ್ಮ ಎದೆ ಬಡಿದುಕೊಳ್ಳುತ್ತ ಜೋರಾಗಿ " ಅಯ್ಯಯ್ಯೋ " ಅನ್ನುವ ವೇಳೆಗೆ ಎರಡನೇ ಹುಡುಗ ಓಡುತ್ತಾ ಬಂದು ಒಂದೇ ಉಸಿರಲ್ಲಿ "ಆಂಟಿ, ಹೋದರು, ಅಂಕಲ್ ಹೋದರು " ಅಂದು ಕುಸಿದು ಕುಳಿತ, ಸಿದ್ದಮ್ಮ ಧ್ವನಿ ಏರಿಸಿ ಅಳಲಾರಂಭಿಸಿದಳು. ಆಕೆಯ ದ್ವನಿ ಮಸೀದಿ ಮೈಕ ನಂತೆ ಬೀದಿಗೆಲ್ಲ ಕೇಳಿಸಿತು. ಅಕ್ಕ ಪಕ್ಕ ದವರೆಲ್ಲ ಓದಿ ಬಂದರು. " "ಏನಂತೆ?, ಯಾರು ಹೋದರು? ಸಿದ್ದಣ್ಣ ಹೋದರೆ? ಯಾವಾಗ ಹೋದರು, ಹೋಗುವಾಗ ಈಕೆ ಸುಮ್ಮನಿದ್ದಳೆ? ಅನ್ನುತ್ತಾ 4/ 6 ಮನೆ ಜನ ಸೇರಿದರು. ಈಗ ಸಿದ್ದಮ್ಮ ನಿಗೆ ಕೋರುಮ್ ಸಾಕು ಅನಿಸಿತು. ಸುತ್ತಲಿದ್ದವರೆಲ್ಲ ನೋಡುತ್ತಿದ್ದಂ ತೆ, ಎದ್ದು ಬಾಟಲಿಯೊಂದನ್ನು ಕೈಗೆತ್ತಿಕೊಂಡು " ಬಂದೆ, ರೀ, ನಾನೂ ಬಂದೆ. ನೀವಿಲ್ಲದ ಮೇಲೆ ಇಲ್ಲಿ ನಾನೇನು ಮಾಡಲಿ, " ಅಕ್ಕ ಪಕ್ಕದವರು " ಏ, ಸಿದ್ದಮ್ಮ, ಇದೇನು ಮಾಡ್ತಾ ಇದ್ದೀಯಾ?, ಅವರದು ಇಷ್ಟೇ ದಿನ ರಿಣ ಇತ್ತು ಅದು ಮುಗೀತು ಹೋದರು, ಹುಚ್ಚಿಯಂಗೆ ಮಾಡಬೇಡ " ಎಂದು ಬಾಟಲಿ ಕಸಿದುಕೊಳ್ಳಲು ಹೋದರು, ಸಿದ್ದಮ್ಮ ಜಿಗುಟು ಹೆಂಗಸು ಹೊಲದಲ್ಲಿ ಬಿಸಿಲೊಳಗೆ ದುಡಿದ ಗಟ್ಟಿ ರಟ್ಟೆ ಹೆಂಗಸು ಎಲ್ಲರ ಕೈ ತಪ್ಪಿಸಿ ಬಾಟಲಿ ಬಾಯಿಗಿಟ್ಟು ಗಟ ಗಟ ಕುಡಿದು ಬಿಟ್ಟಳು. ಈಗ ಬೀದಿಯಲ್ಲಿ ಎರಡು ಸುದ್ದಿಗಳು ಒಂದು ಸಿದ್ದಣ್ಣ ಮುಳುಗಿದ, ಇನ್ನೊಂದು ಸಿದ್ದಮ್ಮ ಮುಲುಗುತ್ತಿದ್ದಾಳೆ. " ಒಬ್ಬೊಬ್ಬರು ಒಂದೊಂದು ಮಾತು " ಡಾಕ್ಟರ್ ಕರ್ಕೊಂಬನ್ನಿ , ಆಂಬುಲೆನ್ಸ್ ಗೆ ಫೋನ್ ಮಾಡಿ " ಅವಸರಾಮಾಡಿ, ತಡ ಮಾಡಿದರೆ ಕಷ್ಟ " ಹೀಗೆ ಅನ್ನುವಾಗ ಕೆಳಗೆ ಕುಸಿದು ಕುಳಿತ ಸಿದ್ದಮ್ಮ " ಬ್ಯಾಡ ಯಾರನ್ನೂ ಕರೀಬ್ಯಾಡ್ರಿ, ನಾನು   ಎಲ್ಲಿಗೂ ಬರೋದಿಲ್ಲ. ಅವನಿದ್ದಲ್ಲಿಗೆ ಹೋಗಬೇಕು. ಅವನಿಗೆ ಅಲ್ಲೂ ಸುಖ ಸಿಗದಂಗೆ ಕಾಡಬೇಕು. ನನಗೆ ಹೋಗಲು ಬಿಡಿ, ಅಲ್ಲಿ ಆರಾಮಾಗಿ ಇರಾಕ ಹೋಗ್ಯಾನ ನಾ ಈಗಲೇ ಹೋಗಿ ಅದ್ಯಾಂಗ ಆರಾಮಾಗಿ ಇರ್ತಾನೆ ನಾನೂ ನೋಡ್ತೇನೆ.. ನನಗೆ ಜೀವದ ಆಶೆ ಇಲ್ಲ, ಅವನಿಗೆ ಸತ್ತರೂ ಸುಖ ಇಲ್ಲ ಅಂತಾ ಗೊತ್ತಾಗಬೇಕು " ಹೀಗೆ ರಂಪಾಟ ನಡೆದಾಗಲೇ ಸಿದ್ದಣ್ಣ ಪ್ರಕಟನಾಗಿ " ಏನೇ ಇದು, ಅದ್ಯಾನ್ಯಕೆ ಕುಡದಿ, ನೀನು ನನ್ನ ಎಷ್ಟು ಪ್ರೀತಿಸ್ತೀಯಾ ಅಂತಾ ನೋಡಲು ಇವತ್ತು ಹೇಗೂ ಏಪ್ರಿಲ್ ಫೂಲ್ ದಿನ ಅದಕ್ಕೇ ಒಂದು ಚಿಕ್ಕ ನಾಟಕ ಆಡಿದೆ, ಸಾರೀ, ಬಾ ಹೋಗೋಣ ಡಾಕ್ಟರ್ ಬಳಿಗೆ, ಆಟೋ ಬಂದೈತಿ, ಏಳು" ಅಂತಾ ಮ್ಯಾಲ ಎಬ್ಬಿಸಲಿಕ್ಕೆ ಹೋದ. ಕೂಡಲೇ ಮುಖ, ಮೂಗು ಒರೆಸಿಕೊಳ್ಳುತ್ತ ಎದ್ದು ನಿಂತ ಸಿದ್ದಮ್ಮ " ನಾನ್ಯಾದರೂ ಎಲ್ಲಿ ವಿಷ ಕುಡುದಿದ್ದೆ, ಮೊನ್ನೆ ತಂದ ಕೆಮ್ಮಿನ ಸಿರಪ್ ಇನ್ನೊಂದೆರಡು ಸಿಪ್ ಉಳಿದಿತ್ತು,ಇಷ್ಟೆಲ್ಲ ಮಂದಿ ಬಂದಿದ್ದರು, ನನಗು ನಿಮ್ಮ ಮ್ಯಾಲ ಕಾಳಜಿ ಐತಿ ಅಂತಾ ಇವರೆಲ್ಲ ಅನಕೊಳ್ಳಲಿ ಅಂತಾ ಅದನ್ನು ಕುಡಿದು ನಾಟಕ ಆಡಿದೆ. ನಿನ್ನೆ ರೂಮಿನೊಳಗ ಮೂವರು ಹುಡುಗರಿಗೆ ಗುಸು ಗುಸು ಅಂತಾ ಹೇಳಿದ್ದೆಲ್ಲ ಕೇಳಿಸಿಕೊಂಡಿದ್ದೆ. ನನಗೂ ಗೊತ್ತು, ಇವತ್ತು ಏಪ್ರಿಲ್ ಮೊದಲ ದಿನ, ಮೂರ್ಖರ ದಿನ.ನೀವು ನನ್ನ ಏಪ್ರಿಲ್ ಫೂಲ್ ಮಾಡಿದರ ನಾ ಸುಮ್ಮನ ಕೂಡಾಕ ಆಗತ್ತಾ ನಾನೂ ನಿಮಗ ಅದನ್ನ ಮಾಡಿದೆ. " ಅಂದಳು. ಬಂದವರು ಈ ಗಂಡಾ ಗುಂಡಿ ನಾಟಕ ನೋಡಿ, ಇವರದು ಯಾವಾಗಲೂ ಇದ್ದದ್ದೇ ನಡೆಯಿರಿ ಎಂದು ತಮ್ಮ ತಮಲ್ಲಿ ಮಾತಾಡಿಕೊಂಡು ತಮ್ಮ ಮನೆಗಳಿಗೆ ಹೊರಟರು

ಬಾಲ್ಯದ ದಿನಗಳ ನೆನಪು - ಎಮ್ ಎಸ್ ನರಸಿಂಹಮೂರ್ತಿ

ನಾಲ್ಕನೇ ತರಗತಿಯಲ್ಲಿದ್ದಾಗ ನಂದಗೋಪಾಲ, ಚಂದ್ರಶೇಖರ, ತಮ್ಮಯ್ಯ, ರಾಮಚಂದ್ರ ನನ್ನ ಆಪ್ತ ಗೆಳೆಯರು. ನಂದ ಸೊಗಸಾಗಿ ಹಾಡುತ್ತಿದ್ದ. ಅವರ ಮನೆಯಲ್ಲಿ ಸಂಗೀತಗಾರರು ಇದ್ದರು. ಒಂದು ಹಾಡನ್ನು ಕಲಿತಿದ್ದ. `ಪಾವನ ಗುಣ ರಾಮ ಹರೇ.

ಪರಮದಯಾ ನಿಲಯ ಹರೇ, ರಾಮ' ಎಂಬ ಹಾಡದು. ಹಾಡುವಾಗ `ಪಾವನ ಗುಣ ರಾಮ'ಗೆ ನಿಲ್ಲಿಸಬೇಕು. ಆದರೆ `ಹರೆ' ಸಹ ಸೇರಿಸಿ ಹಾಡುತ್ತಿದ್ದ. ಅಲ್ಲಿಗೆ ನಿಲ್ಲಿಸಲು ಅವನ ಕೈಲಿ ಆಗುತ್ತಿಲ್ಲ. ನಾನು ಐಡಿಯಾ ಮಾಡಿ ಅವನಿಗೆ ಶಾರ್ಟ್ ಕಟ್ ಹೇಳಿಕೊಟ್ಟೆ. **`ಪಾವನ ಗುಣ ರಾಮ'** ಅಂತ ಅವನು ಹಾಡುತ್ತಿದ್ದಂತೆಯೇ ನಾನು **`ಕಚಕ್'** ಎನ್ನುತ್ತಿದ್ದೆ. ಅವನು `ಹರೆ' ಎಂದು ಅನಂತರ ಹಾಡುತ್ತಿದ್ದ. ಹೀಗೆ ಅಭ್ಯಾಸವಾಯಿತು. ಶಾಲೆಯ ಕಾರ್ಯಕ್ರಮದ ದಿನ ಅವನನ್ನು ಹಾಡಲು ಬಿಟ್ಟಾಗ **`ಪಾವನ ಗುಣ ರಾಮ ಕಚಕ್'** ಎಂದು ಹಾಡಿದ. ಮಾಸ್ತರಿಗೆ ಗಾಬರಿಯಾಯಿತು. ದೇವರ ನಾಮದಲ್ಲಿ `ಕಚಕ್' ಹಾಕಿದ್ದು ಯಾರು ಎಂದರು. ನನಗೆ ಶಿಕ್ಷೆ ಆಯಿತು.

ಪ್ರೈಮರಿ ಶಾಲೆಯ ಮುಖ್ಯೋಪಾಧ್ಯಾಯರಾದ ರಾಮಯ್ಯ ಮೊದಲಿಯಾರ್ ಶಿಸ್ತಾಗಿ ಬರುತ್ತಿದ್ದರು. ಶಾಲೆಯ ಪ್ಯೂನ್ ಗೋವಿಂದಪ್ಪನನ್ನು ಕಂಡರೆ ನಮಗೆ ಭಯವಿತ್ತು. ಶಾಲೆಯಲ್ಲಿ ನಾವು ತರಲೆ ಮಾಡಿದರೆ ಹೆಡ್‌ಮಾಸ್ಟರ್ ಬಳಿಗೆ ಎಳೆದುಕೊಂಡು ಹೋಗುತ್ತಿದ್ದ.

ಶಾಲೆಯಲ್ಲಿ ಒಂದೇ ಒಂದು ಗೋಡೆ ಗಡಿಯಾರ. ನಮ್ಮ ಹೆಡ್‌ಮಾಸ್ತರ್ ಅವರಿಗೆ ಎಂದಾದರೂ ಶಾಲೆಯಿಂದ ಸ್ವಲ್ಪ ಬೇಗ ಹೋಗಬೇಕು ಎನ್ನಿಸಿದರೆ ಗೋವಿಂದಪ್ಪನನ್ನು ಕರೆದು ಹೇಳುತ್ತಿದ್ದರು. `ತಿರುಗಿಸು ಗಡಿಯಾರ 15 ನಿಮಿಷ'.

ಗೋವಿಂದಪ್ಪ ಹಾಗೇ ಮಾಡಿ ಕಾಲು ಗಂಟೆ ಮೊದಲು ಬೆಲ್ ಹೊಡೆಯುತ್ತಿದ್ದ. ಹೀಗೇ ಕೆಲವು ಸಲ ನಡೆಯಿತು. ಒಂದು ಸಲ ಶಿಕ್ಷಣ ಇಲಾಖೆಯವರು ಶಾಲೆ ಬಿಟ್ಟ ಕೂಡಲೇ 5 ಗಂಟೆಗೆ ಬಂದಾಗ ಗೋವಿಂದಪ್ಪ ಮಾತ್ರ ಇದ್ದ.

`ಎಲ್ಲಿ ಮಾಸ್ತರು, ಮಕ್ಕಳು ? ಈಗಿನ್ನೂ ನಾಲ್ಕೂ ಮುಕ್ಕಾಲು' ಎಂದರು.

`ನಮ್ಮ ಗಡಿಯಾರದಲ್ಲಿ 5 ಗಂಟೆ ಆಯ್ತು ಸಾರ್, ಬೆಲ್ ಹೊಡೆದೆ' ಎಂದ ಗೋವಿಂದಪ್ಪ !

ಗಡಿಯಾರ ರಿಪೇರಿ ಮಾಡಿಸಲು ಆದೇಶ ಬಂತು !

*

ತಿಥಿಯ ದಿನ ಹಸಿವಿನಿಂದಾಗುವ ನರಳಾಟ ಯಾರಿಗೂ ಹೇಳಲಾಗುವುದಿಲ್ಲ. ತಿಥಿ ಮಾಡಿಸಲು ನಮ್ಮ ತಾತ ಸರ್ಜಾಪುರದಿಂದ ಹಿಂದಿನ ದಿನವೇ ನಡೆದು ಬರುತ್ತಿದ್ದರು. ಅವರೇ ಶ್ರಾದ್ಧ ಕರ್ಮದ ಇನ್‌ಚಾರ್ಜ್.

ಒಮ್ಮೆ ತಿಥಿ ದಿನ ಹಸಿದು ಶಾಲೆಗೆ ಹೊರಟಿದ್ದ ನಮ್ಮಕ್ಕ ಗುಟ್ಟಾಗಿ ನನ್ನನ್ನು ಹತ್ತಿರ ಕರೆದು ಕಳ್ಳೇಕಾಯಿ ಜೇಬಿಗೆ ತುರುಕಿ ಕಳಿಸಿದ್ದಳು.

ಶಾಲೆಯ ಮುಂದಿನ ಬೆಂಚಲ್ಲಿ ಕುಳಿತಿದ್ದೆ. ಹಸಿವು ತಡೆಯಲಾರದೆ ಜೇಬಲ್ಲಿದ್ದ ಕಳ್ಳೇಕಾಯನ್ನು ಒಂದೊಂದೇ ತೆಗೆದು ಬಿಡಿಸಿದೆ. ಪಕ್ಕದಲ್ಲೇ ಇದ್ದ ನಂದಗೋಪಾಲ ಸಾಥ್ ನೀಡಿದ.

`ನೀನು ಎರಡು ಬೀಜ ತಿನ್ನು, ನನಗೆ ಒಂದು ಬೀಜ ಕೊಡು' ಎಂದು ಹುರಿದುಂಬಿಸಿದ. ಕಳ್ಳೇಕಾಯನ್ನ ಬಿಡಿಸಿದಾಗ ಟಕ್ ಟಕ್ ಶಬ್ದ ಬರುತ್ತಿತ್ತು. ಒಂದು ಕಳ್ಳೇಕಾಯಿ ಬೀಜ ಕೈ ತಪ್ಪಿ ಕೆಳಗಡೆ ಬಿದ್ದು ಮಾಸ್ತರ ಕಾಲಿನವರೆಗೆ ಉರುಳಿಕೊಂಡು ಹೋಯಿತು. ತಪ್ಪು ಬೀಜದ್ದು, ನಂದಲ್ಲ. ಮಾಸ್ತರು ಗಮನಿಸಿದರು.

`ನಿಂತ್ಕೋ, ಏನು ಮೇಯ್ತಾ ಇರೋದು?' ಎಂದರು.

ನಾನು ಸುಮ್ಮನಿದ್ದರೂ ನಂದಗೋಪಾಲ `ಕಳ್ಳೇಕಾಯಿ' ಎಂದು ಬಿಟ್ಟ.

`ಪಾಟ ಮಾಡ್ತಿರೋವಾಗ ಕಳ್ಳೇಕಾಯಿ ತಿಂತೀಯ ?' ಎಂದು ರೇಗಿ ನನ್ನ ಜೇಬಲ್ಲಿದ್ದ ಕಳ್ಳೇಕಾಯನ್ನು ಟೇಬಲ್ ಮೇಲೆ ಹಾಕಿಸಿದರು. ಎಲ್ಲಾ ಬಿಡಿಸು ಎಂದರು. ಅಷ್ಟೂ ಕಳ್ಳೇಕಾಯಿ ಬಿಡಿಸಿದೆ. ಎಲ್ಲರಿಗೂ ಎರಡೆರಡು ಕಳ್ಳೇಬೀಜ ಕೊಡು ಎಂದು ನಂದನಿಗೆ ಹೇಳಿದರು. ನಂದಗೋಪಾಲ ಎಲ್ಲ ವಿದ್ಯಾರ್ಥಿಗಳಿಗೂ ಎರಡೆರಡು ಬೀಜ ಹಂಚಿದ. ಉಳಿದ ಒಂದೆರಡು ಬೀಜಗಳನ್ನು ಮಾಸ್ತರು ತಾವೇ ಬಾಯಲ್ಲಿ ಹಾಕಿಕೊಂಡರು.

`ಇದು ನಿನಗೆ, ತಗೋ ತಿನ್ನು' ಎಂದು ಸಿಪ್ಪೆಯನ್ನು ನನ್ನ ಕೈಯಲ್ಲಿಟ್ಟರು. ಇದರಿಂದ ನಾನು ಬಹುದೊಡ್ಡ ಪಾಟ ಕಲಿತೆ.

ನಮ್ಮ ಸೊಣ್ಣಪ್ಪ ಮಾಸ್ತರು ಭಾರೀ ಗಾತ್ರದ ವ್ಯಕ್ತಿ. ಅವರು ಮಾಲೂರಿಂದ ಬೆಂಗಳೂರಿಗೆ ಹರಿಕಥೆಗಾಗಿ ಆಗಾಗ ಬರುತ್ತಿದ್ದರು. ಸರ್ಕಾರಿ ಬಸ್ಸಲ್ಲಿ ಒಂದು ಸೀಟು ಅವರಿಗೆ ಸಾಕಾಗುತ್ತಿರಲಿಲ್ಲ. ಹೀಗಾಗಿ ಎರಡು ಟಿಕೆಟ್ ಪಡೆದು ಸಾರಿಗೆ ಸಂಸ್ಥೆಗೆ ಲಾಭ ಮಾಡಿದ್ದಾರೆ. ಎರಡು ಸೀಟಿನ ತುಂಬಾ ಒಬ್ಬರೇ ಕೂರುತ್ತಿದ್ದರು. ಅಲ್ಲಿ ಬೇರೆಯವರಿಗೆ ಜಾಗ ಉಳಿಯುತ್ತಿರಲಿಲ್ಲ.

ಒಮ್ಮೆ ನಾನು ಕೇಳಿದ್ದೆ. `ನೀವು ಇರುವುದು ಒಬ್ಬರು. ಎರಡು ಟಿಕೆಟ್ ಯಾಕೆ ಪಡೆಯುತ್ತೀರ?'

ಸೊಣ್ಣಪ್ಪ ಮಾಸ್ತರ್ ವಿವರಿಸಿದರು.

`ಸರ್ಕಾರಿ ಬಸ್ಸಲ್ಲಿ ನಾನು ಎರಡು ಸೀಟಿಗೆ ಒಬ್ಬನೇ ಕೂತಿರ್ತೀನಿ. ಒಂದು ಟಿಕೆಟ್ ಮಾತ್ರ ಪಡೆದರೆ ಕಂಡಕ್ಟರು ಅಲ್ಲಿ ಇನ್ನೊಂದು ಸೀಟ್ ಇದೇರೀ, ಅಡ್ಜಸ್ಟ್ ಮಾಡ್ಕೊಳ್ಳಿ ಎಂದು ನಿಂತಿರುವ ಪ್ಯಾಸೆಂಜರ್‌ಗೆ ಹೇಳುತ್ತಾನೆ. ಆ ಪ್ಯಾಸೆಂಜರ್ ಬಂದು ನನ್ನ ಪಕ್ಕ ಉಳಿದಿರುವ ಕಾಲು ಭಾಗದ ಸೀಟಿನಲ್ಲಿ ಅವನ ಸ್ವಲ್ಪ ಭಾಗ ಇಟ್ಟು ಕೂರುತ್ತಾನೆ. ಬಸ್ಸು ಸ್ಪೀಡಾಗಿ ಹೋಗೋವಾಗ ತಿರುವುಗಳಲ್ಲಿ ಆತ ಬ್ಯಾಲೆನ್ಸ್ ತಪ್ಪಿ ಕೆಳಗೆ ಬಿದ್ದು ರಸ್ತೆಗೆ ಉರುಳಿ ಹಿಂದಿನ ಚಕ್ರಕ್ಕೆ ಸಿಕ್ಕಿ `ಶಿವಶಿವಾ ಆದರೆ ಅವನನ್ನು ಕೊಂದ ಅಪವಾದ ನನ್ನ ಮೇಲೆ ಬರುತ್ತೆ. ಆದ್ದರಿಂದ ನಾನು ಸದಾ ಎರಡು ಟಿಕೆಟ್ ಕೊಳ್ಳುವುದು' ಎಂದು ಸಮಜಾಯಿಷಿ ಹೇಳುತ್ತಿದ್ದರು.

ಹುಬ್ಬಳ್ಳಿಯಲ್ಲಿ ಅವರ ಕಾರ್ಯಕ್ರಮ ಇತ್ತು. ನನ್ನ ಕೈಲಿ ಹುಬ್ಬಳ್ಳಿಗೆ ಎರಡು ಟಿಕೆಟನ್ನು ಖರೀದಿ ಮಾಡಿ ತರಲು ನನಗೆ ಹೇಳಿದ್ದರು. ಆಗಷ್ಟೇ ಲಗ್ಜುರಿ ಪುಷ್‌ಬ್ಯಾಕ್ ಸೀಟು ಬಸ್ಸುಗಳು ಹುಬ್ಬಳ್ಳಿಗೆ ಶುರುವಾಗಿದ್ದವು. ಬೆಂಗಳೂರಿಗೆ ಬಂದ ನಾನು ಎರಡು ಟಿಕೆಟನ್ನು ಕೊಂಡು ಮಾಸ್ತರ್ ಕೈಗೆ ಕೊಟ್ಟೆ.

ಒಂದು ವಾರ ಕಳೆದ ಮೇಲೆ ಅವರನ್ನು ನೋಡಲು ಹೋದೆ. ಬಾಯಿಗೆ ಬಂದಂತೆ ಬೈಯಲು ಶುರು ಮಾಡಿದರು.

`ಯಾಕೆ ಸಾರ್, ಬಸ್ ಚೆನ್ನಾಗಿರ್ಲಿಲ್ವಾ ?' ಅಂದೆ.

`ಲಗ್ಜುರಿ ಬಸ್ ಚೆನ್ನಾಗೇ ಇತ್ತು. ಎಲ್ಲಾ ಪುಷ್‌ಬ್ಯಾಕ್ ಸೀಟ್ಸು. ಎರಡು ಟಿಕೆಟ್ಟು ತಾ ಅಂದ್ರೆ ಹಾಗಾ ತರೋದು? ಒಂದು 11ನೇ ಸೀಟು ನಂಬರ್, ಇನ್ನೊಂದು 26ನೇ ಸೀಟ್ ನಂಬರು. ಒಂದು ಸೀಟು ಇಲ್ಲಿ, ಇನ್ನೊಂದು ಬೇರೆ ಎಲ್ಲೋ ? ನಾನು ಕೂರೋದೆಲ್ಲಿ?' ಎಂದು ಬೈದಿದ್ದರು. ಸೀಟ್ ನಂಬರ್ಸ್ ಒಟ್ಟಿಗೆ ಕೇಳಬೇಕು ಎಂದು ನನಗೆ ಗೊತ್ತಿರಲಿಲ್ಲ. ಲಕ್ಷುರಿ ಬಸ್ಸುಗಳನ್ನು ನಾನು ನೋಡಿರಲಿಲ್ಲ.

ರವಿ-ಚಂದ್ರ - ಜೀವಿ.ಹೆಗಡೆ

ಕೋಳಿ ಕೂಗಿತು ನೋಡು
ಉಷೆಗೆ ಎಚ್ಚರವಾಯ್ತು
ಬಾಲ ರವಿಯನು ಹಿಡಿದು
ಬಂದ ಅರುಣ|
ಗಡಿಬಿಡಿಸಿ ಮೂಡಣದಿ
ಉಷೆಯು ಚಿತ್ತಾರವನು
ಬಿಡಿಸಿದಂದವ ನೋಡು
ಎಂತ ವರುಣ||೧||

ಬಾಲರವಿ ಕಾಲಿಟ್ಟು
ನಡೆದು ಆಗಸದಲ್ಲಿ
ನಡೆಯುತಿಹ ಪರಿಯಿದುವೆ
ಎಂತ ಚಂದ|
ಅರುಣ ಹಚ್ಚಿದ ದೀಪ
ವನು ಪಡೆದ ಬಾಲರವಿ
ಬೆಳೆಯುತಿಹ ಬಿಸಿಯೇರಿ
ನೋಡಿ ಅಂದ||೨||

ರವಿತನುವು ಬಿಸಿಯೇರಿ
ಕರಹಿಡಿದ ಉಷೆರಾಣಿ
ಕರಗಿಹೋದಳು ನೋಡು
ಪಾಪ ಅಲ್ಲಿ|
ಮೂಡಣದಿ ಬಿಡಿಸಿರ್ದ
ಚಿತ್ತಾರ ಅಳಿಸಿಹುದು
ಕರಗಿ ಹೋಗಿಹ ಉಷೆಯ
ನೀರಿನಲ್ಲಿ||೩||

ಭೂತಾಯಿ ಒಡಲೊಳಿಹ
ತರುಲತೆಯ ಕಂಗಳಲಿ
ಮುತ್ತಿನಂತಿವೆ ಕಾಣು
ಹನಿಗಳನ್ನು|
ರವಿಬೆಳೆದು ಕರಬೀಸಿ
ತರುಲತೆಯ ಕಣ್ಣೀರ
ಒರೆಸಿದನು ನೀಕಾಣೆ
ಮುತ್ತುಗಳನು||೪||

ಸೂರಿಯನು ತನುಬೀಗಿ
ಬೆಳೆದು ಭೂವ್ಯೋಮವನು
ಬಳಸಿ ಬಿಸಿಕರದಿಂದ
ಅಪ್ಪಿರುವನು|
ನದಿ ಹಳ್ಳ ತೊರೆಯೆಲ್ಲ
ತುಂಬಿರ್ದ ನೀರೆಲ್ಲ
ಹಾರಿಹೋದವು ಎಲ್ಲಿ
ಕಾಣೆ ನೀನು||೫||

ಸಾರಿದನು ವೀರರವಿ
ಪಡುವಣದ ಮಾರ್ಗದಲಿ
ಶರಧಿಯನು ನೋಡಿದನು
ದೂರದಲ್ಲಿ|
ಸಾಗರನ ಒಡಲೊಳಗೆ
ಕಂಡನದೊ ಪ್ರತಿಸೂರ್ಯ
ಕೆಂಡವನು ಕಾರಿದನು
ಉದಧಿಯಲ್ಲಿ||೬||

ಸೂರ್ಯ ಬಿಳಿಸಿದ ಕೆಂಡ
ಉದುರಿ ಶರಧಿಯ ಮೇಲೆ
ಆವಿಯಾಯಿತು ಜಲವು
ಮೇಲ್ ಮುಖದಲಿ|
ಆವಿಜಲವನು ಹಿಡಿದು
ರವಿಯು ಪೊಟ್ಟಣಗಟ್ಟಿ
ಅಡಗಿಸಿಟ್ಟನು ಅದನು
ಮೇಘನಲ್ಲಿ||೭||

ತಣಿದ ರವಿ ಸಾಗರದಿ
ನೋಡೆ ಪ್ರತಿರವಿಯಿಲ್ಲ
ನಾಚಿಕೊಳ್ಳುತ ಇಳಿದ
ಪಡುವಣದಲಿ|
ಸಾಗರನ ಸ್ನೇಹಿತನು
ಇಣುಕಿದನು ಮೂಡಣದಿ
ಪೂರ್ಣನಾದನು ಚಂದ್ರ
ಹರುಷದಲ್ಲಿ||೮||

ಅನುಭೂತಿ - ಮಾಲತಿಶ್ರೀನಿವಾಸನ್

ಎಪ್ಪತ್ತರಾಚೆ ಈಚೆಯಲಿ
ಇಪ್ಪತ್ತರ ಹುರುಪಿನೊಡನೆ
ಏರಿದೆವು ಈ ಪರ್ವತ ಶಿಲೆಗಳ ಏಣಿ,
ಹನ್ನೆರಡುಸಾವಿರ ಅಡಿ ಸಮುದ್ರ
ಮಟ್ಟದಮೇಲ್, ಬೆಟ್ಟಗುಡ್ಡಗಳ ಶ್ರೇಣಿ.
ಅಲ್ಲಲ್ಲಿಮಗುಚಿ ಮಲಗಿತ್ತು
ಶುಭ್ರ ಬಿಳಿಮಂಜಿನಾ ದೋಣಿ

ಸುತ್ತೆಲ್ಲ ಮೌನರಾಗದಲಿ ಹಾಡಿತ್ತು
ಶಿಲೆಗಳ ಸಾಲು,
ಧೂಪ ದೀಪಾರತಿ, ಘಂಟಾನಾದ
ವಿಲ್ಲದೆ,ಭಗವಂತನಾ ಭಕ್ತಿಯಾ
ಅನುಭೂತಿಯಲಿ ಮನಬೇಡಿತ್ತು
ಧನ್ಯತೆಯಲಿ ಪಾಲು.

ಮೇಲೇರಿದಂತೆ ನೇಸರನ ಕಿರಣಗಳ
ಬೆಚ್ಚಗಿನ ಕಾವು
ಪ್ರಕೃತಿ ಪುರುಷಗೆ ನೂರಾರು
ಬಣ್ಣದೋಕಳಿಯ ನಲಿವು

ಮೈಚಾಚಿ ಮಲಗಿತ್ತು ಸಮಯ ಈ
ಸುಂದರ ತಾಣದಲಿ, ಮಗುವಾಗಿ
ಮಲಗಬೇಕೆನಿಸಿತ್ತು ಮೈಮರೆತು
ಅರೆಗಳಿಗೆ ಈ ಅನುಭೂತಿಯಲಿ

ಸಪ್ತಸ್ವರ

ಜೀವನಾಡಿಯ ಮಿಡಿತ ಅಡಗಿಹುದು
ಸಪ್ತಸ್ವರಗಳ ಶ್ರುತಿ ಲಯ ಗಾನದಲ್ಲಿ.
ಸರಿಗಮಪದನಿ ಝೇಂಕರಿಸುವುದು
ಮನದ ಭಾವನೆಗಳಲ್ಲಿ.

ಸಂಯಮ ಸೌಹಾರ್ದ,ಸಹೃದಯದ ಭಾವ
"ಸ" ಷಡ್ಜದಲ್ಲಿ, ರಿಂಗಣಿಸಿ"ರಿ" ರಿಷಭದಿಂದ
ಜಾರುವುದು "ಗ" ಗಕಾರ ಗಾಂಧರ್ವದಲ್ಲಿ,

ಸೆಳೆದೊಯ್ಯುವುದು "ಮ"ಕಾರ ಮೆರೆದು
ಮಧುರತೆಯಲಿ ಮನವ ತಣಿಸೆ

ಪಂಚಮದಲಿ ಕೋಗಿಲೆಯ ಇಂಚರವು
"ಧ"ಧೈವತ ತುಂಬೆ ಧನ್ಯಭಾವ,
"ನಿ" ನಿಷಾದದ ನಾದ ಝೇಂಕರಿಸಿ
ಸೆಳೆಯದೆ ದನಿಯ ವಿಷಾದದೆಡೆಗೆ,
ಮನವ ಸೆಳೆಯಲಿ ನಾದಬ್ರಹ್ಮನೆಡೆಗೆ

ಸಪ್ತ ಸ್ವರಗಳ ಸಮ್ಮಿಲನ ಶ್ರುತಿ,ಲಯ
ತಾಳ ಮೇಳೈಸಿದರೆ,ಗಾಯಕನ ತನುಮನಕೆ
ಅಮೃತ ಸಿಂಚನ, ಎಲ್ಲಿಹುದು ಅಪಶ್ರುತಿ
ಅವಗುಣಕೆ ತಾಣವಿಲ್ಲಿ.

ಮೋಹಕ ಮುರುಳಿ - ಎನ್.ಶಂಕರ ರಾವ್.

ಮಾಧವನ ಕೊಳಲಿಗೆ ರಾಧೆಯು ನಲಿದಳು
ಯಮುನೆಯ ತಟದಲಿ.

ಕೃಷ್ಣನ ಮೋಹಕ ಮಾತಿಗೆ ಬೆರಗಾದಳು ರಾಧೆಯು ಮುದದಲಿ/.

ಗೋಪಿಕೆಯರ ಜೊತೆ ಜೊತೆಯಲಿ ರಾಧಾ ಮಾಧವ ನರ್ತಿಸೆ ಗೋಕುಲದಿ

ಯಶೋಧಾ ಕಂದನ ಲೀಲೆಯ ಕಂಡು ಕಣ್ತುಂಬ ಆಸ್ವಾದಿಸೆ ರಾಧೆಯು ಚಂದದಿ /.

ರಾಧಾಕೃಷ್ಣ ಸ್ತ್ರೀ ಪುರುಷ ದೈವಾಂಶ ಅಂಶಗಳ ಸಮ್ಮಿಲನ

ಪಿಳ್ಳಂಗೋವಿಯ ನಾದದಿ ಅಮರ ಪ್ರೇಮವ ಪಸರಿಸಿದ ಜಗದಲಿ/.

ರಾಧ ಕೃಷ್ಣರ ಅಮರ ಪ್ರೇಮ ಮನಸ್ಥಿತಿಯ ನಿಜಕನ್ನಡಿ ಎಂದೆಂದೂ

ರಾಧೆಯ ಕರೆಗೆ ಮೋಹದಿ ಸ್ಪಂದಿಸಿದ ಜಗ ಪರಿಪಾಲಕ ತಾ ಎಂದು/.

ಚೆಲುವು ಒಲವು ಪ್ರೇಮ ರಾಗದ ಅಚಲ ವಿಶ್ವಾಸ ಬಾಳಲಿ

ರಾಧಾ ಕೃಷ್ಣರ ಮಿಲನ ಛಾಯಾ ಚಿತ್ತಾರದ ಭ್ರಮೆ ಜಗದಲಿ/.

ಗೀತೆಯ ಸಾರ ಜಗಕೆ ಧಾರೆ ಎರೆದ ಜಗದ್ದೋದ್ಧಾರಕ ಶ್ರೀಕೃಷ್ಣ
ರಾಧೆಯ ಭಾವ ತರಂಗ ಅನುರಾಗ ಬಂಧ ಅರಿತ
ಶ್ರೀಕೃಷ್ಣ//.

ನೇಸರ

ಕಂದಾ ನೋಡಲ್ಲಿ
ನೇಸರ
ಬಾನಂಗಳದ ಚತುರ/
ಬೆಂಕಿಯ ಚೆಂಡಂತೆ
ಕಂಗೊಳಿಸುವ
ಅಪಾರ ಅದ್ಭುತ ಸೌರಶಕ್ತಿ//.

ಆಕಾಶದಲ್ಲಿನ ದಿವ್ಯ ಶಕ್ತಿ
ಸೌರಮಂಡಲದ ಮಧ್ಯ ವರ್ತಿ/
ಗ್ರಹಗಳೆಲ್ಲವೂ
ಪರಿಕ್ರಮಿಸುವ ದಿವ್ಯ ಶಕ್ತಿ
ಭುವಿಯ ಮೇಲಣ ಸೌರ ಶಕ್ತಿ//.

ಸಮಸ್ತ ಜೀವರಾಶಿಗೆ ಆಧಾರ ನಕ್ಷತ್ರ
ದ್ಯುತಿಸಂಶ್ಲೇಷಣೆಯ ಕ್ರಿಯೆಯ ಮೂಲ ತತ್ವ/
ಪ್ರಕೃತಿಯ ಹವಾಮಾನ ನಿಯಂತ್ರಕ
ರವಿ ತೇಜ ಗ್ರಹ ರಾಜ//.

ಉಪಸ್ಥಿತಿಯಿಂದ ದಿನವನ್ನೂ
ಅನುಪಸ್ಥಿತಿಯಿಂದ ರಾತ್ರಿಯನ್ನೂ ನಿರ್ಮಿಸುತ/ ಹೊಳಪಿನ ತಟ್ಟೆಯಾಕಾರದ
ಸೂರ್ಯ ದೇವ
ಅಲೌಕಿಕ ಶಕ್ತಿ ರೂಪ
ನಿನಗೆ ನಮನ//.

ಸೀತಕ್ಕನ ದರ್ಬಾರ್ - ಟಿ ಎಸ್ ಶ್ರವಣ ಕುಮಾರಿ.

ನಮ್ಮ ಸೀತಕ್ಕನಿಗೆ ಅವರ ತಂದೆ ವೆಂಕಟೇಶ ಭಟ್ಟರು ಹೆಸರಿಟ್ಟ ಘಳಿಗೆ ಯಾವುದೋ ಗೊತ್ತಿಲ್ಲ. ಐವರು ಗಂಡು ಮಕ್ಕಳಾದ ನಂತರ ಹುಟ್ಟಿದ ಕುಲಪುತ್ರಿಗೆ ಪರಮ ಸಾಧ್ವಿ ತಮ್ಮಮ್ಮನ ಹೆಸರೆಂದು ಸೀತಾಲಕ್ಷ್ಮಿಯೆಂದು ಅಚ್ಚೆಯಿಂದ ಕರೆದರು. ಆದರೆ ಅವಳು ಬೆಳೆಯುತ್ತಾ ಹೋದ ಹಾಗೆ ಅವಳಿಗೆ ಸೀತೆಗಿಂತ ದುರ್ಗಿಯೋ, ಚಾಮುಂಡಿಯೋ ಚೆನ್ನಾಗಿ ಒಪ್ಪುತ್ತಿತ್ತೆಂದು ಅವರಿವರು ಅಂದು ಆಡಿ ಮಾಡಿದರೆ ಭಟ್ಟರೇನು ಮಾಡಲಾದೀತು? ಒಬ್ಬಳೇ ಮಗಳನ್ನು ಕೆಳಗಿಟ್ಟರೆ ಇರುವೆ ಕಚ್ಚೀತು, ಮೇಲಿಟ್ಟರೆ ಕಾಗೆ ಕಚ್ಚೀತು ಎನ್ನುವಂತೆ ಮುಚ್ಚಟೆಯಿಂದ ಸಾಕಿ ಸಾಕಷ್ಟು ಅನುಕೂಲವಾಗಿದ್ದ ಕುಟುಂಬದ ಒಬ್ಬನೇ ಮಗ ರಾಮರಾಯನಿಗೆ ಮದುವೆ ಮಾಡಿಕೊಟ್ಟರು. ಒಬ್ಬಳೇ ಸೊಸೆಯಾಗಿದ್ದು, ಮನೆತುಂಬಾ ಆಳುಕಾಳುಗಳಿದ್ದ ಮನೆಯಾದ್ದರಿಂದ ತವರು ಮನೆಯ ದರ್ಬಾರೇ ಅಲ್ಲೂ ಮುಂದುವರೆದು ಸೀತಕ್ಕನ ನಸೀಬು ಚೆನ್ನಾಗಿಯೇ ಸಾಗಿತ್ತು. ಅತ್ತೆಗೆ ಒಂದೇ ಕುಡಿಯಿದ್ದರೂ ಸೊಸೆ ಮಾತ್ರ ನಾಲ್ಕು ಗಂಡು, ಒಂದು ಹೆಣ್ಣನ್ನು ಹೆತ್ತು, ಮನೆಯನ್ನು ನಂದಗೋಕುಲವನ್ನಾಗಿ ಮಾಡಿದಳೆಂದು ಅತ್ತೆಮಾವಂದಿರ ಅತೀವ ಪ್ರೀತಿಗೆ ಪಾತ್ರಳಾಗಿದ್ದಳು. ಕಾಲ ಕ್ರಮೇಣ ಅತ್ತೆ ಮಾವಂದಿರು ಕಾಲವಾದದ್ದೇನೋ ಸರಿ. ಆದರೆ ರಾಮರಾಯನೂ ಮಕ್ಕಳು ಕೈಗೆ ಬರುವ ಮುಂಚೆಯೇ ಈಜಲು ಹೋಗಿ ನೀರುಪಾಲಾಗಿ ಸತ್ತತ್ತು ದುರ್ದೈವವೇ ಸರಿ. ಹಾಗೆಂದು ಸೀತಕ್ಕನೇನೂ ಅಳುತ್ತಾ ತಲೆಮೇಲೆ ಕೈಹೊತ್ತು ಕುಳಿತುಕೊಳ್ಳಲಿಲ್ಲ. ಸೆರಗನ್ನು ಸೊಂಟಕ್ಕೆ ಸಿಕ್ಕಿಸಿಕೊಂಡು ಸಮಸ್ತ ವ್ಯವಹಾರವನ್ನು ಸಮರ್ಥವಾಗಿ ಕೈಗೆ ತೆಗೆದುಕೊಂಡಳು. ಆಸ್ತಿ ಪಾಸ್ತಿಯನ್ನು ಚೆನ್ನಾಗಿ ರೂಢಿಸಿಕೊಂಡು, ಮಕ್ಕಳನ್ನೂ ಕೈಜಾರಿ ಹೋಗದಂತೆ ನಿಗಾ ವಹಿಸಿದಳು. ಒಳ್ಳೊಳ್ಳೆಯ ಕಡೆ ನೋಡಿ ಸೊಸೆಯರನ್ನೂ, ಅಳಿಯನನ್ನೂ ತಂದು ತನ್ನ ಅತ್ತೆತನಕ್ಕೆ ಯಾವ ಧಕ್ಕೆಯೂ ಬರದಂತೆಯೇ ನೋಡಿಕೊಂಡಳು.

ಚಿಕ್ಕಂದಿನಿಂದಲೂ ಅಮ್ಮನ ಅಂಕೆಯಲ್ಲೇ ಬೆಳೆದ ಮಕ್ಕಳಿಗೆ ಅವಳು ಆಡಿದ್ದೇ ವೇದವಾಕ್ಯ. ತಾವು ಮಾತ್ರವಲ್ಲ; ತಮ್ಮ ಹೆಂಡತಿಯರೂ ಅಮ್ಮ ಹಾಕಿದ ಗೆರೆಯನ್ನು ದಾಟದಂತೆ ನೋಡಿಕೊಳ್ಳುತ್ತಿದ್ದರು. ಸೊಸೆಯರಿರಲಿ, ಅಳಿಯನಿಗೂ ಅತ್ತೆಯೆಂದರೆ ಒಂದು ಭಯಮಿಶ್ರಿತ ಗೌರವ ಭಾವವೇ ಇತ್ತು ಎನ್ನುವಾಗ ಓದುಗರಿಗೆ ನಮ್ಮ ಸೀತಕ್ಕನ ಜರ್ಬು ಹೇಗಿತ್ತೆಂಬ ಅಂದಾಜಾಗಬಹುದು. ಹಾಗೆಂದು ಎಲ್ಲವೂ ಸರಿಯಾಗಿತ್ತೆಂದೇನೂ ಅಲ್ಲ… ಮನೆಯೆಂದ ಮೇಲೆ ಆಗೀಗ ಮಾಡಿನ ಮೇಲಿನಿಂದ ಕಾಗೆಗಳು 'ಕಾವ್ ಕಾವ್' ಎನ್ನುತ್ತಿದ್ದವು, ಬೆಕ್ಕುಗಳು ಅಡುಗೆಮನೆಯಲ್ಲೇ 'ಮಿಯಾವ್' ಅನ್ನುತ್ತಿದ್ದವು. ಜಗಲಿಯ ಮೇಲೆ ನಾಯಿಗಳು 'ಭೌ'ಗುಡುತ್ತಿದ್ದವು, ಮಂಗಗಳು ಮನೆಯಲ್ಲೆಲ್ಲಾ ಹಾರಾಡಿ ಕುಣಿದಾಡುತ್ತಿದ್ದವು. ಆದರೆ ಎಲ್ಲರ ಅರಚಾಟಗಳೂ ಸೀತಕ್ಕನ ಒಂದು ಆವಾಜಿಗೆ ತಣ್ಣಗಾಗಿ ಸದ್ದು ಬಂದಿದ್ದೇ ಸುಳ್ಳೆನ್ನುವಂತೆ ಕರಗಿಹೋಗುತ್ತಿದ್ದವು! ಹಾಗೂ ಹೀಗೂ ಇಷ್ಟರಮೇಲೂ ಏನೋ ಧೈರ್ಯ ಮಾಡಿ, ಮಗನೋ, ಸೊಸೆಯೋ ದನಿಯೆತ್ತಿದರೆ ಸೀತಕ್ಕ "ಇಷ್ಟವಿದ್ದೋರು, ಇಲ್ಲಿರ್ಬೋದು, ಇಲ್ಲದೋರು ನಂಗೂ, ಈ ಆಸ್ತಿಗೂ ಏನೂ ಸಂಬಂಧ್ವಿಲ್ಲ ಅಂತ ಬರ್ಕೊಟ್ಟು ಹೋಗ್ತಿರ್ಬೋದು, ನಾನಿನ್ನೇನು ಸಾಯ್ತೀನಿ ಅನ್ನೋತಂಕ ನಾನು ಭಾಗವೂ ಮಾಡಲ್ಲ; ವಿಲ್ಲೂ ಬರೆಯಲ್ಲ" ಎಂದು ಮಂಗಳಾರತಿ ಎತ್ತಿದ ತಕ್ಷಣ, ಹೇಗೇಗೆ ಹಂಚಿಕೊಂಡರೂ ಒಬ್ಬೊಬ್ಬರಿಗೂ ಕೋಟಿ ರೂಪಾಯಿಗೆ ಕಮ್ಮಿಯಿಲ್ಲದಂತೆ ಭಾಗ ಬರುವಾಗ ಯಾರು ತಾನೇ ಬಿಟ್ಟು ಹೋದಾರು? ಒದೆ ತಿಂದ ನಾಯಿ ಕುಯ್ಗುಟ್ಟುತ್ತಾ ಮೂಲೆ ಸೇರುವಂತೆ ಗೊಣಗುಡುತ್ತಾ ತಮ್ಮ ತಮ್ಮ ಗೂಡು ಸೇರಿಕೊಳ್ಳುತ್ತಿದ್ದರು. ಗಂಡುಮಕ್ಕಳೂ, ತಾವೂ ಸಮಾಧಾನ ಮಾಡಿಕೊಂಡು ತಮ್ಮ ಹೆಂಡಂದಿರಿಗೆ ಸಮಾಧಾನ ಹೇಳುತ್ತಿದ್ದರು "ಅಮ್ಮನಿಗೂ ವಯಸ್ಸಾಗ್ತಾ ಬಂತು. ಅವ್ರೇನು ಕೆಟ್ಟವ್ರಲ್ಲ, ಮಾತು ಜೋರಷ್ಟೆ, ಮನಸ್ಸು ಬಂಗಾರ; ಬೇಗ್ನೆ ನಮ್ಮಪ್ಪನ್ನ ಕಳ್ಕೊಂಡ್ ಮೇಲೆ ನಮ್ಮನ್ನೆಲ್ಲಾ ಕಣ್ಣಲ್ಲಿಟ್ಕೊಂಡು ಸಾಕಿದಾರೆ. ಹಿಂದಿದ್ದಷ್ಟು ದಿನ ಮುಂದಿರ್ತಾರಾ, ಸ್ವಲ್ಪ ಸೈರಣೆ ತಂದ್ಕೋ, ಕೋಟಿ ರೂಪಾಯಿ ಆಸ್ತಿ ಪುಕ್ಸಟ್ಟೆ ಅಲ್ಲ" ಅಂತ. ಅಂತೂ ಕದನ ವಿರಾಮ ಘೋಷಣೆಯಾಗಿ ಪಿ.ಓ.ಕೆ. ಯಂತೆ ಒಂದಷ್ಟು ದಿನ ಶಾಂತಿಪಾಲನೆಯಾಗುತ್ತಿತ್ತು- ಮತ್ತೊಂದು ಜಗಳ ಶುರುವಾಗುವ ತನಕ…

‘ಹಿಂದಿದ್ದಷ್ಟು ದಿನ ಮುಂದೆ ಇರ್ತಾರಾ’ ಎಂದು ಸೊಸೆಯರೂ ತಾತ್ಕಾಲಿಕವಾಗಿ ಸಮಾಧಾನ ಮಾಡಿಕೊಂಡರೂ, ತಮಗೇ ಮೊಮ್ಮಕ್ಕಳಾಗಿ ಒಂದು ತಿಂದರೆ ಕಡಿಮೆ, ಎರಡು ತಿಂದರೆ ಹೆಚ್ಚು ಎನ್ನುವಂತಾದಾಗಲೂ ಇನ್ನೂ ಹಿದಕವರೆ ಕೂಟಿನೊಂದಿಗೆ ರಾಗಿಮುದ್ದೆಯನ್ನು ತುಪ್ಪದೊಂದಿಗೆ ಮೆದ್ದು ಅರಗಿಸಿಕೊಳ್ಳುವಷ್ಟು ಗಟ್ಟಿಮುಟ್ಟಾಗಿದ್ದ ಅತ್ತೆಯನ್ನು ನೋಡಿದಾಗ ತಮ್ಮ ಸೊಸೆತನ ಮುಗಿಯುವುದೇ ಸುಳ್ಳೇನೋ ಅನ್ನಿಸಿ ನಿಟ್ಟುಸಿರಿಡುತ್ತಿದ್ದರು. ಮೊದಲಿನಿಂದಲೂ ಊಟ, ಉಪಚಾರಗಳಲ್ಲಿ ಸೊಗಸುತನವನ್ನೇ ಕಂಡುಂಡ ಸೀತಕ್ಕ ತಮ್ಮ ಊಟ, ತಿಂಡಿಯ ಮೆನು ಎಲ್ಲರ ಮನದಲ್ಲೂ ಅಚ್ಚಾಗಿ ಹೋಗುವಂತೆ ನೋಡಿಕೊಂಡಿದ್ದರು. ಇಡ್ಲಿಯೊಂದಿಗೆ ಉದ್ದಿನ ಒಡೆ, ನೆಂಚಿಕೆಗೆ ಗಟ್ಟಿ ಚಟ್ನಿ, ಸಣ್ಣ ಈರುಳ್ಳಿ ಹಾಕಿದ ಸಾಂಬಾರು; ಗರಿಗರಿ ಕೆಂಪನೆ ಮಸಾಲೆ ದೋಸೆಗೆ ಮೇಲೆ ಬೆಣ್ಣೆ; ಪೂರಿಗೆ ಸಾಗು; ಹುಳಿ ಮಾಡಿದ ದಿನ ಹಪ್ಪಳ, ಸಂಡಿಗೆ, ಬಾಳಕ; ಅವರೆಕಾಯಿನ ಕಾಲದಲ್ಲಂತೂ ದಿನಕ್ಕೊಂದು ಬಗೆಯ ಅವರೆಕಾಯಿನ ಖಾದ್ಯ… ಎಂಭತ್ತರ ವಯಸ್ಸಿನಲ್ಲಿ ಮರಿಮಗನಿಂದ ಕನಕಾಭಿಷೇಕ ಮಾಡಿಸಿಕೊಂಡು ವಜ್ರದೇಹಿಯಾದ ಸೀತಕ್ಕನಿಗೆ ತೊಂಭತ್ತು ವರ್ಷವಾದಾಗಲೂ, ತಿನ್ನುವ ಅಳತೆ ಸ್ವಲ್ಪ ಕಮ್ಮಿಯಾಯಿತೇ ಹೊರತು ವೈವಿಧ್ಯತೆಯಲ್ಲಿ ಮೋಸ ಮಾಡಿಕೊಳ್ಳಲಿಲ್ಲ. ಗುಂಡಪ್ಪನ ಹೊಟೇಲಿನ ಮೈಸೂರು ಪಾಕು, ಆಚಾರ್ ಬಜ್ಜಿಯಿಂದ ಮೆಣಸಿನ ಕಾಯಿ ಬಜ್ಜಿ, ಪಕೋಡ ಇಂತವೆಲ್ಲಾ ಆಗಾಗ ನೈವೇದ್ಯವಾಗುತ್ತಿದ್ದವು. ಯಾರೊಬ್ಬರ ಬಾಯಿಂದ ಬರುವಷ್ಟಿಲ್ಲ, ತಾನೇ ಸ್ವತಃ ಕೋಡುಬಳೆ, ಚಕ್ಕುಲಿ, ತೇಂಗೊಳ್ಳು, ಬೇಸನ್ ಉಂಡೆ, ಕೊಬ್ಬರಿ ಮಿಠಾಯಿ ಇಂತವನ್ನೆಲ್ಲಾ ಹದವಾಗಿ ಅಂತೆಯೇ ಧಾರಾಳವಾಗಿ ಎಲ್ಲರೂ ನಾಲ್ಕು ದಿನ ತಿನ್ನುವಂತೆ ಮಾಡಿ ತಾನೂ ತಿಂದು ತೃಪ್ತಳಾಗುತ್ತಿದ್ದಳು. ತಿನ್ನುವುದಕ್ಕೂ ಸೈ, ಬಡಿಸುವುದಕ್ಕೂ ಸೈ ನಮ್ಮ ಸೀತಕ್ಕ.

ತನ್ನ ಆರೋಗ್ಯವನ್ನು ಕಾಪಾಡಿಕೊಳ್ಳುವಲ್ಲೂ ಸೀತಕ್ಕನ ಶ್ರದ್ಧೆ ನೋಡಿ ಕಲಿಯುವಂತದು. ದೇವರ ಮನೆಯನ್ನು ದಿನವೂ, ಗುಡಿಸಿ, ಒರೆಸಿ ಪೂಜೆಯ ಪಾತ್ರೆಗಳನ್ನೆಲ್ಲಾ ಫಳಫಳ ತೊಳೆದಿಡುವುದು ಅವಳದ್ದೇ ಕೆಲಸ. ಇಂದಿಗೂ ತನ್ನ ಸೀರೆ ಬಟ್ಟೆಯನ್ನು ತಾನೇ ಒಗೆದು ಹರವಿಕೊಳ್ಳುತ್ತಾಳೆ. ಈ ವಯಸ್ಸಿನಲ್ಲೂ ಒಲೆಯ ಮುಂದೆ ಅವಳದ್ದೇ ಆಧಿಪತ್ಯ. ಸೊಸೆಯರೇನಿದ್ದರೂ ಹೆಚ್ಚಿಕೊಡು, ರುಬ್ಬಿಕೊಡು, ತುರಿದುಕೊಡು ಇಂತಹ ಸುತ್ತುಕೆಲಸಕ್ಕಷ್ಟೇ. ಉಪ್ಪು, ಹುಳಿ, ಖಾರದ ಹದ ಜಾದುವಿನಂತೆ ಅಡುಗೆಯಲ್ಲಿ ಬಿದ್ದು ಎಲ್ಲರೂ ಲೊಟ್ಟೆಹೊಡೆದು ತಿನ್ನುವಂತೆ ಇರುತ್ತಿದ್ದುದರಿಂದ ಯಾರಿಗೂ ಆ ಜಾಗವನ್ನು ಆಕ್ರಮಿಸಿಕೊಳ್ಳಬೇಕೆಂದು ಅನ್ನಿಸಲೇ ಇಲ್ಲ ಬಿಡಿ. ಆರೋಗ್ಯದಲ್ಲಿ ಸ್ವಲ್ಪ ಏರುಪೇರಾದರೂ, ಪಥ್ಯ, ಉಪವಾಸ, ಕಷಾಯ, ಚೂರ್ಣ, ಭಸ್ಮಗಳಲ್ಲೇ ವಾಸಿಮಾಡಿಕೊಳ್ಳುತ್ತಿದ್ದಳೇ ಹೊರತು ತನಗಾಗಿ ಆಸ್ಪತ್ರೆಯ ಮುಖ ನೋಡಿದ್ದೇ ಇಲ್ಲ. ಹಣ್ಣು, ತರಕಾರಿಗಳನ್ನು ಧಾರಾಳವಾಗಿ ಬಳಸಿ ಸುಲಭಕ್ಕೆ ಯಾವ ಖಾಯಿಲೆಯೂ ಹತ್ತಿರ ಬಾರದಂತೆ ನೋಡಿಕೊಂಡಿದ್ದಾಳೆ. ಅವಳಮ್ಮನಿಂದ ಸ್ವಲ್ಪ ಮಟ್ಟಿಗೆ ಮನೆವೈದ್ಯವನ್ನೂ ಕರಗತ ಮಾಡಿಕೊಂಡಿದ್ದು ಸಣ್ಣ ಪುಟ್ಟ ಜಾಡ್ಯಕ್ಕೆ ಬಗ್ಗುವವಳೇ ಅಲ್ಲ, ಸೆಡ್ಡು ಹೊಡೆದು ನಿಲ್ಲುವಂತ ಗಟ್ಟಿ ಹೆಂಗಸು. ಮಕ್ಕಳಿಗೂ ಒಂದು ಹಂತದ ತನಕ ಅದೇ ಚಾಲ್ತಿಯಲ್ಲಿದ್ದು, ಕಾಲಾಂತರದಲ್ಲಿ ಬದಲಾದದ್ದು ಬೇರೆ ವಿಷಯ. ಈಗೀಗ ಮಕ್ಕಳು, ಮೊಮ್ಮಕ್ಕಳು ಮಾತ್ರೆ, ಸಿರಪ್ಪುಗಳಿಗೆ ಶರಣಾದಾಗ ಯಾಕೋ ಗಲಾಟೆ ಮಾಡದೆ ‘ಅವರವರ ಹಣೆಪಾಡು, ಈಗಿನವಕ್ಕೆ ತಿನ್ನುವ ಚಪಲವೂ ಇಲ್ಲ; ಅರಗಿಸಿಕೊಳ್ಳೋ ಯೋಗ್ಯತೆಯೂ ಇಲ್ಲ’ ಎಂದು ಸುಮ್ಮನೆ ಬಿಟ್ಟಿದ್ದಾಳೆ.

ಇಂಥಹ ನಮ್ಮ ಸೀತಕ್ಕನಿಗೆ ಈಗೊಂದು ವಾರದ ಕೆಳಗೆ ಬೆಳಗ್ಗೆ ಏಳುವಾಗಲೇ ಏಕೋ ಎದೆಯಲ್ಲಿ ಛುಳ್ ಛುಳ್ ಎಂದು ನೋವು ಆರಂಭವಾಗಿ ಒದ್ದಾಡಿಹೋಗುವಂತಾಯಿತು. ಎಂದೂ ಹೀಗೆ ನರಳದ ಅಮ್ಮ ನೋವಿನಿಂದ ಕಂಗೆಟ್ಟಾಗ ಮಕ್ಕಳು ಅವಳ ವಿರೋಧವನ್ನೂ ಲೆಕ್ಕಿಸದೆ ಒಂದು ದೊಡ್ಡ ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆಗೆ ಕೊಂಡೊಯ್ದು ತಕ್ಷಣ ಸೇರಿಸಿದ್ದೇ. ಎದೆನೋವು ಎಂದ ತಕ್ಷಣ ಆಸ್ಪತ್ರೆಯವರೂ ಸೀದಾ ಐ.ಸಿ.ಯು ಒಳಗೆ ಹಾಕಿದ್ದೇ. ಸ್ಪೆಷಾಲಿಟಿ ಹಾಸ್ಪಿಟಲ್ ಎಂದ ಮೇಲೆ ಕೇಳಬೇಕೆ, ಒಂದಾದ ಮೇಲೊಂದು ಪರೀಕ್ಷೆಯನ್ನು ಮೂರ್‍ನಾಲ್ಕು ದಿನಗಳ ಕಾಲ ಸಾಂಗವಾಗಿ ನೆರವೇರಿಸಿದರು. ಮಾತೃಭಕ್ತಿಯನ್ನು ನಿರೂಪಿಸಲು ಅವಕಾಶ ಸಿಕ್ಕಿರುವಾಗ ಅದನ್ನು ಕಳೆದುಕೊಳ್ಳಲು ಇಚ್ಚಿಸದೆ ಮಕ್ಕಳೂ ಆಸ್ಪತ್ರೆಯಲ್ಲಿ ಹೇಳಿದ ಎಲ್ಲಾ ಪರೀಕ್ಷೆಗಳನ್ನೂ ಮಾಡಿಸಿ ಕೃತಾರ್ಥರಾದರು. ಸೊಸೆಯರಿಗೂ ಒಬ್ಬರೊಂದಿಗೆ ಒಬ್ಬರು ಹೇಳಿಕೊಳ್ಳಲಾಗದ ಏನೋ ನಿರೀಕ್ಷೆ. ಯಾವುದೋ ಒಂದು ಖಾಯಿಲೆಯೆಂದು ಹೆಸರಿಟ್ಟರೆ ಆ ನೆವದಲ್ಲಿ ಒಂದು ವಿಲ್ಲನ್ನು ಮಾಡಿಸಿ ತಮ್ಮ ಭಾಗಕ್ಕೆ

ಬರುವುದಾದರೂ ಏನು ಎಂದು ನಿಶ್ಚಿಂತೆಯಾಗಬಹುದು ಎನ್ನುವ ಒಂದು ದೂರದ ಆಸೆ. ದಿನವೂ ಗಂಡಂದಿರು ಮನೆಗೆ ಬಂದ ತಕ್ಷಣವೇ "ಏನೂಂತ ಹೇಳಿದ್ರು?" ಎನ್ನುವ ಪ್ರಶ್ನೆಗೆ "ಇನ್ನೂ ಏನೂ ಗೊತ್ತಾಗಿಲ್ಲ" ಎನ್ನುವ ಉತ್ತರ ಬಂದಾಗ "ಏನೋ ದೊಡ್ಡ ಖಾಯಿಲೆಯೇ ಇರಬಹುದು" ಎಂದು ತಮ್ಮ ತಮ್ಮಲ್ಲೇ ತೀರ್ಮಾನಕ್ಕೂ ಬಂದರು. ಸೀತಕ್ಕನಿಗೋ ಆಸ್ಪತ್ರೆಯ ಊಟ, ತಿಂಡಿ, ಸರಿಹೊಂದದೆ "ಇದು ಬರಿ ವಾಯು ಅಷ್ಟೇ. ಶುಂಠಿ ಲೇಹ್ಯ, ಜೀರಕಾರಿಷ್ಠ ನಾಕು ದಿನ ತೊಗೊಂಡರೆ ಸರಿಹೋಗತ್ತೆ ನನ್ನ ಮನೆಗೆ ಕಳಿಸಿ" ಎಂದು ಆಕೆ ಹಲುಬಿದರೂ, ಆಸ್ಪತ್ರೆಯವರಿಗೆ ಒಬ್ಬ ಪೇಶೆಂಟಿನಿಂದ ವಸೂಲಾಗುವಷ್ಟು ವಸೂಲಾಗದೆ ಕಳಿಸುವುದಾದರೂ ಹೇಗೆ! ದಿನಕ್ಕೊಂದು ಹೊಸ ಪರೀಕ್ಷೆಯನ್ನು ಮಾಡುತ್ತಾ ಸೀತಕ್ಕನಿಗೆ ಏನೋ ಆಗೇ ಬಿಟ್ಟಿದೆ ಎನ್ನುವ ಭ್ರಮೆಯನ್ನು ಮಕ್ಕಳಿಗೆ ಹುಟ್ಟಿಸಿದರು. ಆದರೆ ಸೀತಕ್ಕ ಅಂತಹ ಭ್ರಮೆಗೆ ಸಿಗುವವಳೇ?!

ಎಷ್ಟೆಂದು ಸಹಿಸಿಕೊಂಡಾಳು. ಐದನೆಯ ದಿನ "ಇನ್ನೊಂದು ಗಂಟೆಯೊಳಗೆ ಇಲ್ಲಿಂದ ಕಳಿಸದಿದ್ದರೆ ಡ್ರಿಪ್ ಬಾಟಲನ್ನು ಕಿತ್ತುಹಾಕಿ ನಾನೇ ಎದ್ದುಹೋಗ್ತೀನಿ" ಎಂದು ಐ.ಸಿ.ಯು.ನಲ್ಲೇ ಒಂದು ದೊಡ್ಡ ಆವಾಜ್ ಹಾಕಿದಾಗ ಇದ್ದ ಬದ್ದ ಸಿಸ್ಟರುಗಳೆಲ್ಲಾ ಓಡಿ ಹೋಗಿ ಡಾಕ್ಟರನ್ನು ಕರೆದುಕೊಂಡು ಬಂದು ಅವರಿಂದ ಹೇಳಿಸಲು ಪ್ರಯತ್ನಿಸಿದರು. ಡಾಕ್ಟರದೇನು ಭಯವೇ ಸೀತಕ್ಕನಿಗೆ "ನೋಡಪ್ಪಾ ನೀನು ನನ್ನ ಮೊಮ್ಮಗನ ವಯಸ್ಸಿನೋನು. ನಂಗೇನೂ ಆಗಿಲ್ಲ ಅಂತ ನಂಗೂ ಗೊತ್ತು, ನಿಂಗೂ ಗೊತ್ತು. ಸುಮ್ನೆ ಕಳಿಸಿದ್ಯಾ ಸರ್ಹೋಯ್ತು. ಇಲ್ಲಾಂದ್ರೆ ಎದ್ದು ಹೋಗ್ತೀನಷ್ಟೇ" ಎಂದಾಗ ಆ ಎಳೆಡಾಕ್ಟರೂ ಸ್ವಲ್ಪ ಹೆದರಿ "ಆಯ್ತು ಬಿಲ್ ಸೆಟ್ಲ್ ಮಾಡೋಕೆ ಅರ್ಧ ಗಂಟೆ ಟೈಂ ಕೊಡಿ. ಮುಂದೇನಾದ್ರೂ ಹೆಚ್ಚು ಕಮ್ಮಿಯಾದ್ರೆ ನನ್ ಜವಾಬ್ದಾರೀನೇ ಅಂತ ನಿಮ್ಮಗ ಬರ್ಕೊಟ್ಟು ಕರ್ಕೊಂಡು ಹೋಗ್ಲಿ" ಎಂದು ಹೆದರಿಸಲು ನೋಡಿದರು. ಹೆದರುವ ಪಿಂಡವೇ ಸೀತಕ್ಕ! "ಅಯ್ಯೋ ಸತ್ರೆ ಸಾಯ್ತೀನೇಳಯ್ಯಾ. ತೊಂಭತ್ಮೂರು ವರ್ಷದ ಮುದ್ಕಿ ಸತ್ರೆ ಮನೇಲಿ ಹಬ್ಬ ಮಾಡ್ಕೊಂಡು ತಿಂತಾರೆ. ಅಳೋರ್ಯಾರು. ಆಯಸ್ಸಿರೋ ತಂಕ ಯಮಧರ್ಮನ ಭಂಟ್ರೂ ಹತ್ರ ಬರಲ್ಲ" ಎಂದು ಪಕ್ಕದಲ್ಲಿದ್ದ ಸಿಸ್ಟರಿಗೆ "ನೀನು ಈ ಸೂಜಿ ತೆಗೀತೀಯಾ ನಾನೇ ತೆಗೀಲಾ?" ಜಬರಿಸಿದಳು. ತನ್ನ ಮುಖವನ್ನೇ ನೋಡಿದವಳಿಗೆ ಡಾಕ್ಟರ್ "ತೆಗೆದುಬಿಡಮ್ಮ. ಡಿಸ್ಚಾರ್ಜ್ ಮಾಡಿಬಿಡೋಣ. ಅವರ ಮಗನ ಹತ್ರ ಸೈನ್ ಮಾಡಿಸ್ಕೋತೀನಿ ಅವ್ರದ್ದೇ ಜವಾಬ್ದಾರೀಂತ" ಇನ್ನೂ ಮಾತೇ ಮುಗಿಸಿರಲಿಲ್ಲ, "ಕೊಡಯ್ಯಾ ಆ ಪೇಪರ್ರು, ಮಗ ಯಾಕೆ? ನಾನೇ ಸೈನ್ ಮಾಡ್ಕೊಡ್ತೀನಿ" ಎಂದು ದಬಾವಣೆ ಮಾಡಿ ಅಂತೂ ಡಿಸ್ಚಾರ್ಜ್ ಮಾಡಿಸಿಕೊಂಡು ಮನೆಗೆ ಹೊರಟಳು.

ಬೆಳಗ್ಗೆ ತಿಂಡಿ ತಿಂದು ಅತ್ತೆಗೇನಾಗಿರಬಹುದು ಎನ್ನುವ ಚರ್ಚೆಯಲ್ಲಿ ಮುಳುಗಿದ್ದ ಸೊಸೆಯರಿಗೆ ಕಾರಿನ ಹಾರ್ನ್ ಕೇಳಿ ಅಚ್ಚರಿಯಾಯಿತು. ಊಟ ಮಾಡಕ್ಕೆ ಒಂದು ಗಂಟೆಗೆ ಬರಬೇಕಾದ ಆಸ್ಪತ್ರೆ ಡ್ಯೂಟಿಯಲ್ಲಿದ್ದ ಗಂಡಸರು ಈಗ್ಲೇ ಬಂದಿದ್ದು ಅಂದ್ರೆ 'ಏನಾದ್ರೂ ಆಗೇ ಹೋಯ್ತೆ?!' ಎಂದು ಒಬ್ಬರು ಇನ್ನೊಬ್ಬರ ಮುಖದಲ್ಲಿ ಉತ್ತರ ಹುಡುಕಿ ಏನೋ ನಿರೀಕ್ಷೆಯಿಂದ ತಲೆಬಾಗಿಲಿಗೆ ಬಂದರು. ಕಾರಿನಿಂದಿಳಿದ ಸೀತಕ್ಕ ಮದುವೆಮನೆಯಿಂದ ಬಂದಂತ ಸಂಭ್ರಮದಿಂದ ಗೇಟು ತೆಗೆಯುತ್ತಾ ಅಚ್ಚರಿಯಿಂದ ನೋಡುತ್ತಿದ್ದ ಸೊಸೆಗೆ "ಬಿಸಿಯಾಗಿ ಚೆನ್ನಾಗಿ ಕಾಯಿತುರಿ ಹಾಕಿ ಒಂದಿಷ್ಟು ಉಪ್ಪಿಟ್ಟು ಮಾಡೋಗು, ನಾಕ್ದಿನದಿಂದ ಸಪ್ಪಸಪ್ಪಗಿನ ಊಟ ತಿಂಡಿ ತಿಂದು ನಾಲಿಗೆ ಕೆರ ಆದಂಗಾಗಿದೆ" ಎನ್ನುತ್ತಾ ಬಲಗಾಲಿಟ್ಟು ಗೃಹಪ್ರವೇಶ ಮಾಡಿದರು. ಮುಖ ಮುಖ ನೋಡಿಕೊಂಡ ಸೊಸೆಯರು ಮಾತಿಲ್ಲದೆ ಅಡುಗೆಮನೆಗೆ ಸರಿದರು.

ದಿವ್ಯ ಘಳಿಗೆ - -ಡಾ.ಶ್ರೀಲಕ್ಷ್ಮಿ ಶ್ರೀನಿವಾಸನ್

ಭಾವ ಗೀತೆಗಳು ನನಗೆ ಅತ್ಯಂತ ಪ್ರಿಯವಾದ ಸಂಗೀತ ಪ್ರಕಾರ. ಅಶ್ವಥ್ ಸಂಯೋಜನೆಗಳ ಪರಿಚಯವಾದ ಮೇಲಂತೂ ನನಗೆ ದಿನವೂ ಸುಗ್ಗಿ. ಮನೆಯವರು ಹಾಸ್ಯಮಾಡುವಷ್ಟು ನಾನದರಲ್ಲಿ ಮಗ್ನ. ಒಮ್ಮೆ ಯಾವುದೊ ಸಿ.ಡಿ ಯಲ್ಲಿ “ಇಳಿದು ಬಾ ತಾಯಿ” ಹಾಡನ್ನು ಶ್ರೀಮತಿ. ಪಲ್ಲವಿಯವರು ಹಾಡುವುದನ್ನು ಕೇಳಿದೆ. ಆದರೆ ಅದು ಗಂಗಾವತರಣ ಅಲ್ಲ. ಇದ್ಯಾವ ಹಾಡು ಎಂದು ಹೆಚ್ಚಿನ ಗಮನ ಕೊಡುವಷ್ಟರಲ್ಲಿ ಹಾಡೆ ಮುಗಿದು ಹೋಯಿತು. ಧ್ವನಿಮುದ್ರಣವೂ ಚೆನ್ನಾಗಿರಲಿಲ್ಲ. ಬಿಟ್ಟು ಬಿಟ್ಟೆ.

ಇನ್ನೊಂದು ದಿನ ಆಸ್ಪತ್ರೆಗೆ ಹೋಗುವಾಗ ಮತ್ತೆ ಅದೇ ಹಾಡು. ಈ ಬಾರಿ ರಾಜೂ ಅನಂತಸ್ವಾಮಿಯವರ ಕಂಠದಲ್ಲಿ. ದಾರಿಯಲ್ಲಿ ಕಾರು ನಿಲ್ಲಿಸಿಯೆ ಬಿಟ್ಟೆ. ಪೂರ್ತಿ ಕೇಳಿದ ಮೇಲೆ ಮುಂದಿನ ಪ್ರಯಾಣ (ಸದ್ಯ. ಇಲ್ಲದಿದ್ದರೆ ಒಂದು ಅಪಘಾತ ಖಂಡಿತ ಆಗುತಿತ್ತು) ಮತ್ತೆ ಶುರು. ಯಾರ ಗೀತೆ? ಸಾಹಿತ್ಯವೇನು? ಯಾರ ಸಂಯೋಜನೆ ? ಇತ್ಯಾದಿಗಳ ಹುಡುಕಾಟ.

ಯಾವ ದಿವ್ಯ ಘಳಿಗೆಯಲ್ಲಿ ಒಂದು ಅದ್ಭುತ ಸಮ್ಮಿಲನ ಫಲವನ್ನು ಕೇಳಿದೆನೊ, ನನ್ನ ಪ್ರಾರ್ಥನೆಯ ರೂಪವೆ ಬದಲಾಗಿ ಹೋಯಿತು. ಹಾಡು ‘ಋತ ಚಿನ್ಮಯಿ ಜಗನ್ಮಾತೆಗೆ’ ಎಂಬ ಕುವೆಂಪು ಅವರ ರಚನೆ. ಸಂಯೋಜನೆ ಗಾರುಡಿಗ ಅಶ್ವಥ್ ಅವರದ್ದು. ರಾಜು ಅನಂತ ಸ್ವಾಮಿಯವರ ಅಸಾದೃಶ ಕಂಠ. ಕೇಳಿದಾಗೆಲ್ಲಾ ಮೂವರೂ ಸೇರಿ ನನ್ನ ಸುತ್ತಲ ಜಗತ್ತನ್ನು ಇಲ್ಲವಾಗಿಸಿ ಜಗನ್ಮಾತೆಯೊಡನೆ ನೇರ ಸಂಪರ್ಕ ಕೊಡಿಸುವರೊ ಎಂಬ ಭಾವ.

ಹಾಡಿನ ಸಾಹಿತ್ಯ

ಓಂ ಸಚ್ಚಿದಾನಂದ ತ್ರಿತ್ವ ಮುಖವಾದ ಪರಬ್ರಹ್ಮದಲ್ಲಿ
ಅಭವದೊತ್ತಾದೆ ಭವದ ಬಿತ್ತಾದೆ ಋತದ ಚಿತ್ತಾದೆ ನಿ.
ಇಳಿದು ಬಾ ಇಳೆಗೆ ತುಂಬಿ ತಾ ಬೆಳೆಗೆ ಜೀವ ಕೇಂದ್ರದಲ್ಲಿ
ಮತ್ತೆ ಮೂಡಿ ಬಾ ಒತ್ತಿ ನೀನೆನ್ನ ಚಿತ್ತ ಪೃಥಿವಿಯಲ್ಲಿ

ಋತದ ಚಿತ್ತಾಗಿ ವಿಶ್ವಗಳ ಸೃಜಿಸಿ ನಡೆಸುತಿಹ ಶಕ್ತಿಯೆ
ಅನ್ನ ಪ್ರಾಣಗಳ ಮನೋಲೋಕಗಳ ಸೂತ್ರಧರ ಯುಕ್ತಿಯೆ
ಅಖಿಲ ಬಂಧನದ ಹೃದಯದಲ್ಲಿ ಅವಿನಾಶಿ ಆಸಕ್ತಿಯೆ
ನಿನ್ನ ಅವತಾರವೆನ್ನ ಉದ್ಧಾರ ಬಾ ದಿವ್ಯ ಮುಕ್ತಿಯೆ

ಎಲ್ಲವನು ಮಾಡಿ ಎಲ್ಲರೊಳಗೂಡಿ ನೀನೆ ಎಲ್ಲವಾದೆ

ಜ್ಯೋತಿಯಾದರೂ ತಮೋಲೀಲೆಯಲಿ ಜಡದ ಮುದ್ರೆಯಾದೆ
ಎನಿತು ಕರೆದರೂ ಓಕೊಳ್ಳದಿರು ಅಚಿನ್ನಿದ್ರೆಯಾದೆ
ಬೆಳಗಿ ನನ್ನಾತ್ಮಕಿಳಿದು ಬಾ ತಾಯೆ ನೀನೆ ಬ್ರಹ್ಮ ಬೋಧೆ
ಇಳಿದು ಬಾ ತಾಯೆ ಇಳಿದು ಬಾ

ಗಾಳಿಗುಸಿರು ನೀ ಬೆಂಕಿಗುರಿಯು ನೀನುದಕಕದರ ಜೀವ
ಅಗ್ನಿ ಇಂದ್ರ ವರುಣಾರ್ಕ ದೇವರನು ಮಾಡಿ ನೋಡಿ ಕಾವ
ಶಿವನ ಶಕ್ತಿ ನೀ ವಿಷ್ಣು ಲಕ್ಷ್ಮೀ ನೀ ಚತುರ್ಮುಖನ ರಾಣಿ
ದಿವ್ಯ ವಿಜ್ಞಾನ ನನ್ನೊಳುದ್ಭವಿಸೆ ಮತಿಗಾಗಮಿಸು ವಾಣಿ

ಹೃದಯ ಪದ್ಮ ತಾನರಳೆ ಕರೆವೆ ಬಾರಮ್ಮ ಬಾ, ಇಳಿದು ಬಾ
ಮನೋದ್ವಾರ ತಾ ಬಿರಿಯೆ ಕರೆವೆ ಜಗದಂಬೆ ಬಾ, ಇಳಿದು ಬಾ
ಅಗ್ನಿ ಹಂಸ ಗರಿಗೆದರೆ ಕರೆವೆ ಬಾ ತಾಯೆ ಬಾ, ಇಳಿದು ಬಾ
ಚೈತ್ಯ ಪುರುಷ ಯಜ್ಞಕ್ಕೆ ನೀನೆ ಅಧ್ವರ್ಯು ಬಾ, ಇಳಿದು ಬಾ
ಇಳಿದು ಬಾ ತಾಯಿ ಇಳಿದು ಬಾ

ಪ್ರತಿಯೊಂದ ಪದ ಸಾಲುಗಳ ಅಂತರಾಳ ನನ್ನ ಬುದ್ದಿಗೆ ತಿಳಿಯದಿದ್ದರೂ, ನನ್ನೊಳಗಿನ ಏನನ್ನೊ ಅದು ಸದಾ ಪ್ರಚೋದಿಸುತ್ತದೆ. ಒಂದೊಂದು ಬಾರಿ ಕೇಳಿದಾಗಲೂ ಹೊಸದೊಂದು ದೀಪ ದಿಗ್ಗನೆ ಹೊತ್ತಿಕೊಳ್ಳುತ್ತದೆ.

ಮೊದಲ ನಾಲ್ಕು ಸಾಲುಗಳನ್ನು ರಾಗವಾಗಿ ಅಲ್ಲದೆ ಪದ್ಯವಾಚನದ ರೀತಿಯಲ್ಲಿ ಹೇಳಲಾಗಿದೆ. ಆ ಸಾಲುಗಳ ಗಾಢತೆಗೆ ತಕ್ಕುದಾದ ರೀತಿ. ಪರಬ್ರಹ್ಮನ ವಿವಿಧ ಮುಖಗಳ ಸಾರವೆ ಆದ ಜಗನ್ಮಾತೆಯನ್ನು ತನ್ನ ಉತ್ತು ಹಸನಾದ ಮನೊ ಪೃಥಿವಿಗೆ ಆಹ್ವಾನ ಮಾಡುವ ಸಾಲುಗಳು.

ತಾಯಿ ಸೃಜಿಸುವಳು, ನಿತ್ಯ ವ್ಯಾಪಾರ ನಡೆಸುವಳು, ಸಕಲ ಜೀವರಲ್ಲಿ ಆಸಕ್ತಿಯಾಗಿ ಬಂಧನ ಮೂಡಿಸುವವಳು. ಮುಕ್ತಿಯೂ ಅವಳೆ. ಕವಿ ಇಂತಹ ತಾಯಿಯನ್ನು ಕಂಡು ಮನೊ ಭೂಮಿಕೆಯಲ್ಲಿ ಅವತರಿಸಿ ಉದ್ದರಿಸು ಎನ್ನುತಿದ್ದಾರೆ.

ಸಕಲ ಜೀವರಾಶಿಯಲ್ಲಿ ಚೈತನ್ಯವಾಗಿರುವ ತಾಯಿ ಲೀಲೆಯಿಂದ ಕವಿಯಲ್ಲಿ ಜಡವಾಗಿದ್ದಾಳೆ, ಕರೆದರೂ ಓಗೊಡದಷ್ಟು ಗಾಢ ನಿದ್ರೆಯಲ್ಲಿದ್ದಾಳೆ. ಅವಳನ್ನು ಎಚ್ಚತ್ತು ಬೆಳಗಿ ಬ್ರಹ್ಮಬೊಧೆಯಾಗಿ ಆತ್ಮದೊಳಗೆ ಇಳಿದು ಬಾ ಎಂದು ಆಹ್ವಾನಿಸುತ್ತಿದ್ದಾರೆ.

ಪ್ರತಿಯೊಂದು ಪ್ರಾಕೃತಿಕ ಕೊಡುಗೆಗೂ ಅದರ ಮೂಲಭೂತ ಶಕ್ತಿಯೇ ಆ ತಾಯಿ. ತ್ರಿಮೂರ್ತಿಯರ ಶಕ್ತಿಯೂ ಅವಳೆ.
ಅವಳನ್ನು ತನ್ನಲ್ಲಿ ಆವಿರ್ಭಾವವಾಗು ಎಂದು ಕರೆಯುತ್ತಿದ್ದಾರೆ ಕವಿ. ಅಂತಹ ಶಕ್ತಿ ಆತ್ಮಕ್ಕಿಳಿದರೆ ಧಾರಣೆ ಮಾಡಿಕೊಂಡು ನಿಲ್ಲುವ ಶಕ್ತಿ ಕವಿಗಿದ್ದಿರಬೇಕು. ಇಲ್ಲವಾದಲ್ಲಿ ಪ್ರಾರ್ಥನೆಯೆ ಸಾಧ್ಯವಿಲ್ಲ.

ಕಡೆಯ ಸಾಲುಗಳು ಆತ್ಮವಿಕಸನದ ಹಾದಿಯಲ್ಲಿ ಅನೇಕ ಮಜಲುಗಳಿರಬೇಕು. ನನಗೆ ತಿಳಿದಿಲ್ಲ. ನನ್ನ ಮಟ್ಟಿಗೆ ಅದು ಕವಿ ಬೆಳೆದು, ತನ್ನಲ್ಲಿರುವುದನ್ನೆಲ್ಲಾ ಬಿಚ್ಚಿಟ್ಟು ನಾನು ನಿನ್ನ ಅವತಾರಕ್ಕಾಗಿ ಕಾದಿರುವೆ ಇನ್ನು ನನ್ನಿಂದ ಕತ್ತಲನ್ನು ತಡಯಲಾಗುತ್ತಿಲ್ಲ ಬಾ ಎಂದು ಆರ್ತವಾಗಿ ಕರೆಯುತ್ತಿದ್ದಾರೆ.

ಮೂಲ ಕವನದಲ್ಲಿ ಇಳಿದು ಬಾ ತಾಯಿ ಇಳಿದು ಬಾ ಎಂದು ಕಡೆಯ ಪ್ಯಾರಾದಲ್ಲಿ ಮಾತ್ರ ಇದೆ. ಹಾಡಿನಲ್ಲಿ ಪ್ರತಿಯೊಂದು ಚರಣದ ನಂತರವೂ ಬಳಸಿಕೊಳ್ಳಲಾಗಿದೆ. ಇದರ ಸಂಗೀತವು ಉಯ್ಯಾಲೆಯಂತಿದ್ದು ಹಿತವಾದ ಅನುಭವ ನೀಡುತ್ತದೆ.

ಚರಣಗಳ ಸಂಗೀತ ಮೆಲುವಾಗಿ ಆರಂಭವಾಗಿ ಕಡೆಯ ಚರಣದಲ್ಲಿ ಕವಿಯ ಪ್ರಾರ್ಥನೆಯ ತೀವ್ರತೆಗನುಗುಣವಾಗಿ ತೀವ್ರವಾಗಿ ನಮ್ಮಲ್ಲೂ ಭಾವ ತೀವ್ರತೆಯನ್ನು ಮೂಡಿಸುತ್ತದೆ. ದಿವ್ಯ ಅನುಭೂತಿ ಕೊಡುತ್ತದೆ.

ಮುಂದೆ ನಾನು ಕುವೆಂಪು ಅವರ ಅಗ್ನಿಹಂಸ ಸಂಕಲನದಲ್ಲಿ ಈ ಕವನವನ್ನು ಪೂರ್ತಿ ನೋಡಿದೆ. ಕವನವು ೧೦ ಚರಣಗಳಲ್ಲಿ ಕುವೆಂಪು ಕಂಡ ಸರ್ವಂತರ್ಯಾಮಿ, ಸರ್ವ ಕರ್ಮಕಾರಿಣಿ, ಸಕಲ ಚರಾಚರ ರೂಪಿ ಜಗನ್ಮಾತೆಯ ದರ್ಶನವನ್ನು ಅನಾವರಣ ಮಾಡುತ್ತದೆ. ಕವನದ ಬಗ್ಗೆ ಬರೆಯುತ್ತಾ ಹೊದರೆ ನನ್ನ ಮಾತು ಸೋತು ಮೌನವಾಗುತ್ತೇನೆ. ಪದ ಪದವೂ ಅರ್ಥಪೂರ್ಣ. ಒಂದಕ್ಕೊಂದು ಸೇರಿ ಅವು ಹೊಸೆಯುವ ಚಿತ್ರ ಮತ್ತೂ ಎತ್ತರದ್ದು. ನನ್ನ ಉದ್ದೇಶ ಹಾಡು ನನ್ನಲ್ಲಿ ಮೂಡಿಸುವ ಭಾವ ತೀವ್ರತೆಯನ್ನು ದಾಖಲಿಸುವುದು ಆಗಿರುವುದರಿಂದ ಇಲ್ಲಿಗೆ ನಿಲ್ಲಿಸುತ್ತೇನೆ.

ಈ ಹಾಡು ಪಕ್ವ ಮನಸ್ಸಿನಿಂದ ಮೂಡಿದ ಅತ್ಯುತ್ತಮ ಸಾಹಿತ್ಯ, ಸಮರ್ಪಕ ಸಂಗೀತ ಸಂಯೋಜನೆ, ಹೊಂದುವ ಕಂಠದ ಹಾಡುಗಾರಿಕೆ ಮಾಡುವ ಮೋಡಿಯ ಉದಾಹರಣೆ.
ಕೇಳಿದಾಗಲೆಲ್ಲಾ ಆ ಕ್ಷಣವನ್ನು ದಿವ್ಯಘಳಿಗೆಯಾಗಿಸುವ ಈ ರತ್ನಕ್ಕೆ ನನ್ನ ಸಾಷ್ಟಾಂಗ ಪ್ರಣಾಮಗಳು.

ಸಾಹಿತ್ಯ ದಾಸೋಹಿಗಳಿಗೊಂದು ಕರೆ -ಎಂ.ಜಿ.ವೆಂಕಟೇಶ ಮೂರ್ತಿ

ಓಡೋಡಿ ಬನ್ನಿರಿ
ಸಾಹಿತ್ಯ ದಾಸೋಹ ನೋಡಿರಿ
ಸಸಕಸ ವೇದಿಕೆಯೇ
ಎಲ್ಲರಿಗೂ ಇದು ರಹದಾರಿ

ಸಾಹಿತ್ಯ ದಾಸೋಹ
ನಡೆಯುತಿದೆ ನಿರಂತರ
ಇಲ್ಲಿಲ್ಲ ಪ್ರತ್ಯಕ್ಷ ದರ್ಶನ
ಇದು ನೋಡಿಯೋ ದರ್ಶನ

ವಾಚಿಸಿರಿ ನಿಮ್ಮ ಕವನ
ಪ್ರಸ್ತುತಪಡಿಸಿರಿ ನಿಮ್ಮ ಲೇಖನ
ಗೆಲ್ಲಿರಿ ವಾಚಕರ ಮನ
ಆಗ ಸಂತಸಪಡುವುದು ನಿಮ್ಮ ಮನ

ನೋಡಿಯೋ ದಾಸೋಹದಲಿ
ಏನಂಟು ಏನಿಲ್ಲ
ಬಲ್ಲವರೇ ಬಲ್ಲರು
ಬಲ್ಲಿದರೆ ಎಲ್ಲರು

ಸ್ವದೇಶ ಮಾತ್ರವಲ್ಲ
ವಿದೇಶದಲ್ಲೆಲ್ಲ
ನೋಡಿಯೋ ಸಾಹಿತ್ಯ
ಗಮನ ಸೆಳೆದಿರುವುದು ಸತ್ಯ
ವಾಚಕರು ಇಲ್ಲುಂಟು
ಕೇಳುಗರು ಸಹ ಉಂಟು

ನೋಡುಗರು ಅಧಿಕ
ಯಾರಿಗೂ ಇಲ್ಲ ಬಾಧಕ

ಕಾವ್ಯವಾಚನ ನೀವು ಮರೆತಿರಾ
ತಾಳ ಮದ್ದಳೆಗೆ ತಲೆದೂಗದಿದ್ದಿರಾ
ಕನ್ನಡದ ಕೈ-ಕೈಲಾಸಂ
ಏಕವ್ಯಕ್ತಿ ನಾಟಕ ಪ್ರಯೋಗ
ನೋಡುವುದಾಗಿರಲಿಲ್ಲವೇ ನಮ್ಮ ಸುಯೋಗ

ಹರಿಕಥೆ ಕೇಳಿದಿರಿ
ಹಳೆಗನ್ನಡದ ಕಾವ್ಯ ಆಲಿಸಿದಿರಿ
ಎಂ.ಎಸ್.ಎನ್ ಅವರ
ಹಾಸ್ಯ ಪ್ರಕಾರಗಳಲ್ಲಿ ಮುಳುಗೆದ್ದಿರಿ
ದೀನಬಂಧು ಶ್ರೀ ರಾಮಾನುಜಂ
ನಾಟಕ ಪ್ರದರ್ಶನ
ಕಾಳಿಂಗರಾವ್ ನೆನಪಿನ
ಭಾವಗೀತೆಗಳ ಗಾಯನ
ಎಚ್ಚೆಸ್ಕೆ ಅಕ್ಷರ ನಮನ
ಅರ್ಧ ಶತಕಕ್ಕೂ ಹೆಚ್ಚಿನ
ಪುಸ್ತಕಗಳ ಪ್ರಕಾಶನ

ಸ್ವರಚಿತ ಕವನಗಳ ವಾಚನ
ಮೇಘದೂತದ ನೆನಪಿನ ಯಾನ
ಗುಂಡೂರಾಯರ ಕಗ್ಗದಲ್ಲಿ ರಾಮಾಯಣ
ನಿತ್ಯೋತ್ಸವ ಕವಿಮನದ ಪಾರಾಯಣ
ರಂಗಗೀತಾಂತರಂಗದಿಂದ
ಪುಳಕಿತಗೊಂಡ ನಮ್ಮ ಅಂತರಂಗ
ಗುರುರಾಜ ಶಾಸ್ತ್ರಿ
ಗುರುಪ್ರಸಾದರ ಜೋಡಿ
ಮಾಡಿದ ತಾಂತ್ರಿಕತೆಯ ಮೋಡಿ
ನಮ್ಮ ಮನ ಸೂರೆಗೊಂಡಿತು ನೋಡಿ

ವೀಕ್ಷಕರಲಿ ಸಂಚಲನ
ಮೂಡಿಸುತಿಹರು ಸಂಚಾಲಕರು
ವೀಕ್ಷಕರ ಕೊರತೆ
ತಾರದಿರಲಿ ಚಿಂತೆ

ನೋಡಿಯೋ ದಾಸೋಹದ
ದಾಹ ನಮಗಿರಲಿ
ನೋಡಿಯೋ ದಾಸೋಹದ

ವ್ಯಾಮೋಹ ನಮಗಿರಲಿ

ನೋಡಿಯೋ ದಾಸೋಹ
ಸಾಹಿತ್ಯದ ಹಸಿವನಿಂಗಿಸಲು
ಸಾಹಿತಯವೇ ಎಂದೆಂದೂ
ನಮ್ಮೆಲ್ಲರ ಉಸಿರಾಗಿರಲಿ

ಸಂಚಾಲಕರು ಆಯೋಜಿಸುವ
ಕಾರ್ಯಕ್ರಮ ಯಶಸ್ವಿಯಾಗಲಿ
ನೋಡಿಯೋ ಸಾಹಿತ್ಯ ದಾಸೋಹ
ಓಡಿಯೋ ಸಾಹಿತ್ಯ ದಾಸೋಹವಾಗದಿರಲಿ

ಬಾಲ್ಯದ ನೆನಪು - ಅನಂತರಾಮು

ಇದು ನನ್ನ ಚೊಚ್ಚಲ ಲೇಖನ ಹಾಗೂ ಪ್ರಸ್ತುತಿ. ಕಾಲೇಜಿನ ದಿನಗಳ ನಂತರದಲ್ಲಿ ಮೊದಲ ಪ್ರಯತ್ನ. ವಿಮರ್ಶಿಸಲು, ತಿದ್ದಲು ಎಲ್ಲರಿಗೂ ಮಹದವಕಾಶ.

ಬಾಲ್ಯದಲ್ಲಿ ನಾನು ನಮ್ಮ ರಸ್ತೆಯ ಸಮ ವಯಸ್ಕರೊಂದಿಗೆ ಆಚರಿಸಿ, ಆನಂದಿಸುತ್ತಿದ್ದ ಕಾಮದಹನ ಮತ್ತು ಹೋಳಿ ಹಬ್ಬದ ನೆನಪಿನೊಂದಿಗೆ ಲೇಖನವನ್ನು ಪ್ರಾರಂಭಿಸುತ್ತಿದ್ದೇನೆ. ಆಗ ನಾವಿದ್ದುದು ದಾವಣಗೆರೆ ಪಿ ಜೆ ಬಡಾವಣೆಯ ರಾಘವೇಂದ್ರಸ್ವಾಮಿ ಮಠದ ರಸ್ತೆಯ ಮನೆಯಲ್ಲಿ. ಈಗಲೂ ನಾನಿರುವುದು ಮಡದಿಯೊಂದಿಗೆ ದಾವಣಗೆರೆಯ ಸಿದ್ಧವೀರಪ್ಪ ಬಡಾವಣೆಯಲ್ಲಿಯೇ.

ಕಾಮದಹನಕ್ಕೆ ನಾಲ್ಕು ದಿನ ಮೊದಲಿನಿಂದಲೇ ತಯಾರಿ ಪ್ರಾರಂಭ. ಎಲ್ಲ ಸ್ನೇಹಿತರುಗಳು ಸೇರಿಕೊಂಡು ಸಣ್ಣ ಸಣ್ಣ ಕಟ್ಟಿಗೆ ತುಂಡುಗಳು, ಬೆರಣಿ (ದಾವಣಗೆರೆ ಭಾಷೆಯಲ್ಲಿ ಕುಳ್ಳು) ತೆಂಗಿನ ಗರಿ ಮುಂತಾದವುಗಳನ್ನು ಒಂದು ಗುಪ್ತ ಸ್ಥಳದಲ್ಲಿ ಶೇಖರಿಸಿಟ್ಟು ಕೊಳ್ಳುವುದು (ಬೇರೆಯವರು ಕದ್ದುಕೊಂಡು ಹೋಗಿಬಿಡುತ್ತಾರೆಂದು). ಕಾಮನ ಹಬ್ಬದ ಹಿಂದಿನ ದಿನ ರಸ್ತೆಯ ವಿದ್ಯುಚ್ಛಕ್ತಿ ತಂತಿ ಇಲ್ಲದಿರುವ, ಯಾರಿಗೂ ತೊಂದರೆಯಾಗದ ಸ್ಥಳದಲ್ಲಿ ಕಾಮನಗುಂಡಿಯನ್ನು ತೋಡಿಟ್ಟುಕೊಳ್ಳುತ್ತಿದ್ದೆವು.

ಹಬ್ಬದ ದಿನ ಬೆಳಗಿನಿಂದಲೇ ಎಲ್ಲರ ಮನೆಯ ಮುಂದೂ ನಮ್ಮ ಕಾಮನ ಹುಡುಗರ ಹಿಂಡು ಕಾಮನ ಪಠ (ಚಿತ್ರವಿರುವ) ಕೋಲನ್ನು ಹಿಡಿದುಕೊಂಡು ಕಟ್ಟಿಗೆ, ಬೆರಣಿ ಮುಂತಾದವುಗಳನ್ನು ಹಾಕಿಕೊಳ್ಳಲು ಹಳೆಯ ಗೋಣಿಚೀಲಗಳನ್ನು ಹಿಡಿದುಕೊಂಡು ಹಾಜರಾಗುತ್ತಿದ್ದೆವು. ಎಲ್ಲರ ಮನೆಯ ಮುಂದೂ "ಕಾಮಣ್ಣ ಮಕ್ಕಳೇ, ಕಳ್ಳ ಸೂಳೇ ಮಕ್ಕಳೇ, ಭೀಮಣ್ಣ ಮಕ್ಕಳೇ, ಬಿಟ್ಟಿ ಸೂಳೇ ಮಕ್ಕಳೇ, ಅರ್ಧ ಮಣ ಕಟ್ಟಿಗೆ, ಎಂಟಾಣೆ ರೊಕ್ಕ, ಕೊಡೋವರೆಗೂ ಬಿಡೋದಿಲ್ಲಪ್ಪೋ " ಎಂದು ಕೂಗಿ ಬಾಯಿ ಬಾಯಿ ಬಡ್ಕೊಳ್ತಾಯಿದ್ವಿ (ಇದು ಇಲ್ಲಿನ ಪದ್ಧತಿ. ಮೈಸೂರು ಕಡೆಯವರಾದ ನಾವು ತಂದೆ, ತಾಯಿ ಇರುವವರು ಬಾಯಿ ಬಡ್ಕೊಳೋದು ನಿಷಿದ್ಧ. ಆದರೆ ನಮ್ಮ ಮನೆ ಮತ್ತು ಅಕ್ಕ ಪಕ್ಕದ ಮನೆಯ ಹತ್ತಿರ ಬಂದಾಗ ನಾನು ಬರೀ ಕೂಗುತ್ತಿದ್ದೆಯಷ್ಟೇ). ಮನೆಯವರು ಕೊಡುವ ಹಣ, ಕಟ್ಟಿಗೆ, ಬೆರಣಿ ಸಂಗ್ರಹಿಸಿಕೊಂಡು ಮುಂದಿನ ಮನೆಗೆ ಹೋಗುತ್ತಿದ್ದೆವು. ಕೆಲವು ಮನೆಯವರುಗಳಂತೂ ಇನ್ನೊಂದೆರಡು ಸಲ ಕೂಗ್ರೋ ಮಕ್ಕಳಾ ಎಂದಾಗ ನಮಗೋ ಹುರುಪು ಹೆಚ್ಚಾಗಿ ಇನ್ನೂ ಜೋರಾಗಿ ಕೂಗುತ್ತಿದ್ದೆವು. ಹಣ ಕೊಟ್ಟ ಬಗ್ಗೆ ಮನೆಯವರಿಂದಲೇ ನಮ್ಮಲ್ಲಿದ್ದ ಒಂದು ಖಾಯಂ ಡೈರಿಯಲ್ಲಿ ಬರೆಸಿಕೊಳ್ಳುತ್ತಿದ್ದೆವು. ಹೋದ ವರ್ಷ ನೀವು ಇಷ್ಟು ಹಣ ಕೊಟ್ಟಿದ್ದೀರೀ, ಈ ವರ್ಷ ಸ್ವಲ್ಪ ಜಾಸ್ತಿ ಹಣ

ಕೊಡಬೇಕೆಂಬ ಅಹವಾಲಿನೊಂದಿಗೆ ಮನೆಯವರುಗಳೊಂದಿಗೆ ಸಂವಾದ. ಸಂಜೆ 4-5 ಗಂಟೆವರೆಗೂ ಎಲ್ಲರ ಮನೆ ಮುಂದೆ ಹೋಗಿ ಕೂಗಿ, ಕೂಗಿ, ಬಾಯ್ಬಾಡ್ಕೊಂಡು ಹಣ, ಕಟ್ಟಿಗೆ, ಬೆರಣಿ ಇತ್ಯಾದಿ ಸಂಗ್ರಹಣೆ. ಸಂಗ್ರಹಣೆಯ ಒಟ್ಟಾರೆ ಹಣವನ್ನು ಅಂಗಡಿ ಕೃಷ್ಣಮೂರ್ತಿಯವರಲ್ಲಿ ಜಮಾವಣೆ. ನಮ್ಮ ಮೊದಲ ವರ್ಷದ ಒಟ್ಟು ಹಣ ಸಂಗ್ರಹಣೆ ಬರೋಬ್ಬರಿ ರೂ.6.27ಪೈಸೆ.

ಕತ್ತಲಾಗುತ್ತಿದ್ದಂತೆ ಕಾಮನಗುಂಡಿ ಮತ್ತು ಸುತ್ತ ಮುತ್ತ ಸ್ವಚ್ಛಗೊಳಿಸಿ, ನೀರು ಚಿಮುಕಿಸಿ ಹೆಣ್ಣು ಮಕ್ಕಳಿಂದ ಕಾಮನಗುಂಡಿಯ ಸುತ್ತಾ ರಂಗೋಲಿ. ನಂತರ ಸಂಗ್ರಹಿಸಿದ ಕಟ್ಟಿಗೆ, ಬೆರಣಿ, ತೆಂಗಿನಗರಿ, ಮುಂತಾದವುಗಳನ್ನು ಜೋಡಿಸುವುದು. ಜೋಡಿಸಿದವುಗಳನ್ನು ಬೇರೆ ರಸ್ತೆಯವರು ಕದ್ದುಕೊಂಡು ಹೋದಾರೆಂದು ಗಸ್ತು. ರಾತ್ರಿ 7. 30ರ ಹೊತ್ತಿಗೆ ಎಲ್ಲರ ಮನೆಗೂ ಹೋಗಿ ಕಾಮದಹನಕ್ಕೆ ಬನ್ನಿ ಎಂದು ಕರೆದು ಬರುವುದು. 8 ರಿಂದ 8. 30ಕ್ಕೆ ಎಲ್ಲರೂ ಜಮಾವಣೆಯಾದನಂತರ ಕಾಮನ ಕೋಲನ್ನು ಗುಂಡಿಯ ಮಧ್ಯದಲ್ಲಿ ಇಡುವುದು. ರಾಘವೇಂದ್ರಸ್ವಾಮಿ ಮಠದ ಆಚಾರ್ಯರಿಂದ ಕಾಮನಗುಂಡಿ, ಕಾಮನ ಪಟಕ್ಕೆ ಪೂಜೆ, ಮಂಗಳಾರತಿ ನಂತರ ಸ್ವಲ್ಪವೇ ಸೀಮೇಎಣ್ಣೆ ಹಾಕಿ, ಬೆಂಕಿಕಡ್ಡಿ ಗೀರುವುದು. ಎರಡು ನಿಮಿಷದಲ್ಲಿ ಬೆಂಕಿ ಚೆನ್ನಾಗಿ ಹತ್ತಿಕೊಳ್ಳುತ್ತಿತ್ತು. ನಾವು ಮಕ್ಕಳೆಲ್ಲಾ ಕಾಮನಗುಂಡಿಯ ಸುತ್ತಾ ಕೂಗಿಕೊಂಡು ಸ್ವಲ್ಪ ಸಮಯ ಸುತ್ತು ಹೊಡೆಯುತ್ತಿದ್ದೆವು. ನಂತರ ನೆನೆದವರಿಗೆಲ್ಲಾ ಖಾರಾ ಮಂಡಕ್ಕಿ ಪ್ರಸಾದ ವಿನಿಯೋಗ. ಇಲ್ಲಿಯ ಇನ್ನೊಂದು ವಿಷಯ ವಿಶೇಷವೇನೆಂದರೆ ಬೇರೆಯವರು ಕಾಮದಹನ ಮಾಡುತ್ತಿದ್ದ ಬೆಂಕಿಯನ್ನು ಕದ್ದು ತಂದು ತಮ್ಮ ಕಾಮನಿಗೆ ಬೆಂಕಿ ಹಚ್ಚಬೇಕೆಂದು. ಆದರೆ ಆ ತರಹ ಬೆಂಕಿಯನ್ನು ಕದ್ದು ತರುವುದು, ಕದ್ದು ತರುವಾಗ ಬೆಂಕಿಯಿಂದಾಗಬಹುದಾದ ಪರಿಣಾಮಗಳನ್ನು ಗಮನಿಸಿ, ಬೆಂಕಿಯನ್ನು ಕದ್ದು ತರುವುದು ಬೇಡವೆಂದು ಮೊದಲೇ ನನ್ನ ಸ್ನೇಹಿತರುಗಳಿಗೆ ತಾಕೀತು ಮಾಡಿರುತ್ತಿದ್ದೆ. ರಾತ್ರಿ 11ರ ವರೆಗೂ ಕಾಮನಬೆಂಕಿಯನ್ನು ಕಾಯುತ್ತಿದ್ದೆವು. ಅಷ್ಟು ಹೊತ್ತಿಗೆ ಬೆಂಕಿಯೆಲ್ಲಾ ನಂದು, ಕೆಂಡ ಮಾತ್ರ ಕಾಮನಗುಂಡಿಯಲ್ಲಿ ರುತ್ತಿತ್ತು. ನಂತರ ಮನೆಗೆ ಹೋಗಿ ಊಟ ಮಾಡಿ ಮಲಗುವುದು.

ಮಾರನೇ ದಿನ ಹೋಳಿಹಬ್ಬ. ಬೆಳಿಗ್ಗೆ ಬೇಗ ಎದ್ದು ಕಾಮನಗುಂಡಿಗೆ ಹಾಲು, ತುಪ್ಪವನ್ನು ಹಾಕುವುದು. ಬಕೆಟ್ಟುಗಳಲ್ಲಿ ಕೆಂಪು, ಹಸಿರು, ನೀಲಿ ಹಳದಿ ಮುಂತಾದ ಬಣ್ಣದ ಪುಡಿಯನ್ನು ಹಾಕಿ, ನೀರು ಹಾಕಿ ಓಕುಳಿ ತಯಾರಿಸುತ್ತಿದ್ದೆವು. ಮೊದಲೇ ತೆಗೆದಿಟ್ಟುಕೊಂಡಿರುತ್ತಿದ್ದ ಹಳೇ ಚಡ್ಡಿ, ಶರ್ಟ್ ಏರಿಸಿಕೊಂಡು ನಾವು ಮಕ್ಕಳೆಲ್ಲಾ ಒಬ್ಬರಿಗೊಬ್ಬರು ಮೊದಲು ಓಕುಳಿಯಾಡಿ, ನಮ್ಮ ಅಕ್ಕ ಪಕ್ಕದ ರಸ್ತೆಗಳಿಗೂ ಹೋಗಿ ಆ ಸ್ನೇಹಿತರುಗಳೊಂದಿಗೂ ಓಕುಳಿಯಾಡಿ, ರಾಮ್ ಅಂಡ್ ಕೋ ವರೆಗೂ ಹೋಗುತ್ತಿದ್ದೆವು (ಈಗ ರಾಮ್ ಅಂಡ್ ಕೋ, ಓಕುಳಿಯಾಟದ ಕೇಂದ್ರ ಬಿಂದು). ಮೊದಲೇ ನಮ್ಮ ರಸ್ತೆಯ ಸ್ನೇಹಿತರುಗಳಿಗೆ ಹೇಳಿರುತ್ತಿದ್ದೆ, ಓಕುಳಿಯನ್ನು ನಮ್ಮ ಪರಿಚಯದವರಿಗಷ್ಟೇ, ಅದೂ ಗಂಡಸರಿಗಷ್ಟೇ ಹಾಕಬೇಕು. ಯಾರಿಗೂ ಅನಾವಶ್ಯಕವಾಗಿ ಓಕುಳಿ ಹಾಕಿ ಗಲಾಟೆ, ಗದ್ದಲಗಳಿಗೆ ಎಡೆಮಾಡಿಕೊಡಬಾರದೆಂದು. ಆಗೆಲ್ಲಾ ಈಗಿನ ಹಾಗೆ ರಾಸಾಯನಿಕ ಬಣ್ಣಗಳು, ವಾರ್ನಿಷ್, ಮೊಟ್ಟೆ ಮುಂತಾದವುಗಳೊಂದಿಗೆ ಓಕುಳಿಯಾಟವಾಡುತ್ತಿರಲಿಲ್ಲ ಮತ್ತು ಹೆಂಗಳೆಯರಿಗಂತೂ ಬಣ್ಣವನ್ನು ಹಾಕುತ್ತಲೇ ಇರಲಿಲ್ಲ. ಆದರೀಗ ಇದೊಂದು ಕಪಿಚೇಷ್ಟೆಯಾಗಿದೆ. ಹೆಂಗಳೆಯರಿಗೂ ಬಣ್ಣ ಹಾಕುವುದು ಮತ್ತು ಅವರು ಹೋಳಿಯಾಟದಲ್ಲಿ ಭಾಗವಹಿಸುವುದು, ಗಂಡು - ಹೆಣ್ಣು ಕೋತಿಗಳಿಗೆ ಸೆರೆ ಕುಡಿಸಿದಂತಾಗಿದೆ. ಲೇಡೀಸ್ ಹಾಸ್ಟೆಲ್ಗಳ ಹತ್ತಿರ ಇದರ ಹಾವಳಿ ಇನ್ನೂ ಹೆಚ್ಚು. ಪೊಲೀಸರ ಉಪಸ್ಥಿತಿಯೊಂದಿಗೆ ಹೋಳಿಯಾಟ ನಡೆಯುತ್ತಿರುವುದಂತೂ ವಿಪರ್ಯಾಸ. ಸಮ ವಯಸ್ಕರೂ, ಸಮ ಮನಸ್ಕರೂ ಆಚರಿಸಬೇಕಾದ ಹೋಳಿಹಬ್ಬ ತಳ್ಳಾಟ, ಕದ್ದಾಟ, ಕದನಗಳೊಂದಿಗೆ ಆಚರಣೆಗೊಳ್ಳುತ್ತಿರುವುದಂತೂ ದುರ್ದೈವ್ಯವೇ ಸರಿ. ಮುಂದಿನ ದಿನಗಳಲ್ಲಾದರೂ ಈ ಹೋಳಿ ಹಬ್ಬ / ಹೋಳಿಯಾಟ ಒಳ್ಳೆಯ ರೀತಿಯಲ್ಲಿ ನಡೆಯಲೆಂದು ಆಶಿಸುತ್ತೇನೆ. 12 ಗಂಟೆಗೆ ಹೋಳಿಯಾಟಕ್ಕೆ ತೆರೆ. ನಂತರ ಮನೆಗೆ ಬಂದು ಒಂದು ಗಂಟೇ ಕಾಲ ಸ್ನಾನ. ನಂತರ ಕಾಮದಹನ ಮತ್ತು ಹೋಳಿಯಾಟದಲ್ಲಿ ಭಾಗವಹಿಸಿದ ಸ್ನೇಹಿತರುಗಳೊಂದಿಗೆ ಅಮ್ಮ ಮಾಡಿರುತ್ತಿದ್ದ ಹಬ್ಬದೂಟದ ಸವಿ. ಇವೆಲ್ಲವುಗಳನ್ನು ನೆನಪಿಸಿಕೊಳ್ಳುವುದು ಮನಸ್ಸಿಗೆ ಸಂತೋಷವಾಗುತ್ತದೆ. ಸಂತ ತುಕಾರಾಂ ಚಲನಚಿತ್ರದ "ಬೇಡ ಕೃಷ್ಣ ರಂಗಿನಾಟ ಸೀರೆ ನೆನೆವುದು,

ಮಧ್ಯರಾತ್ರಿ ಚಂದ್ರ................ " ಗೀತೆಯನ್ನು ನೆನಪಿಸಿಕೊಂಡು ಈ ನನ್ನ ಚೊಚ್ಚಲ ಲೇಖನವನ್ನು ಮುಕ್ತಾಯಗೊಳಿಸುತ್ತಿದ್ದೇನೆ. ಬರವಣಿಗೆ ಬಾರದವನ ಬರವಣಿಗೆ ಇದು, ತಪ್ಪುಗಳನ್ನು ಮನ್ನಿಸಿ, ವಿಮರ್ಶಿಸಿ, ತಿದ್ದಿಕೊಳ್ಳಲು ಅವಕಾಶ ಕೊಡಿ. ಎಲ್ಲರಿಗೂ ಧನ್ಯವಾದಗಳು.

ಜೋಪಡಿಯಿಂದೆದ್ದ ಸುಂಟರಗಾಳಿ - ಬೆಂಶ್ರೀ ರವೀಂದ್ರ

ಇನ್ನು ಚೆಂಡು ತಿರುಗುವುದಿಲ್ಲ
ರಭಸದಲಿ ಮಿಂಚಂತೆ
ಕಂಡೂ ಕಾಣದಂತೆ ಮುನ್ನುಗ್ಗುವುದಿಲ್ಲ
ಕಾಲೇ ಮಂತ್ರವಾದಂತೆ; ಕಾಲ ನಿಂತಂತೆ
ಜಗಮಂತ್ರಮುಗ್ದವಾದಂತೆ
ಹುಂಕಾರ ಮುಗಿಲು ಮುಟ್ಟುವುದಿಲ್ಲ
ಜರ್ಸಿಯ ಬಿಚ್ಚೆಸೆದು
ಎದೆಗುದ್ದಿ ಎದೆಗುದಿಗೆ ತಂಪೆರೆದು
ಆಕಾಶಕೆ ಮೊಗಮಾಡಿದ
ಹೇಷಾರವ ಇನ್ನು ಕೇಳುವುದಿಲ್ಲ

ಕೇಳಿಸಿದ್ದೊಂದೆ ದೀರ್ಘವಾದ ಸಿಳ್ಳೆ
ನಿಟ್ಟುಸಿರು, ಆಟ ಮುಗಿಯಿತು
ದೇವರ ಕೈಗೋಲು ದೇವರಿಗೆ ಸೇರಿತು.

ಅವ ಡಿಗೋ ಮರಡೋನ
ಬ್ಯೂನಸ್ ಐರಿಸಿನ ಮುರುಕು ಧೂಳು
ಜೋಪಡಿಯಿಂದೆದ್ದ ಸುಂಟರಗಾಳಿ
ಕಣ್ಣಲ್ಲಿ ಕಾಲ್ಚೆಂಡನಿಟ್ಟು;ಗಿರಗಿರನೆ ತಿರುತಿರುಗಿ
ಮಿಂಚಿ ಮಿರಮಿರನೆ ಹಿಗ್ಗಿ ಹಿಗ್ಗುತ್ತ
ಖಿನ್ನತೆಯಲಿ ಕುಗ್ಗಿ ಭಗ್ನವಾದ ಕನಸು

ಅವನಾಡಿಸಿದಂತವನ ಚೆಂಡು
ಅವನಾತ್ಮವೇ ಆಗಿ
ಮಾಂತ್ರಿಕ ಸ್ಪರ್ಶದಲಿ ಪುಳಕಿತವಾಗಿ
ಅರ್ಜಂಟೀನಾದ ಆತ್ಮಾಭಿಮಾನವಾಗಿ
ಗೋಲುಗಂಬದ ಗೆರೆ ಮೀರಿ ನುಗ್ಗಿತ್ತು
ಗುಂಡಿನಂತೆ ಹಲವು ಗುಂಡಿಗೆಗಳನೊಡೆದು

ಬಂಗಾರಕಾಲ ಬಂಡಾಯಗಾರ
ರೋಧಿಸಿದ ದ್ವೇಷಿಸಿದ ಸೆಟೆಗೊಂಡ
ತಂತ್ರ ಕುತಂತ್ರಗಳಲಿ ಬೆಸೆದ
ಅಹಂಕಾರದ ತುದಿಯಲಿ ತೇಲಾಡಿದ
ಉದ್ದೀಪನದ ಮದ್ದಲ್ಲಿ ಮಣ್ಣಾದ.

ಏನಾದರೇನಂತೆ ಮರಡೋನ
ಚೆಂಡು ಪ್ರೀತಿಸಿದ ಮನುಜ
ನಮಗಿತ್ತ ಮೋಡಿಯ ಸಂತಸ
ವರ್ಣರಂಜಿತ ಮಾಂತ್ರಿಕ
ಹತ್ತು ಅಂಕಿಯ ಅಂಗಿ ಧರಿಸಿ
ಮುಗಿಲಿಗೆ ಹತ್ತಿದವ ; ಹತ್ತಿರದವ
ಸ್ವೀಕರಿಸೋಣ ಅವನ ಅವನಂತೆ

ಆಕಾಶದಲಿ ಮುಂದೊಮ್ಮೆ ಪೀಲೆ
ಅವನೊಡನೆ ಆಡುವನಂತೆ ಚೆಂಡು
ಆಗ ನಾವೆಲ್ಲ
ಗ್ಯಾಲರಿಯಲಿ ಕುಂತು ಸಿಳ್ಳೆ ಹಾಕುವ.

ಬೇಂದ್ರೆಯವರ ಕಾವ್ಯಭಾಷೆಯಲ್ಲಿ ಭಾರತೀಯ ಭಾಷೆಗಳಲ್ಲಿನ ಪದಗಳ ಬಳಕೆ - ಒಂದು ಕಿರುನೋಟ

ಬೇಂದ್ರೆಯವರ ಕಾವ್ಯಭಾಷೆಯಲ್ಲಿ ಮರಾಠಿ, ಸಂಸ್ಕೃತ, ಹಿಂದಿ, ಕೊಂಕಣಿ, ಪೈಶಾಚಿ, ಹೀಬ್ರು, ಅಚ್ಚಕನ್ನಡ, ಹಳಗನ್ನಡ, ತಮಿಳು, ತೆಲುಗು, ಮಲೆಯಾಳಂ ಶಬ್ದಗಳು ಬರುವುದನ್ನು ನಾವು ಅವರ ಸಮಗ್ರ ಕಾವ್ಯವನ್ನು ಅಧ್ಯಯನ ಮಾಡಿದಾಗ ತಿಳಿದುಬರುತ್ತದೆ. ಈ ವಿಷಯದಲ್ಲಿ ಬೇಂದ್ರೆ ಮಹಾಕವಿ ಕುಮಾರವ್ಯಾಸನ ಮಾರ್ಗದವರು! “ಕುಮಾರವ್ಯಾಸನ ಭಾಷಾ ಕ್ರಾಂತಿ” ಎಂಬ ಚಿಕ್ಕ ಲೇಖನ ೧೯೪೨ರಲ್ಲಿ ಬರೆದು 'ಜೀವನ' ಪತ್ರಿಕೆಯಲ್ಲಿ ಬೇಂದ್ರೆ ಪ್ರಕಟಿಸಿದ್ದರು. ಅಲ್ಲಿ ಅವರು ಹೇಳಿದ್ದು ಹೀಗೆ:

“ಕುಮಾರವ್ಯಾಸನ ಭಾಷೆ ಅವನ ಜೀವನದ ಕಾಣೆಯ ಕುರುಹು. ಅವನ ಶೈಲಿ, ಅವನು ಕಂಡ ಹೊಸ ಜೀವನದ ಕನಸಿನದು. ಅವನು ಆಡಿದ್ದೆಲ್ಲಾ ಶಕ್ತಿಯುತವಾಗಿರುತ್ತದೆ. ಶಬ್ದಗಳಿಗಾಗಿ ಅವನು ಪೇಚಾಡುವದಿಲ್ಲ; ಮರಾಠಿ, ಉರ್ದು, ಕನ್ನಡ, ಸಂಸ್ಕೃತ ಬೇಕಾದದ್ದು ಇರಲಿ, ಇಸು (ಬಾಣ) ಹಚ್ಚಿ ಹೊಡೆದುಬಿಡುತ್ತಾನೆ. ಅವನ ವಾಣಿಯ ಸಾಮರ್ಥ್ಯ ಅನುಕರಿಸಲಿಕ್ಕೆ ಅಸಾಧ್ಯವಾದದ್ದು".

ಈ ಕಾರ್ಯ ಬೇಂದ್ರೆ ವಿವಿಧ ಭಾಷೆಗಳ ಕೋಶಗಳ ಅಭ್ಯಾಸ ಮಾಡಿ ಆ ಶಬ್ದಗಳಿಗೆ ಕನ್ನಡ ದೀಕ್ಷೆ ಕೊಟ್ಟು ಜೀವಂತಗೊಳಿಸಿದ್ದಾರೆ. ಇಂಗ್ಲಿಷ್ ಶಬ್ದಗಳನ್ನು ಬೇಂದ್ರೆಯವರ ಔದುಂಬರಗಾಥೆಯಲ್ಲಿನ ಸಂಪುಟ - 2 - ದರ್ಶನ ಸಂಪುಟದಲ್ಲಿ 536ನೇ ಕವನ "ದತ್ತ-ಉಗಾಭೋಗ"ದಲ್ಲಿ ಹೀಗೆ ಬಳಸಿರುವುದನ್ನು ನೋಡಬಹುದು:

ದತ್ತ-ಉಗಾಭೋಗ

"ಒಮ್ಮೆ ಮೂನಾ! ನೀನು ಸನ್ನಾಗಿ ಬಾ

ಮತ್ತಿ ಒನ್ನಾಗಿ ಬಾ
ಮತ್ತೆ ಚೆನ್ನಾಗಿ ಬಾ

ಮುನ್ನಾಗ-ಹಿನ್ನಾಗ
ನನ್ನಾಗ-ನಿನ್ನಾಗ
ಹೊನ್ನಾಗ-ನಾಗಾ!

ಈಗಾ ಆಗಾ ಹೊಗಾ
ರಂಗಾ, ಅಂಗಾಂಗ ಪೋಗಾ
ಸಾರಿಗಾ, ಯಾ ರಾಗಾ?
ಓಹೋ, ದತ್ತ-ಉಗಾಭೋಗ"

ಇಲ್ಲಿ ಮೂನಾ, ಸನ್ನಾ, ಒನ್ನಾ, ಕನ್ನಡ ಶಬ್ದಗಳಲ್ಲ; ಇಂಗ್ಲಿಷ್ ಶಬ್ದಗಳು. ಪಾಕಿಸ್ತಾನದ ಪೂಜ್ಯವಸ್ತು Moon=ಚಂದ್ರ; ಹಿಂದುಸ್ತಾನದ ಪೂಜ್ಯವಸ್ತು Sun=ಸೂರ್ಯ; ಹಿಂದೂ ಹಾಗೂ ಮುಸಲ್ಮಾನರು One=ಒಂದಾಗಬೇಕು. ಹಿಂದುಸ್ತಾನ ಮತ್ತು ಪಾಕಿಸ್ತಾನ ಒಂದಾಗಬೇಕು. ಒಂದಾದರೆ ನಮ್ಮ ರಾಷ್ಟ್ರ ಪ್ರಬಲವಾಗುತ್ತದೆ ಎಂದು, ಮಹಾತ್ಮಾ ಗಾಂಧಿ, ಶ್ರೀ ಅರವಿಂದರು ಅಪೇಕ್ಷಿಸಿದ್ದರು. ಇಂದಿನವರೆಗೂ ಅದು ಆಗಲಿಲ್ಲ. ಕಾರಣವೇನು ಎಂದರೆ - ನಾಗಾ=ಸಂಪತ್ತು ಮತ್ತು ವಿಷದ ಸಂಕೇತ. ಆ ನಾಗಾ ಎಲ್ಲರನ್ನೂ ಸುತ್ತುಹಾಕಿದೆ. ಅದು ಬಿಡಬೇಕಾದರೆ, ಪುಂಗಿ ಬಾರಿಸುವವ=ಸಾರಿಗಾ ಸಂಗೀತ ಬಲ್ಲವ ಬಂದರೆ ನಾವು ಒಂದಾಗುತ್ತೇವೆ ಎಂದು ಹಾಡಿದ ಹಾಡು=ಉಗಾಭೋಗ, ದತ್ತನದು=ಅಂಬಿಕಾತನಯ ದತ್ತನದು ಎಂದು ಈ ಕವನದ ಅರ್ಥ.

ಬೇಂದ್ರೆಯವರು, ಉಚ್ಚಾರಣೆ ಆಧರಿಸಿ ಶಬ್ದಶ್ಲೇಷ ಸೃಷ್ಟಿಸುತ್ತಾರೆ. ಸಾವಿರದ ಎಂಬ ಪದವು ಸಾವಿರ ಸಂಖ್ಯೆಯಾಗಬಹುದು; ಹಾಗೆ ಇದೇ ಪದವನ್ನು ಸಾವು+ಇರದ= ಮರಣವಿಲ್ಲದ ಎಂದೂ ಅರ್ಥೈಸಬಹುದು. ಇದೇ ರೀತಿ - ಉದರದ ಪದಕ್ಕೆ ಎಂದೂ ಗಿಡದಿಂದ ಉದರದ ಎಂದೂ ಮತ್ತು ಹೊಟ್ಟೆಯ ಎಂದೂ ಅರ್ಥೈಸಬಹುದು. ಧಾರವಾಡ ಕನ್ನಡದ ಉಚ್ಚಾರಣೆಯ ವೈಶಿಷ್ಟ ಬೇಂದ್ರೆಯವರ ಕಾವ್ಯವಾಚನದಲ್ಲಿ ಎದ್ದು ಕಾಣುವುದನ್ನು ಗಮನಿಸಬಹುದು.

ಬೇಂದ್ರೆಯವರು ಗ್ರಾಂಥಿಕ ಭಾಷೆ ಮತ್ತು ಧಾರವಾಡದ ಆಡುಭಾಷೆ ಇವುಗಳ ಹದವಾದ ಮಿಶ್ರಣ ಮಾಡುತ್ತಾರೆ. ಹಳಗನ್ನಡವನ್ನೂ ವಿಶಿಷ್ಟವಾಗಿ ಬಳಸುತ್ತಾರೆ.

ಧಾರವಾಡ ಕನ್ನಡದಲ್ಲಿ ಬ್ರಾಹ್ಮಣರು ಮತ್ತು ಬೇರೆ ಜಾತಿಯವರು ಮಾತನಾಡುವ ಭಾಷೆ ಎಂಬ ಭೇದವಿದೆ. ಬೇಂದ್ರೆ ಕಾವ್ಯದಲ್ಲಿ ಎರಡೂ ಪ್ರಕಾರ, ಸಂದರ್ಭಕ್ಕೆ ತಕ್ಕಂತೆ ಪ್ರಯೋಗವಾಗಿರುವುದನ್ನು ಈ ಕೆಳಗಿನ ಉದಾಹರಣೆಗಳಿಂದ ಗಮನಿಸಬಹುದು :

ಕಥಿ, ದನಿ, ಹುಣಸಿ, ರೌದಿ, ಐತಿ, ಇತ್ಯಾದಿ. ಇದರ ಹಿಂದಿರುವ ಕಾರಣವೆಂದರೆ - .
ಬೇಂದ್ರೆಯವರಲ್ಲಿ ಬ್ರಾಹ್ಮಣ ಮತ್ತು ಬೇರೆ ಜಾತಿ ಎಂಬ ಭೇದ ಮಾಡುವ ದೃಷ್ಟಿಯೇ ಇರಲಿಲ್ಲ. ಅವರು ಜನಿಸಿ, ವಾಸಮಾಡಿದ, ಧಾರವಾಡದ ಪೋತ್ನೀಸ ಓಣಿಯಲ್ಲಿ ಪ್ರಮುಖವಾಗಿ ಒಕ್ಕಲತನ ಮಾಡುವ ಮತ್ತು ವಿವಿಧ ಕಾರ್ಯ ಮಾಡುವ ಜನರಿದ್ದರು. ಆ ಎಲ್ಲರ ಮನೆಯಲ್ಲಿ ಬೇಂದ್ರೆ ಓಡಾಡುತ್ತಿದ್ದರು ಎಲ್ಲರೊಂದಿಗೆ ಒಂದಾಗಿದ್ದರು. ಇದಕ್ಕೆ ಬೇಂದ್ರೆಯವರ ಅಜ್ಜಿ ಮತ್ತು ತಾಯಿಯ ಬೆಂಬಲವಿತ್ತು. ಶಾಲೆಗೆ ಹೋದಾಗ ಮಾತ್ರ ಬ್ರಾಹ್ಮಣ ಹುಡುಗರಾದ-ಶ್ರೀಧರ ಖಾನೋಳಕರ, ರಾಮು ದೀಕ್ಷಿತ, ಬಾಗಲವಾಡಿ ಮೊದಲಾದವರ ಸಂಪರ್ಕ ಬರುತ್ತಿತ್ತು. ಇದರ ಪರಿಣಾಮ ಅವರ ಕಾವ್ಯಭಾಷೆಯ ಮೇಲಾಗಿರುವುದನ್ನು ಗಮನಿಸಬಹುದು.

ಬೇಂದ್ರೆಯವರಂತೆ, ಅವಧಾರಣೆಯ ದೀರ್ಘ ಮತ್ತು ಅವಗ್ರಹ (ಅಂದರೆ s, ss, sss) ಅನುಸರಿಸಿ ಕವನ ವಾಚನ ಮಾಡದಿದ್ದರೆ, ಅರ್ಥ ಕಳೆದುಕೊಳ್ಳುತ್ತದೆ ಮತ್ತು ಲಯಭಂಗವಾಗುತ್ತದೆ. ಇದನ್ನು ಡಾ.ರಾಜಪುರೋಹಿತರು ಗುರುತಿಸಿದ್ದು ಮಹತ್ತ್ವದ ಮಾತು. ಬೇಂದ್ರೆಯವರ ಸಾಮ ಛಂದಸ್ಸಿನ ಪ್ರಯೋಗದಲ್ಲಿ ಈ ಅಂಶ ಮಹತ್ವದ್ದಾಗುತ್ತದೆ. ತಾನು ತನ್ನ ಕಾವ್ಯವನ್ನು ಸಾಮ ಛಂದಸ್ಸಿನಲ್ಲಿ ಬರೆಯಬೇಕು ಎಂಬ ಗುರಿಯನ್ನು ೧೯೩೨ರ ಪೂರ್ವದಲ್ಲಿಯೇ ಬೇಂದ್ರೆ ನಿರ್ಣಯಿಸಿದ್ದರು. 'ಗರಿ'ಯಲ್ಲಿ ಅದರ ಉಲ್ಲೇಖವಿದೆ. ಅದು ಸಾಧ್ಯವಾದ ಸಂತೋಷ ಮತ್ತು ಸಮಾಧಾನ ಅವರಿಗಿತ್ತು.

ಪದಗಳ ಪುನರಾವೃತ್ತಿ, ದ್ವಿರುಕ್ತಿ ಇವುಗಳಿಗೆ ಸಂಬಂಧಿಸಿದ ಪ್ರತಿಯೊಂದು ಅಂಶ, ಧಾರವಾಡ ಕನ್ನಡದಲ್ಲಿ ಹೇಗಿದೆ ಎಂಬ ಉದಾಹರಣೆ ಕೊಡುತ್ತ; ಸಂಕ್ಷಿಪ್ತ ಕ್ರಿಯಾಪದ, ಸಂಯುಕ್ತ ಕ್ರಿಯಾಪದ, ರೂಪಗಳ ಆಕುಂಚನವಾಗುವ ೧೫ ನಿಯಮ ಮತ್ತು ವ್ಯಾಕರಣ ವಿನ್ಯಾಸದ ವೈಶಿಷ್ಟ್ಯಗಳನ್ನೂ ರಾಜಪುರೋಹಿತ ವರ್ಣಿಸಿದ್ದಾರೆ.

ಡಾ.ರಾಜಪುರೋಹಿತರು ಸಂಗೀತವನ್ನೂ ಚೆನ್ನಾಗಿ ಅಭ್ಯಾಸ ಮಾಡಿದ್ದರಿಂದ, ಬೇಂದ್ರೆ ಕವನ ಹಾಡುವವರು ಆ ಕವನದಲ್ಲಿಯ ದ್ವಂದ್ವಾರ್ಥ ಮತ್ತು ದ್ವಿರುಕ್ತಿಯತ್ತ ಗಮನ ಕೊಟ್ಟು, ಹಾಡಬೇಕು ಎಂಬ ಸೂಚನೆ ಕೊಟ್ಟದ್ದು ಯುಕ್ತವಾಗಿದೆ.

ಶಬ್ದಗಳೊಡನೆ ಬೇಂದ್ರೆ ಆಡುವ ಆಟ ಗಮನಾರ್ಹವಾಗಿದೆ. ಇದೇ ಒಂದು ಸ್ವತಂತ್ರ ಅಧ್ಯಯನವಾಗುತ್ತದೆ.

ಬೇಂದ್ರೆಯವರ ಎಲ್ಲ ಪದ್ಯಗಳಲ್ಲಿಯ ಅರ್ಥ ಸರಳವಿರುವದಿಲ್ಲ. ಅದು ಶಬ್ದಗಳಾಚೆ ಹೋಗುತ್ತದೆ. ಶಬ್ದಗಳು ಬೇಂದ್ರೆಯವರಿಗೆ ಅರ್ಥಗಳ ಸೂಚಿ ಮಾತ್ರ. ಬೇಂದ್ರೆಯವರ ಪದ್ಯಗಳು ಓದುಗರ ಅನುಭವ, ಅನುಭವದ ಆಳ, ವಿಸ್ತಾರ, ಊಹಾಶಕ್ತಿ ಸಾಮರ್ಥ್ಯವನ್ನು ಅವಲಂಬಿಸಿ, ಅರ್ಥದ ವಿಶ್ವವನ್ನು ತೆರೆದುಕೊಳ್ಳುತ್ತವೆ.

ಅರ್ಥೈಸುವವರ ಸಂಸ್ಕಾರಶಕ್ತಿಯನ್ನು ಅವಲಂಬಿಸಿದೆ ಬೇಂದ್ರೆ ಕಾವ್ಯ, ಅರ್ಥವಿಲ್ಲದ ಸಾಲು ಎಂದು ಆಚೆ ತಳ್ಳಲು ಸಾಧ್ಯವಾಗುವದಿಲ್ಲ.

ಬೇಂದ್ರೆಯವರಿಗೆ ಅವರ ಕಾವ್ಯ ಕೇಳಿಸುತ್ತಿತ್ತು. ಅದನ್ನು ಅವರು ಬರೆದುಕೊಳ್ಳುತ್ತಿದ್ದರು. ಹೀಗಾಗಿ ಅವರ ಪ್ರತಿಭೆ ಶ್ರಾವಣ ಪ್ರತಿಭೆ ಎಂದು ಗುರುತಿಸಲಾಯಿತು. ಬೇಂದ್ರೆಯವರಿಗೆ ಅವರ ಕಾವ್ಯ ಹೇಗೆ ಕೇಳಿಸುತ್ತ ಹೋಯಿತೋ, ಅದೇ ಧಾಟಿಯಲ್ಲಿ ತಾಲದಲ್ಲಿ ಮತ್ತು ಲಯದಲ್ಲಿ ಓದಿ ತೋರಿಸುತ್ತಿದ್ದರು. ಅವರ ಕಾವ್ಯವಾಚನ ಯಾವಾಗಲೂ ಫಲ ಕೊಟ್ಟಿತು.

ಮೂಲ : **ದ.ರಾ.ಬೇಂದ್ರೆ ಕಾವ್ಯದ ವ್ಯಾಕಾರಣ** ಕೃತಿಯಲ್ಲಿನ ಡಾ. ವಾಮನ ಬೇಂದ್ರೆ ಅವರ "**ಒಳನೋಟ**" ಲೇಖನದಲ್ಲಿನ ಆಯ್ದ ಭಾಗ.

ಸಂಪಾದಕರು : **ಗುಹಾ**

ಪ್ರಕಟವಾದುದನ್ನು ಪ್ರಕಟಗೊಳಿಸುವ ಸಂಕಟ - ಮಹಾಬಲ

ಏನೋ ದೇವರು ಕಣ್ಣುಬಿಟ್ಟು ನೋಡಿದ ಎನ್ನುವ ಹಾಗೆ ನಾನು ಪತ್ರಿಕೆಗಳಿಗೆ ಕಳುಹಿಸಿದ ಲೇಖನವು ಸಂಪಾದಕರ ವಿಷಾದ ಪತ್ರದೊಡನೆ ವಾಪಸು ಬರುವುದು ನಿಂತು, ಹಲವು ಕತೆ,ಕವನಗಳು ಪ್ರಕಟವಾಗತೊಡಗಿ ಹಿಗ್ಗು ತರತೊಡಗಿತು.ಅದರಲ್ಲೂ ನಾಡಿನ ಪ್ರಸಿದ್ಧ ಪತ್ರಿಕೆಯೊಂದು ನನ್ನ ಪದ್ಯವೊಂದನ್ನು ಭಾವಚಿತ್ರ ಸಮೇತ ಪ್ರಕಟಿಸಿದಾಗ ನನಗೆ "ಗಗನವು ಎಲ್ಲೋ ಭೂಮಿಯು ಎಲ್ಲೋ ಎಂದು" ಎಂದು ಸಂತಸದಲಿ ತೇಲಾಡುವಂತಾಯಿತು.

ಪ್ರಕಟವಾಗಿದ್ದೇನೋ ಸರಿ. ಆದರೆ ಕವಿ ಜನ್ನ ಕೊರಗಿದಂತೆ "ಮಾಲೆಗಾರನ ಪೊಸಬಾಸಿಗಂ ಮುಡಿವ ಭೋಗಿಗಳಿಲ್ಲದೆ ಬಾಡಿಪೋಗದೇ" ಎಂಬಂತಾಗದೆ ನನ್ನ ಕವನ ಪತ್ರಿಕೆಯಲ್ಲಿ ಪ್ರಕಟವಾದ ಸಂತಸವನ್ನು ಸುತ್ತಲಿನ ಜನರೊಂದಿಗೆ, ವಿಶೇಷವಾಗಿ ನನ್ನದೇ ಸಹೋದ್ಯೋಗಿಗಳಿಗೆ ತಲುಪಿಸುವುದು ಹೇಗೆ ಎಂಬ ದಶಲಕ್ಷ ಸುವರ್ಣ ವರಹಗಳ ಪ್ರಶ್ನೆ ಹಾಗೇ ಉಳಿಯಿತು.

ಹಾಗೇ ಯೋಚಿಸುತ್ತಿದ್ದಾಗ ಒಂದು ಉಪಾಯವೂ ಹೊಳೆಯಿತು.ಹೇಗೂ ನಮ್ಮ ಬ್ಯಾಂಕಿನ ಕನ್ನಡ ಸಂಘದ ವಾಚನಾಲಯಕ್ಕೆ ಆ ಪ್ರಸಿದ್ಧ ವಾರಪತ್ರಿಕೆಯನ್ನು ತರಿಸಿಯೇ ತರಿಸುತ್ತಾರೆ. ಆ ಪತ್ರಿಕೆ ಬಂದೊಡನೆ ಇತರ ಮಹಿಳಾ ಸದಸ್ಯರೊಡನೆ ಹೋರಾಡಿ (ಗಂಡಸರಿಗೆ ಸಾಧ್ಯವಿರಲಿಲ್ಲ ಬಿಡಿ!) ಮೊದಲ ಓದುಗರಾಗಿ ಎರವಲು ಪಡೆಯುತ್ತಿದ್ದ ವನಿತಾ ಅವರನ್ನು ಕೇಳಿದರೆ ಹೇಗೆ? ಎನಿಸಿತು.

ತಡಮಾಡದೆ ಹಾಗೂ ಧೈರ್ಯಮಾಡಿ ವನಿತಾ ಅವರನ್ನು ಕೇಳಿಯೇ ಬಿಟ್ಟೆ.

"ವನಿತಾ ಅವರೆ ನೀವು ಈ ವಾರದ ....ಆ ಪತ್ರಿಕೆ ಓದಿದಿರಾ?" ಎಂದು.

"ಓದದೇ ಏನು ಸಾರ್.ಮುಖಪುಟದಿಂದ ಹಿಡಿದು ಕೊನೆಯ ರಕ್ಷಾಪುಟದವರೆಗೂ ಓದಿದ್ದೇನೆ. ವಾರಭವಿಷ್ಯ , ಸಿನಿಮಾರಂಗ, ಬ್ಯೂಟಿ ಟಿಪ್ಸ್ ಯಾವುದನ್ನೂ ಬಿಟ್ಟಿಲ್ಲ" ಎಂದು ಉತ್ಸಾಹದಿಂದ ಹೇಳಿ "ಯಾಕೆ ಸಾರ್"? ಎಂದು ಪ್ರಶ್ನಿಸಿದರು.

"ಅದರಲ್ಲಿ ನನ್ನದೊಂದು ಕವನ ಪ್ರಕಟವಾಗಿದೆ ಓದಿದಿರಾ?" ಎಂದು ಹೆಮ್ಮೆಯಿಂದ ಹೇಳಿದೆ.

"ಏನ್ಸಾರ್ ,ನೀವೂ ಕವನ ಬರೀತೀರಾ?"ಎಂದು ಅವರು ಆಶ್ಚರ್ಯದಿಂದ ಕೇಳಿದಾಗ ಖೇದವಾಯಿತು.

ಕವನ ಬರೀತೀರಾ ಎಂದು ಕೇಳಿದ್ದರೆ ಸಾಕಾಗಿತ್ತು. ನೀವೂ ಎಂಬುವ ಕೊಂಬು ದೀರ್ಘ ಪ್ರಯೋಗ ಬೇಕಿತ್ತೆ? ಎಂದುಕೊಂಡು

"ಏನೋ ಆಗಾಗ್ಗೆ ಬರೆಯುವ ಪ್ರಮಾದವನ್ನೂ ಮಾಡುತ್ತೇನೆ" ಎಂದು ತುಸು ವ್ಯಂಗ್ಯ ಬೆರೆಸಿಯೇ ಉತ್ತರಿಸಿದೆ.

"ಎಲ್ಲಿದೆ ಸಾರ್? ಹೊಸರುಚಿ ಆದಮೇಲೋ ಅಥವಾ ಸಿನಿಮಾರಂಗಕ್ಕೆ ಮುಂಚೆನೋ?" ಅವರ ಮತ್ತೊಂದು ಪ್ರಶ್ನೆ.

"ಅರವತ್ತನಾಲ್ಕನೆಯ ಪುಟದಲ್ಲಿದೆ ವನಿತಾ ಅವರೆ.ನೀವು ನೋಡಲಿಲ್ಲವೆ?" ಎಂದು ಪ್ರಶ್ನಿಸಿದೆ.

ಆಕೆ ಏನೋ ಜ್ಞಾಪಿಸಿಕೊಂಡವರಂತೆ "ಹೌದು ನೋಡಿದೆ,ಅಲ್ಲಿ ನಿಮ್ಮ ತರಹಾನೇ ಇರುವ ಒಬ್ಬರ ಫೋಟೋ ಇತ್ತು."

"ಆಮೇಲೆ" ನನ್ನ ಕುತೂಹಲ ಇನ್ನೂ ತಣಿದಿರಲಿಲ್ಲ.

"ಅಷ್ಟೇ ಸಾರ್ .ಅದು ನೀವೂ ಅಂತ ಗೊತ್ತಾಗಲಿಲ್ಲ." ಆಕೆ ನಮ್ರತೆಯಿಂದ, ಪ್ರಾಮಾಣಿಕವಾಗಿಯೇ ಉತ್ತರಿಸಿದರು.

ಕನ್ನಡ ಬಲ್ಲ ಮಿತ್ರರೇ ಹೀಗೆ ನನ್ನ ಕವನದತ್ತ ಕುರುಡುನೋಟ ಬೀರಿರುವಾಗ ಇನ್ನು ಬಾಗಿಲಲ್ಲಿ ನಿಂತ ಸೆಕ್ಯೂರಿಟಿ ನೇಪಾಳದ ಬಹದ್ದೂರ್ ಸಿಂಗ್ ಹೇಗೆ ತಿಳಿದಾನು ಎಂದುಕೊಂಡು ದುಃಖಿಸಿದೆ.

ಆ ದುಷ್ಕಾಲದಲ್ಲಿ ಈಗಿನಂತೆ ವಾಟ್ಸಪ್,ಫೇಸ್ಬುಕ್,ಟೆಲಿಗ್ರಾಂ ಇತ್ಯಾದಿಗಳು ಇರದಿದ್ದರಿಂದ ಈ ಪರಿಪಾಟಲು ಅನ್ನಿ.

ಕ್ಯಾಂಟೀನಿನಲ್ಲಿರುವ ಸಾಮಾನ್ಯ ನೋಟಿಸ್ ಬೋರ್ಡಿನಲ್ಲಿ ಕವನದ ಪ್ರತಿಯನ್ನು ಏಕೆ ಪ್ರದರ್ಶಿಸಬಾರದು ಎಂಬ ಸಲಹೆ ಎಲ್ಲಿಂದಲೋ ಬಂತು.ಹೌದಲ್ಲ!ಕಳೆದುಕೊಳ್ಳುವುದೇನು?ಹೋದರೆ ಕಲ್ಲು.ಉದುರಿದರೆ ಕಾಯಿ ಎಂದು ನನ್ನ ಕವನವನ್ನು ನೋಟಿಸ್ ಬೋರ್ಡಿಗೆ ಚುಚ್ಚಲು ಉತ್ಸಾಹದಿಂದಲೇ ಹೋದೆ.

ಅಲ್ಲಿ ಕಾಫಿ ಹೀರುತ್ತಿದ್ದ ಒಬ್ಬ ಹಿರಿಯ ಸಹೋದ್ಯೋಗಿಗಳು ನನ್ನನ್ನು ಕರೆದು ಏನೆಂದು ವಿಚಾರಿಸಿದರು.ನಾನು ಪ್ರವರ ಹೇಳಿದೆ.ಅದಕ್ಕೆ ಅವರು   "ನಿಮಗೆಲ್ಲೋ ಭ್ರಾಂತು.ಅಲ್ಲಾ,ಕಾಫಿ ತಿಂಡಿಗೆ ಬಂದವರು ನಿಮ್ಮ ಕವನ ಓದುತ್ತಾರೆಯೇ. "if you want to keep anything secret put it on notice board"ಎಂಬ ಗಾದೆ ಕೇಳಿಲ್ಲವೆ?ಎಂದು ನಕ್ಕರು. ನಾನು ನಿರುತ್ತೇಜನಗೊಳ್ಳಲಿಲ್ಲ. ನೋಟೀಸ್ ಬೋರ್ಡ್ ಮೇಲೆ ಹಾಕಿಯೇ ಹಾಕಿದೆ. ಮೂರು ದಿನವಾದರೂ ಒಬ್ಬರೂ ಕವನದ ಬಗ್ಗೆ ಮಾತನಾಡಲಿಲ್ಲ.ಅಂತೂ ಆ ಹಿರಿಯ ಸಹೋದ್ಯೋಗಿಗಳ ಕಾಲಜ್ಞಾನವಾಣಿ ನಿಜವಾಯಿತು.

ಈ ಪ್ರಕಟವಾದದ್ದನ್ನು ಪ್ರಕಟಗೊಳಿಸುವ ಅಭಿಯಾನಕ್ಕೆ ನನ್ನ ಮಿತ್ರನೊಬ್ಬ ಪರಿಹಾರ ಕಂಡುಹಿಡಿದಿದ್ದ. ಪುಸ್ತಕಗಳ ಗಂಟನ್ನು ಹೆಗಲ ಮೇಲೆ ಹೊತ್ತು ಮಾರಿದ ಗಳಗನಾಥರಂತೆ, ಸೈಕಲ್ ಮೇಲೆ ಹೊತ್ತು ಸಾರಿದ ಇತ್ತೀಚೆಗೆ ಗತಿಸಿದ ಸಜ್ಜನ ಕವಿ ವಿ ಸಿ ಐರಸಂಗರಂತೆ ಪ್ರಕಟಿತ ಕವನಗಳ ಹಲವು ಪ್ರತಿಗಳನ್ನು ತನ್ನ ಬಗಲಚೀಲದಲ್ಲಿ ತುಂಬಿಕೊಂಡು ಸಿಕ್ಕ ಪರಿಚಿತರಿಗೆ "ನನ್ನ ಪದ್ಯ ಪ್ರಕಟವಾಗಿದೆ ಓದಿ" ಎಂದು ಕರಪತ್ರ ಹಂಚುವವರಂತೆ ಹಂಚುತ್ತಿದ್ದ. ಕೆಲವರು ಅದರ ಮೇಲೆ ಕಣ್ಣಾಡಿಸಿ ನಂತರ ತಲೆಯಲ್ಲಾಡಿಸಿ ಸುಮ್ಮನೆ ಹೊರಟುಹೋಗುತ್ತಿದ್ದರು.ಮತ್ತೆ ಕೆಲವರು ಏನೂ ಹೇಳದೆ ಅದನ್ನು ಚೀಲಕ್ಕೆ ತುರುಕಿಕೊಂಡು ಹೋಗುತ್ತಿದ್ದರು.ಮತ್ತೂ ಹಲವರು ದೂರದಿಂದಲೇ ಇವನನ್ನು ಕಂಡು ಸಾಲ ಕೊಟ್ಟವರಿಂದ ತಪ್ಪಿಸಿಕೊಳ್ಳುವರಂತೆ ಸಂದಿಗೊಂದಿಗಳಲ್ಲಿ ತೂರಿ ಪರಾರಿಯಾಗುತ್ತಿದ್ದರು.

ಮತ್ತೊಬ್ಬ ಮರಿಕವಿಮಿತ್ರನ ವ್ಯಥೆ   ಇನ್ನೂ ಕರಾಳ.ಎಲ್ಲರಂತೆ ತನ್ನ ಪ್ರಕಟಿತ ಪದ್ಯದ ಜೆರಾಕ್ಸ್ ಮಾಡಿಸಿ ಎಲ್ಲ ಸಹೋದ್ಯೋಗಿಗಳ ಟೇಬಲ್ ಮೇಲೆ ಇರಿಸಿ ಓದಿ, ಅಭಿಪ್ರಾಯ ತಿಳಿಸಿ ಎಂದು ಸಾರುತ್ತಾ ಹೋದ.ಅಂದು ಶುಕ್ರವಾರದ ಮಧ್ಯಾಹ್ನ ಎಲ್ಲರೂ ವಾರದ ಲೆಕ್ಕದ ತಾಳೆಯಲ್ಲಿ ಮುಳುಗಿದ್ದರು.ಕವನದತ್ತ ಕಣ್ಣನ್ನೂ ಹಾಯಿಸಲು ಸಮಯವಿರಲಿಲ್ಲ. ಅದೇ ಸಮಯಕ್ಕೆ ಸರಿಯಾಗಿ ಮದುವೆ ನಿಷ್ಕರ್ಷೆಯಾಗಿದ್ದ ಬಂದ ಯುವ ಸಹೋದ್ಯೋಗಿಯೊಬ್ಬ ಮದುವೆಯ ಸಂತಸದ ಸಿಹಿ ಹಂಚಲು ಉತ್ಸಾಹದಿಂದ ಬಂದ. ಎಲ್ಲರ ಟೇಬಲ್ ಮೇಲೂ ಇದ್ದ ಕವನದ ಪ್ರತಿ ಕಂಡು ಅವನಿಗೆ ಪರಮಾನಂದ ವಾಯಿತು.ತನ್ನ ಕೆಲಸ ಹಗುರವಾದುದಕ್ಕೆ ಹರ್ಷಿಸುತ್ತಾ ಆ ಕವನದ ಪ್ರತಿ ಮೇಲೆ ಮೈಸೂರು ಪಾಕ್, ಚೌಚೌ ಇರಿಸಿ ಹೋದ. ಎಲ್ಲರೂ ಕೆಲಸದ ಬಿಸಿಯಲ್ಲೇ ಅಲ್ಲಿದ್ದ ಚರುಪನ್ನು ಖಾಲಿ ಮಾಡಿ,ಕವನದ ಪ್ರತಿಯಿಂದಲೇ ಕೈ ಬಾಯಿ ಒರೆಸಿಕೊಂಡು, ಕವನದ ಪ್ರತಿಯನ್ನು ಉಂಡೆ ಕಟ್ಟಿ ಕಸದ ಬುಟ್ಟಿಗೆ ಎಸೆದರು. ತನ್ನ ಕವನ ಹೀಗೆ ಕಣ್ಣೆದುರೇ ಅಶ್ವತ್ಥಾಮನ ಖಡ್ಗದೇಟಿಗೆ ಸಿಕ್ಕಿ ಉರುಳಿದ ಉಪಪಾಂಡವರ ತಲೆಗಳಂತೆ ಆದುದನ್ನು ಕಂಡ ಮರಿಕವಿ ಶೋಕಸಾಗರದಲ್ಲಿ ಮುಳುಗಿದ.

ಆದರೆ ಕಿರುತೆರೆ, ಸಿನಿಮಾಗಳಲ್ಲಿ ಸಣ್ಣಾತಿಸಣ್ಣ ಪಾತ್ರ ಮಾಡುವ ವರೂ ಪುಣ್ಯವಂತರು. ಹೊಸ ಷರಟು ಹಾಕಿಕೊಂಡು ಬಂದಾಗ ಸಹೋದ್ಯೋಗಿಗಳು ಅದರ ಬೆಲೆ ಎಷ್ಟು? ಎಲ್ಲಿ ಕೊಂಡದ್ದು? ಯಾರು ಹೊಲಿದದ್ದು ? ಎಂಬ ಪ್ರಶ್ನೆಗಳ ಸರಮಾಲೆ ಎಸೆವಂತೆ ಪ್ರತಿಯೊಬ್ಬರೂ ಆ ನಟನನ್ನು ವಿಚಾರಿಸುವವರೇ .ನನ್ನ ಸಹೋದ್ಯೋಗಿಯೊಬ್ಬ ಒಂದು ಸಿನಿಮಾದ ನಾಲ್ಕು ದೃಶ್ಯಗಳಲ್ಲಿ ಬಂದು ಹೋಗುವ ಪೋಲಿಸ್ ಅಧಿಕಾರಿಯ ಪಾತ್ರ ನಿರ್ವಹಿಸಿದ್ದ. ಎಲ್ಲ ಸಹೋದ್ಯೋಗಿಗಳು ಉತ್ಸಾಹದಿಂದ ಮಲ್ಟಿಪ್ಲೆಕ್ಸ್ ನಲ್ಲಿ ಮುನ್ನೂರು ರೂಪಾಯಿ ತೆತ್ತು ನೋಡಿದರು.ಅವನು ಬ್ಯಾಂಕಿಗೆ ಬಂದೊಡನೆ ಅವನಿಗೆ ಎಲ್ಲರೂ ಅಕ್ಷರಶಃ ಮುತ್ತಿಗೆ ಹಾಕಿದರು.ಒಬ್ಬ "ಎಂಥ ಅದ್ಭುತ ಅಭಿನಯ"ಎಂದ.(ಇಡೀ ಸಿನಿಮಾದಲ್ಲಿ ಅವನು ಮೇಲಧಿಕಾರಿಗಳಿಗೆ "ಎಸ್ ಸಾರ್" ಎನ್ನುವ ಕೈಕೆಳಗಿನವನ ಮೇಲೆ ದರ್ಪ ತೋರುವ ಮಾತಷ್ಟೇ ಆಡಿದ್ದು)ಮತ್ತೊಬ್ಬ ಎಂಥಾ ಸುಂದರ ಡ್ರಸ್ ಎಂದ .(ಆ ಖಾಕಿ ಬಟ್ಟೆಯಲಿ ಏನು ಸೌಂದರ್ಯ ಕಂಡನೋ!) ಆ ಕಿರುನಟನಂತೂ ಅಂದು ಈ ಭೂಮಿಯ ಮೇಲೇ ಇರಲಿಲ್ಲ.

ಆದರೆ ಕವನ,ಕತೆ ಇತ್ಯಾದಿಗಳನ್ನು ಬರೆದು ಜನರ ಗಮನ ಸೆಳೆಯುವುದು ಹೊಸ ಚಪ್ಪಲಿ ಧರಿಸಿದಂತೆ.ಸಾವಿರದ ಐನೂರು ರೂಪಾಯಿ ತೆತ್ತು ಕೊಂಡರೂ,ಕುಂಟುತ್ತ ನಡೆಯುತ್ತಾ,ಹೊಸ ಚಪ್ಪಲಿ ಕಚ್ಚಿದೆ ಎಂದು ನರಳುತ್ತಾ ಗಮನ ಸೆಳೆಯಬೇಕು.ಉದಯೋನ್ಮುಖ ಕವಿ,ಸಾಹಿತಿಯ ಪಾಡೂ ಹಾಗೇ.

ನೋಡಿ .ತೀರ್ಮಾನಿಸಿ .ಹೀಗೇ ಇರುವಿರೋ ಅಥವಾ ಸಿನಿಮಾ,ಕಿರುತೆರೆಗಳತ್ತ ಪಕ್ಷಾಂತರ ಮಾಡುವಿರೋ?

ಲೇಟಪ್ಪನ ಸುಪ್ರಭಾತವು. - ಜಿ.ವಿ ಅರುಣ

ನನಗೆ ಟ್ರಾನ್ಸಫರ್ ಆದಾಗ... "ಓ! ಒಳ್ಳೆ ಪೋಸ್ಟಿಂಗೇ ಸಿಕ್ಕಿದೆ. ಅಲ್ಲಿ ಕೆಲಸ ಮಾಡದೆ ತಪ್ಪಿಸಿಕೊಂಡು ಒಳ್ಳೆ ಹೆಸರು ತೊಗೊಳುದು ಹೇಗೆ ಅನ್ನೋಕೆ ಒಳ್ಳೆ ಟ್ರೈನಿಂಗ್ ಸಿಕ್ಕುತ್ತೆ..." ಅಂತ ಎಲ್ಲರೂ ನನ್ನ ಕೈಕುಲುಕಿದ್ದರು.

ಹೊಸ ಆಫೀಸಿಗೆ ಬಂದು ರಿಪೋರ್ಟ್ ಮಾಡಿಕೊಂಡೆ. ಹೊಸ ಆಫೀಸಿನಲ್ಲಿ ಎಲ್ಲರ ಪರಿಚಯವೂ ಆಯಿತು.

"ಅಲ್ಲಿ ಎರಡು ಕುರ್ಚಿ ಖಾಲಿ ಇದೆಯಲ್ಲ, ಅದರಲ್ಲಿ ಬಲಗಡೆ ಕುರ್ಚಿ, ಟೇಬಲ್ಲು ನಿಮ್ಮದು. ನಿಮ್ಮ ಪಕ್ಕ ಮಿ. ... ಕೂತ್ಕೋತಾರೆ... ಇನ್ನೇನು ಬಂದ್ಬಿಡ್ತಾರೆ..." ಅಂತ ಹೊಸ ಬಾಸ್ ಹೇಳಿದರು. ಹೋಗಿ ನನ್ನ ಹೊಸ ಟೇಬಲ್ ಮುಂದೆ ಕುರ್ಚಿಲಿ ಕುಳಿತೆ.

ಅರ್ಧಗಂಟೆ ಆದ ಮೇಲೆ, ಹೆಲ್ಮೆಟ್ಟನ್ನು ಹೊರಗೆ ಬರಲು ಹವಣಿಸುತ್ತಿದ್ದ ಹೊಟ್ಟೆಯ ಮೇಲಿನ ಗುಂಡಿಯ ಪಕ್ಕ ಎಡಗೈಯಲ್ಲಿ ಅಮರಿಕೊಂಡು, ಐದು ಮಹಡಿಯ ಊಟದ ಡಬ್ಬಿಯನ್ನು ಬಲಗೈಯಲ್ಲಿ ಹಿಡಿದ ವ್ಯಕ್ತಿಯ ಪ್ರವೇಶವಾಯಿತು. ಅವನ ಎತ್ತರಕ್ಕೆ ಸ್ವಲ್ಪ ದಪ್ಪ ಎನ್ನಬಹುದಾದ ಆ ವ್ಯಕ್ತಿ ಬಂದು ನನ್ನ ಪಕ್ಕದ ಕುರ್ಚಿಯಲ್ಲಿ ಕುಳಿತುಕೊಂಡಿತು.
ನನ್ನನ್ನು ನೋಡಿ "...ಹಿ ಹಿ ಹೀ... ನೀವೇನಾ ಹೊಸ ಟ್ರಾನ್ಸ್ಫರ್ ಕೇಸು...? ಸುಸ್ವಾಗತ. ಡೋಂಟ್ ವರಿ ಮಾಡ್ಕೊಬೇಡಿ... ನಾನಿದ್ದೀನಿ... ನಿಮಗೆ ಏನು ಬೇಕಾದರೂ ನನ್ನನ್ನೇ ಕೇಳಿ, ಎಲ್ಲದಕ್ಕೂ ಬಾಸ್ ಹತ್ರ ಓಡಬೇಡಿ... ಅವರು ವಾಪಸ್ ನನ್ನ ಹತ್ರಾನೇ ಬರ್ತಾರೆ..." ಅಂತ ಪರಿಚಯ ಭಾಷಣ ಮಾಡಿ ಅಭಯ ಹಸ್ತ ತೋರಿಸಿದ.

"ತುಂಬ ಥ್ಯಾಂಕ್ಸ್... ನಿಮ್ಮಂಥೋರು ಸಿಕ್ಕಿಬಿಟ್ರೆ ನಮ್ಮಂಥ ಹೊಸಬ್ರು ಹೇಗೋ ನಿಭಾಯಿಸಿಬಿಡ್ತವೆ... ಐ ಆಮ್ ವೆರಿ ಲಕ್ಕಿ..." ಅಂದೆ.

ನಾಲ್ಕೇ ದಿನದಲ್ಲಿ ಗೊತ್ತಾಯ್ತು. ಅವರನಿಗೆ ಬಾಸ್ ಯಾವ ಕೆಲಸವನ್ನೂ ಕೊಡುವುದಿಲ್ಲ ಅಂತ. ಜೊತೆಗೆ ಮುಖ್ಯವಾಗಿ ಅವನು ಆಫೀಸಿಗೆ ಬರುವುದು ಆಫೀಸ್ ಪ್ರಾರಂಭವಾದ ಅರ್ಧಗಂಟೆಯ ನಂತರ - ಒಂದು ಗಂಟೆಯ ಒಳಗೆ ಅನ್ನುವುದು! ಅದರ ಬಗ್ಗೆ ಬಾಸ್ ಸೇರಿದಂತೆ, ಯಾರೂ ತಲೆ ಕೆಡೆಸಿಕೊಂಡಂತೆ ಕಾಣಿಸಲಿಲ್ಲ.

ಅವತ್ತು ಬಾಸ್ ಬೆಳಿಗ್ಗೆ ಬಂದ ತಕ್ಷಣ ಕರೆದು, ಒಂದು ಫೈಲ್ ಕೊಟ್ಟು... "ನೋಡ್ರಿ ಇದನ್ನು ಇನ್ನು ಅರ್ಧಗಂಟೇಲಿ ಹೆಡ್‌ಆಫೀಸ್‌ಗೆ ಕಳುಹಿಸಬೇಕು... ಬೇಗ ಅಟೆಂಡ್ ಮಾಡಿ ತನ್ನಿ... ಆ ಲೇಟಪ್ಪನಿಗೆ ಕಾಯ್ತಾ ಕೂತುಕೊಳ್ಳಬೇಡಿ..." ಅಂದ್ರು.

ಅಂದೇ ನನಗೆ, ನನ್ನ ಪಕ್ಕದ ಕುರ್ಚಿಯ ಮೇಲೆ ಕೂರುವ ಆಸಾಮಿಯ "ಅನ್ವರ್ಥನಾಮ" ಗೊತ್ತಾಗಿದ್ದು! 'ಲೇಟಪ್ಪ' - ಎಂಥ ಹೆಸರು ಆಸಾಮಿಗೆ!

ತಕ್ಷಣವೆ, ಯಾಕೋ ಕಾಣೆ, "ಏನಾದ್ರು ಮಾಡಿ ಅವನು ಪ್ರತಿದಿನ ಆಫೀಸ್ ವೇಳೆಗೆ ಸರಿಯಾಗಿ ಬರುವಂತೆ ಮಾಡಲೇಬೇಕು" ಎಂದು ಪ್ರತಿಜ್ಞೆ ಮಾಡಿದೆ. ಕೆಲವು ಸಲ ಲೈಫಲ್ಲಿ ಇಂಥಾ ಮಿಸ್ಟೇಕ್‌ಗಳು ಆಗುತ್ತವೆ!

ಅಂದು ಮಿ. ಲೇಟಪ್ಪ ಬರುತ್ತಿದ್ದಂತೆಯೇ ನಾನು "... ಏನ್ಸಾರ್ ತುಂಬ ಲೇಟು... ಬಾಸ್ ಕಾಯ್ತ ಇದ್ರು... ಕೊನೆಗೆ ನಾನೇ ರಿಪೋರ್ಟು ಮಾಡಿಕೊಟ್ಟೆ" ಅಂದೆ.
ಲೇಟಪ್ಪನಿಗೆ ಆಶ್ಚರ್ಯವೋ ಆಶ್ಚರ್ಯ, ಬಹುಶಃ ಅವನ ಜನ್ಮದಲ್ಲಿ ಇದುವರೆಗೆ ಅವನಿಗಿಂತ ಚಿಕ್ಕವರು ಯಾರೂ ಆ ರೀತಿ ಪ್ರಶ್ನೆ ಮಾಡಿರಲಿಲ್ಲವೇನೋ. ತಕ್ಷಣ ಸಾವರಿಸಿಕೊಂಡು "...ಓ ಅದಾ... ಇವತ್ತು ಬೇಗಲೇ ಹೊರಟೆ... ಹಾಳದ್ದು ಗಡಿಯಾರಾನೇ ನಿಂತುಹೋಗಿತ್ತು. ಟೈಂ ಆಗಿದ್ದೇ ಗೊತ್ತಾಗಲಿಲ್ಲ.... ನೀವು ಇರೋಹೊತ್ತಿಗೆ ಆಯ್ತು. ನಾನು ನಾಲ್ಕು ದಿನದಲ್ಲಿ ಹೇಳಿಕೊಟ್ಟಿದ್ದನ್ನ ಬಹಳ ಬೇಗ ಕಲಿತುಬಿಟ್ರಿ. ನೋಡಿ, ಅದು ಇವತ್ತು ಉಪಯೋಗಕ್ಕೆ ಬಂತು... ಹಿ... ಹಿ... ಹೀ..." ಅಂತ ಹೇಳಿದ. ಜಟ್ಟಿ ಬಿದ್ದರೂ ಮಿಸೆ ಮಣ್ಣಾಗಲಿಲ್ಲ ಅಂದ್ರೆ ಏನು ಅಂತ ನನಗೆ ಸ್ಪಷ್ಟವಾಗಿ ಗೊತ್ತಾಯ್ತು!

ನಾನು ಅಂದು ಕೇಳಿದ್ದೇ ಮೊದಲಾಯ್ತು. ಪ್ರತಿದಿನ ಬೆಳಗ್ಗೆ ಆತ ಬರುತ್ತಿದ್ದಂತೆಯೇ 'ಅಂದು ಯಾಕೆ ಲೇಟ್ ಆಯ್ತು' ಅನ್ನುವುದಕ್ಕೆ ಎಕ್ಸ್‌ಪ್ಲನೇಶನ್ ಬರಲು ಪ್ರಾರಂಭವಾಯಿತು - ನಾನು ಕೇಳದೇ ಇದ್ದರೂ!

ಮಾರನೆಯ ದಿನ... "ಹಿ... ಹಿ... ಹೀ... ಇವತ್ತು ನನ್ನ ಮಿಸೆಸ್ಸು ಅಡಿಗೆ ಮಾಡೋದೇ ಲೇಟಾಗೋಯ್ತು..!"

ಮೂರನೆಯ ದಿನ "ಹಿ... ಹಿ... ನಮ್ಮ ಪಾಪುನ ಕ್ಲಾಸ್‌ಟೀಚರ್ ಅರ್ಜೆಂಟಾಗಿ ಬನ್ನಿ ಅಂತ ಹೇಳಿಕಳಿಸಿದ್ದರು... ತುಂಬಾ ಒಳ್ಳೆಯೋರು ಸಾರ್ ಅವರು. ತುಂಬ ಇಂಟೆಲಿಜೆಂಟು, ಅವರನ್ನ ನೋಡಿದರೆ ಮಾತಾಡಿಸ್ತಾನೆ ಇರಬೇಕು ಅನ್ನಿಸುತ್ತೆ. ಮುಂದಿನ ಸಲ ನಿಮ್ಮನ್ನೂ ಕರೆದುಕೊಂಡು ಹೋಗಿ ಪರಿಚಯ ಮಾಡಿಸ್ತೀನಿ. ಸ್ಕೂಲಲ್ಲಿ ಸೀಟು ಗೀಟು ಬೇಕಾದ್ರೆ ಅನುಕೂಲ ಆಗುತ್ತೆ."

ಲೇಟಪ್ಪನಿಗೆ ತಾನು ಲೇಟಾಗಿ ಬಂದಿದ್ದನ್ನು ಇತರರ ದೃಷ್ಟಿಯಿಂದ ಮರೆಯಾಗಿಸಿ ಬೇರೆಡೆಗೆ ಹರಿಸುವ ಕಲೆಯೂ ಕರಗತವಾಗಿತ್ತು.

ನಾಲ್ಕನೆಯ ದಿನ... "ಇವತ್ತು ಏನಾಯ್ತು ಅಂತೀರ, ನಮ್ಮ ಮನೆಯಿಂದ ಮೂರನೆ ಮನೆಯೋರು ಬೆಳಗ್ಗೆ ಅಷ್ಟು ಹೊತ್ತಿಗೆ ನಮ್ಮ ಮನೆಗೆ ಬಂದು... 'ನಂಗೆ ಬೇರೆ ಡಿಪಾರ್ಟ್‌ಮೆಂಟ್‌ಗೆ ವರ್ಗ ಆಯ್ತು. ಹೊಸ ಡಿಪಾರ್ಟುಮೆಂಟು ನಿಮ್ಮ ಆಫೀಸ್ ಪಕ್ಕದಲ್ಲೇ ಇದೆ. ಈ ಏರಿಯಾ ಎಲ್ಲ ನಂಗೆ ಹೊಸದು. ದಯವಿಟ್ಟು ನನ್ನ ಸ್ಕೂಟರ್ ಮೇಲೆ ಒಂದು ಸ್ವಲ್ಪ ರೋಡ್ ತೋರಿಸಿಬಿಡಿ ಸಾರ್' ಅಂದ್ರು. ಸರಿ ಅಂತ ಕಾಯ್ತಾ ಇದ್ದೆ. ಎಷ್ಟೊತ್ತಾದ್ರೂ ಆಸಾಮಿ ಪತ್ತೆನೇ ಇಲ್ಲ! ಹೊಸ ಆಫೀಸ್‌ಗೆ ಹೋಗೋವಾಗ ಮೊದಲನೇ ದಿನವೇ ಹೀಗಾದ್ರೆ ಹ್ಯಾಗೆ ಹೇಳಿ. ಜೊತೆಗೆ ನಂಗೂ ಲೇಟಾಯ್ತು. ಇನ್ನೊಬ್ರಿಗೆ ತೊಂದ್ರೆ ಆಗುತ್ತೆ ಅನ್ನೋ ಪರಿಜ್ಞಾನವೇ ಇರೊಲ್ಲ ನೋಡಿ..."

ಐದನೆಯ ದಿನ "ಸಾರ್... ಇವತ್ತು ಏನಾಯ್ತು ಗೊತ್ತಾ...?..." ಲೇಟಪ್ಪ ಬಂದು ತನ್ನ ಕುರ್ಚಿಯ ಮೇಲೆ ಕೂರುತ್ತಾ ನನ್ನ ಕಡೆ ತಿರುಗಿ ಕೇಳಿದ.

"ಏನು...?" ಎಂದು ಪ್ರಶ್ನಿಸುವಂತೆ ಅವನ ಮುಖ ನೋಡಿದೆ.

"ನಿನ್ನೆ ರಾತ್ರಿ ಡೇ ಅಂಡ್ ನೈಟ್ ಕ್ರಿಕೆಟ್ ಮ್ಯಾಚ್ ನೋಡಿ ಮಲಗಿದಾಗ ರಾತ್ರಿ 2 ಗಂಟೆ. ನಿದ್ದೆ ಸಾಲ್ದು ನೋಡಿ... ಬೆಳಿಗ್ಗೆ ಬಸ್ಸಲ್ಲಿ ಬಂದು ಕುಳಿತುಕೊಂಡರೆ ಇನ್ನೂ ಮಂಪರು... ಹಾಗೇ ನಿದ್ದೆ ಬಂದು ಬಿಡ್ತು.. ತಕ್ಷಣ ಎಚ್ಚರವಾಯ್ತು. ನೋಡಿದ್ರೆ ನಾನು ಇಳಿಬೇಕಾಗಿದ್ದ ಸ್ಟಾಪ್ ಆಗಿ ಎರಡು ಸ್ಟಾಪ್ ಮುಂದೆ ಬಂದಿದ್ದೆ. ಅಲ್ಲೇ ಇಳಿದು ಧಡಧಡಾಂತ ಬೇಗ ಬೇಗ ನಡೆದುಕೊಂಡು ಬಂದೆ..."

ನನ್ನ ಕಣ್ಣು ಅವನ ಹೆಲ್ಮೆಟ್ ಹುಡುಕುತ್ತಿತ್ತು. ಆತ ಬುದ್ಧಿವಂತ, ನನ್ನ ನೋಟವನ್ನು ಅರಿತು, "ಸ್ಕೂಟರ್ ತಂದಿಲ್ಲ, ಬಸ್‌ನಲ್ಲಿ ಬಂದೆ" ಎಂದು ವಿಜಯ ಸಾಧಿಸಿದವನಂತೆ ಬೀಗಿದ.

"ಸರಿ ಬಿಡಿ... ರಾತ್ರಿ ನಿದ್ದೆಗೆ ಬಸ್ಸಲ್ಲೇ ಕಾಂಪನ್ಸೇಟ್ ಆಯ್ತು..." ನಾನು ಹೇಳಿದೆ.

"ಎಲ್ಲಿ ಬಂತು. ಹೇಗಿದ್ರೂ ಬಾಸ್ ಟೂರ್‌ನಲ್ಲಿದ್ದಾರೆ... ನಾನು ಈ ಫೈಲ್ ತಗೊಂಡು ಅವರ ರೂಂನಲ್ಲಿ ಇರ್ತೀನಿ. ತುಂಬಾ ಅರ್ಜೆಂಟ್ ಆಗಿ, ಅಂದ್ರೆ ಪ್ರಾಣ ಹೋಗೋ ಸ್ಥಿತಿ ಬಂದ್ರೆ ಎಬ್ಬಿಸಿಬಿಡಿ..." ಎಂದು ಹೇಳಿ ಆಕಳಿಸುತ್ತಾ, ಬಾಸ್ ರೂಂನೊಳಕ್ಕೆ ಹೋದ.

ಹಾಗೆ ನೋಡಿದ್ರೆ ಲೇಟಪ್ಪ ನಿಜಕ್ಕೂ ಅದೃಷ್ಟವಂತ. ದಿನದ ಯಾವುದೇ ವೇಳೆಯಲ್ಲಿ ಬೇಕಾದರೂ ನಿದ್ದೆ ಮಾಡಬಹುದಾದ ವರ ಪಡೆದುಕೊಂಡು ಬಂದಿದ್ದ.

ಲೇಟಪ್ಪನ ನೆಂಟರಿಷ್ಟರ ಹುಟ್ಟು ಸಾವುಗಳನ್ನೆಲ್ಲ ನುಂಗಿ ನೀರು ಕುಡಿದು `ಲೇಟ್' ಕತೆಗಳು ಹಿಗ್ಗುತ್ತಿದ್ದುವು. ಲೇಟಪ್ಪ ಪ್ರತಿದಿನ ಲೇಟಾಗಿ ಬಂದುದಕ್ಕೆ ಕೊಡುತ್ತಿದ್ದ ಕಾರಣಗಳು ನಿತ್ಯನೂತನ. ಕವಿಯ ಮನಸ್ಸಿನಂತೆ ಪ್ರತಿದಿನ ಹೊಸ ಸೃಷ್ಟಿ! ವಿಜ್ಞಾನಿಯಂತೆ ಹೊಸ ಕಾರಣಗಳ ಅವಿಷ್ಕಾರ! ಯಾರಿಗಾದರೂ ಬೇಕಾದರೆ, ನನ್ನ ಬಳಿ, ಆಫೀಸಿಗೆ ಲೇಟಾಗಿ ಬಂದುದಕ್ಕೋ ಅಥವ ರಜೆ ತೆಗೆದುಕೊಳ್ಳಬೇಕಾದರೋ ಕೊಡಬಹುದಾದ ಇನ್ನೂರ ನಲವತ್ತೊಂಬತ್ತು ಸಖತ್ ಕಾರಣಗಳ ಪಟ್ಟಿ ಇದೆ. ಇಷ್ಟರಲ್ಲೇ ಇದಕ್ಕಾಗಿ ವೆಬ್‌ಸೈಟ್ ಮಾಡಿ ಅದರಲ್ಲಿ ಅವುಗಳ ಪಟ್ಟಿ ಕೊಡುತ್ತೇನೆ. ಜೊತೆಗೆ ತೆಗೆದುಕೊಳ್ಳಬೇಕಾದ ಎಚ್ಚರಿಕೆಯನ್ನೂ ನೀಡುತ್ತೇನೆ. ಕಾದು ನೋಡಿ... ಇರಲಿ ಇದಕ್ಕೆ ಮೂಲಪುರುಷ ನಮ್ಮ ಲೇಟಪ್ಪ.

ಆದರೂ ಎಲ್ಲಕ್ಕೂ ಒಂದು ಇತಿಮಿತಿ ಇರುತ್ತೆ ಅಲ್ವೆ. ಹಾಗೆಯೇ ' ಲೇಟಪ್ಪನ ಕಾರಣಗಳು ಯಾವತ್ತಾದರೂ ಮುಗಿದು ಹೋದಾವು' ಎಂದುಕೊಂಡು ಅಂದಿನ ಕಾರಣ ಕೇಳಲು ತವಕದಿಂದ ಕಾಯುತ್ತಿದ್ದೆ. ಶ್ರೀಕೃಷ್ಣನು ಶಿಶುಪಾಲನ ನೂರು ಅಪರಾಧಗಳನ್ನು ಮನ್ನಿಸಿದ ನಂತರ, ಅವನ ಪಾಪದ ಕೊಡ ತುಂಬಿದಾಗ, ಅವನನ್ನು ಶಿಕ್ಷಿಸಿದನಲ್ಲ - ಅವನಿಗೆ ಮೋಕ್ಷ ಕೊಟ್ಟನಲ್ಲ; ಹಾಗೆಯೇ ನಮ್ಮ ಲೇಟಪ್ಪನ 'ಲೇಟ್' ಕಾರಣಗಳ ಕೊಡ ತುಂಬಿ, ಅವನ ಸಮಯ ಪರಿಪಾಲನಾ ಪ್ರಜ್ಞೆ ಜಾಗೃತವಾಗಿ.... “ಪರಮಾತ್ಮಾ ಅಪರಾಧಂಗಳ ಮನ್ನಿಸೋ" ಎಂದುಕೊಂಡು... "ನಾಳೆಯಿಂದ ಸರಿಯಾದ ಟೈಂಗೆ ಬಂದೇ ಬರಬೇಕು..." ಎಂದು ಸ್ವನಿರ್ಧಾರ ತೆಗೆದುಕೊಳ್ಳುವಂತೆ ಆಗೇ ಆಗುತ್ತದೆ... ಇಂದೇ ಆ ಸುದಿನವಾಗಿರುತ್ತದೆ... ಎಂದು ಎದುರು ನೋಡುತ್ತಿದ್ದೆ.

ನಾನು ಈ ಆಫೀಸಿಗೆ ಬಂದು ವರ್ಷವಾಗುತ್ತಾ ಬಂದಿತ್ತು. ಅಂದು ಲೇಟಪ್ಪ ತಾನು ಲೇಟಾಗಿ ಬರಲು ಕಾರಣಗಳನ್ನು ಹೇಳಲು ಪ್ರಾರಂಭಿಸಿದ ನಂತರ ಇನ್ನೂರ ಐವತ್ತನೆಯ ದಿನ...

"ಪ್ರತಿದಿನ ಆಫಿಸ್‌ಗೆ ಬರ್ತೀವಿ... ಇವತ್ತು 'ಜಸ್ಟ್ ಲೈಕ್ ದಟ್',... ಒಂದು ದಿನ ಲೇಟಾಗಿ ಹೋಗೋಣ ಅಂತ ಡಿಸೈಡ್ ಮಾಡ್ಬಿಟ್ಟೆ ಸಾರ್!..." ಲೇಟಪ್ಪ ಅಂದಿನ ಕಾರಣ ಹೇಳಿದಾಗ ನಾನು ಬಿಟ್ಟ ಬಾಯಿ ಬಿಟ್ಟುಕೊಂಡು ಅವನನ್ನೇ ನೋಡುತ್ತಿದ್ದೆ.

ಅಂದೇ ನನ್ನ ಪ್ರತಿಜ್ಞಾ ಭಂಗ ಮಾಡಿದೆ. ಪ್ರಾಯಶ್ಚಿತ ಇನ್ನೂ ಯೋಚಿಸಿಲ್ಲ.

ಒಟ್ಟಿನಲ್ಲಿ ಲೇಟಪ್ಪನದು ಸವೆದ ಪಥದಲ್ಲಿ ಮೂಡುವ ರೆಕಾರ್ಡ್ ಸಂಗೀತವಲ್ಲ... ನಿತ್ಯ ನೂತನ ಸುಪ್ರಭಾತ!

ಅಧ್ಯಕ್ಷರ ಅನಿಸಿಕೆಗಳು

ಎಲ್ಲ ನೋಡುಗರಿಗೂ ನನ್ನ ನಮಸ್ಕಾರಗಳು.
ಇಂದು ನಾವೆಲ್ಲರೂ ವಿಶೇಷವಾದ 184ನೇ ಸಾಹಿತ್ಯ ದಾಸೋಹದಲ್ಲಿ ಭಾಗವಹಿಸುತ್ತಿದ್ದೇವೆ. ಈ ವಾಟ್ಸಪ್ ವೇದಿಕೆ ಪ್ರಾರಂಭವಾಗಿ ಆರು ವರ್ಷಗಳು ತುಂಬಿದ ಸಂದರ್ಭದಲ್ಲಿ, ರಾಜ್ಯೋತ್ಸವದ ತಿಂಗಳಿನಲ್ಲಿ ಈ ವೈವಿಧ್ಯಮಯ ಕಾರ್ಯಕ್ರಮವು ಆಯೋಜನೆಗೊಂಡಿದೆ. ಈ ತಿಂಗಳಿನಲ್ಲಿ ನಮ್ಮ ವೇದಿಕೆಯ ಅನೇಕ ಸದಸ್ಯರಿಗೆ ವಿವಿಧ ಸಾಹಿತ್ಯ ಸ್ಪರ್ಧೆಗಳಲ್ಲಿ ಬಹುಮಾನಗಳು ಬಂದಿವೆ. ಅವರೆಲ್ಲರಿಗೂ ನನ್ನ ಹೃತ್ಪೂರ್ವಕ ಅಭಿನಂದನೆಗಳು. ಅವರಿಗೆ ಬರುವ ದಿನಗಳಲ್ಲಿ ಇನ್ನೂ ಹೆಚ್ಚಿನ ಮನ್ನಣೆಗಳು ಸಿಗಲಿ ಎಂದು ಹಾರೈಸುತ್ತೇನೆ. ಇವು ಇತರ ಸದಸ್ಯರಿಗೂ ಮಾದರಿಯಾಗಿ ಅವರೂ ಮುಂದೆ ಸ್ಪರ್ಧೆಗಳಲ್ಲಿ ಭಾಗವಹಿಸಲಿ ಎಂದು ಹಾರೈಸುತ್ತೇನೆ.
ಇಲ್ಲಿರುವ ಸ್ನೇಹಮಯ ವಾತಾವರಣದಿಂದ, ಪ್ರೋತ್ಸಾಹಿಸುವ ಸ್ನೇಹಿತರಿಂದ, ನಮ್ಮೆಲ್ಲರ ಬರಹಗಳು ಸಾಣೆ ಹಿಡಿದ ವಜ್ರವೂ ವಿಮರ್ಶಾತ್ಮಕ ವಿಶ್ಲೇಷಣೆಗಳಿಂದ ಮೂಸೆಗೊಡ್ಡಿದ ಅಪರಂಜಿಯೂ ಆಗುವುದರಲ್ಲಿ ಸಂಶಯವಿಲ್ಲ.

ಇಂದಿನ ಕಾರ್ಯಕ್ರಮವು ಸರಿಯಾಗಿ ನಾಲ್ಕು ಗಂಟೆಗೆ ಪ್ರಾರಂಭವಾಗಿ ಶ್ರೀ ಕೆ ಎನ್ ಮಹಾಬಲ ಅವರ ಸ್ವಾಗತದ ನಂತರ 24 ಸದಸ್ಯರು ವೈವಿಧ್ಯಮಯ ಸಾಹಿತ್ಯಗಳ ರಸಮಯ ಪ್ರಸ್ತುತಿಗಳನ್ನು ಮಾಡಿದರು.

೧೮೪ನೇ ಸಾಹಿತ್ಯ ದಾಸೋಹದ ಪ್ರಸ್ತುತಿಗಳ ಆಕರ್ಷಕ ಪಿಡಿಎಫ್ ಪ್ರತಿ ಕಾರ್ಯಕ್ರಮದ ನಡುವೆ ಬಿಡುಗಡೆಯಾದದ್ದು ಶ್ಲಾಘನೀಯ.

ಇಂದಿನ ಪ್ರಸ್ತುತಿಗಳ ಬಗ್ಗೆ ನನ್ನ ಅನಿಸಿಕೆಗಳು ಹೀಗಿವೆ:
೧) ಶ್ರೀಮತಿ ರಾಧಿಕಾ ವಿ ಗುಜ್ಜರ್ ಅವರು ತಮ್ಮ *ಅಂತರಂಗದ ಅಲೆಮಾರಿ* ಎಂಬ ಕವನವನ್ನು ವಾಚಿಸಿದರು. ಅದರಲ್ಲಿ 'ದಾರಕಟ್ಟಿ ಉಯ್ಯಾಲೆಯ ಜೀಕಿದರಾಯ್ತು', 'ಹಾರಿ ಹೊರಟ ಕನಸುಗಳ ಪಟಕ್ಕೆ' ಮುಂತಾದ ಪದಗಳ ಜೋಡಣೆ, 'ಅಂತರಂಗದಿ ಬೇಡಗಳ ಶೇಖರಿಸದೇ' ಎಂಬಂತಹ ಮೆಲುಕು ಹಾಕುವ ಸಾಲುಗಳು ಮನಸ್ಸಿಗೆ ತಟ್ಟುತ್ತವೆ. ಅವರು ಒಳ್ಳೆಯ ಕವನಗಳನ್ನು ಬರೆಯುತ್ತಿದ್ದಾರೆ. ಈ ಕವನವನ್ನು ನಿಧಾನವಾಗಿ ಓದಿ ಸಂತೋಷಪಡಬೇಕು; ಅವರ ಕವನವನ್ನು ಮನನ ಮಾಡಿಕೊಳ್ಳಬೇಕು.

೨) ಶ್ರೀಮತಿ ನಾಗರತ್ನಾ ಚಂದ್ರಶೇಖರ್ ಅವರು ಅವರ ನಗೆಲೇಖನ *'ಸಾಹಿತಿ ಬುಕ್ಕಪ್ಪ ಮತ್ತು ಪತ್ನಿ ಶಾನು'.* ರಾಜ್ಯೋತ್ಸವಕ್ಕೆ ಆಹ್ವಾನಿಸಲು ಬಂದಾಗ ಆ ಸಾಹಿತಿಯ ಹಾಗೂ ಅವರ ಮನೆಯ ಪರಿಸ್ಥಿತಿಯನ್ನು ಕಣ್ಣಿಗೆ ಕಟ್ಟುವಂತೆ ವಿವರಿಸಿದರು. ಶಾಲು, ಪ್ಲಾಸ್ಟಿಕ್ ಹಾರ, ಸ್ಮರಣಿಕೆಗಳು ಇವುಗಳಿಗೆ ವ್ಯಯಿಸುವ ಹಣವನ್ನು ಆ ಬಡ ಸಾಹಿತಿಯ ಪುಸ್ತಕಗಳನ್ನು ಕೊಳ್ಳಲು ಉಪಯೋಗಿಸಿದರೆ ಅವರು ಹೊಟ್ಟೆ ಹೊರೆಯಲು ಅನುಕೂಲವಾಗುತ್ತದೆ ಎಂಬ ವಿಚಾರಣೀಯ ಸಲಹೆಯನ್ನು ನಗೆಲೇಪನದೊಂದಿಗೆ ಮುಂದಿಟ್ಟಿದ್ದಾರೆ.

೩) ಶ್ರೀಮತಿ ಜಿ ವಿ ನಿರ್ಮಲ ಅವರು ವೇದಿಕೆಯ ಹಿರಿಯ ಬರಹಗಾರ್ತಿ. ಅವರು ಪ್ರಸ್ತುತಪಡಿಸಿದ ಲೇಖನ *'ಜೀವನ ಕಲೆ'.* ರಜನಿ ಎಂಬ ಉದ್ಯೋಗಸ್ಥ ಮಹಿಳೆಯ ಒಂದು ಮುಂಜಾವಿನಲ್ಲಿ ಉದ್ಯೋಗದ ಒತ್ತಡ, ಅಡುಗೆಮನೆ, ಗಂಡ, ಹಸುಗೂಸು, ತಾಯಿಯ ಮಮತೆ ಇವೆಲ್ಲವನ್ನೂ ಪೋಣಿಸಿ ವಿಶಿಷ್ಟವಾದ ರೀತಿಯಲ್ಲಿ ನಿಭಾಯಿಸಬೇಕಾಗುತ್ತದೆ. ಅದಕ್ಕೆ ಬೇಕಾಗುವ ಜೀವನ ಕಲೆಯನ್ನು ನವಿರಾಗಿ ಬಣ್ಣಿಸಿದ್ದಾರೆ.

೪) ಶ್ರೀ ಡಿ ಬಿ ಪ್ರಾಣೇಶರಾವ್ ಅವರು *ಜೀವನ ಪ್ರಮಾಣಪತ್ರ* ಕ್ಕೆ ಸಂಬಂಧಿಸಿದಂತೆ ಬ್ಯಾಂಕಿನಲ್ಲಿ ನಡೆದ ಪ್ರಸಂಗಗಳನ್ನು ಹಾಸ್ಯಮಯವಾಗಿ ತಿಳಿಸಿದರು. ಬದುಕಿರುವುದು ಅಷ್ಟೇ ಅಲ್ಲ, ಯಾವತ್ತು ಬದುಕಿದ್ದೇವೆ ಎಂಬುದು ಹೇಗೆ ಮುಖ್ಯ ಅನ್ನುವುದು ಚೆನ್ನಾಗಿ ತಿಳಿಸಿಕೊಟ್ಟರು. ಯಮನನ್ನು ಬ್ಯಾಂಕಿನ ಅಧಿಕಾರಿ ಹಾಗೂ ಸರ್ಕಾರದ ಜೊತೆ ಹೋಲಿಸಿದ ರೀತಿ ಚೆನ್ನಾಗಿತ್ತು.

೫) ಶ್ರೀ ಮುರಳಿ ಪತ್ತಂಗಿ ಅವರ ಹಾಸ್ಯ ಲೇಖನ ಕೊರೋನ ಸಂದರ್ಭದ್ದು. ಬಿಟ್ಟಿ ಅಂದರೆ ನನಗೊಂದು, ನನ್ನ ಮನೆಯವರಿಗೊಂದು ಎನ್ನುವ ದಂಪತಿ. ಕುಕ್ಕುಟ ಕುಕ್ಕಿತ ಗಂಡ. ೧೫ ದಿನಗಳ ಸ್ವಾತಂತ್ರ್ಯಕ್ಕೆ ಹಾತೊರೆದು ಋಣಾತ್ಮಕ ಕರೋನ ಪರೀಕ್ಷೆಯನ್ನು ಧನಾತ್ಮಕವಾಗಿ ಪರಿವರ್ತಿಸಿ ಕೊಳ್ಳಲು ಗಂಡನು ಪಟ್ಟಪಾಡು ಇವೆಲ್ಲವೂ ಹಾಸ್ಯ ಪೂರ್ಣವಾಗಿ ಮೂಡಿಬಂದವು.

೬) ಶ್ರೀಮತಿ ರೇಣುಕಾ ದೇಸಾಯಿ ಅವರು *'ನನ್ನಿಷ್ಟದ ಬರಹಗಾರ'* ಈಚೆಗೆ ನಮ್ಮಿಂದ ಮರೆಯಾದ ಪತ್ರಕರ್ತ- ಲೇಖಕನನ್ನು ವಿಶ್ವಾಸಪೂರ್ವಕವಾಗಿ ನೆನೆಸಿಕೊಂಡ ಉತ್ತಮ ಕವನ.

೭) ಶ್ರೀ ಮನೋಹರ ಗೋಖಲೆ ಅವರು ವೇದಿಕೆಯಲ್ಲಿ ಮನಮುಟ್ಟುವ ಕವನಗಳನ್ನು ನೀಡುತ್ತಿರುತ್ತಾರೆ. ಮೈಸೂರು ಬ್ಯಾಂಕ್ ಕನ್ನಡ ಸಂಘವು ಬೆಳೆಸಿದ್ದ ೫೦೦೦ ಪುಸ್ತಕಗಳ ವಿ ಸೀ ಗ್ರಂಥಾಲಯವನ್ನು ಶಿಕ್ಷಣ ಸಂಸ್ಥೆಯೊಂದಕ್ಕೆ ದೇಣಿಗೆ ನೀಡಿದಾಗ ಆದ ತುಡಿತವನ್ನು ಕವನದಲ್ಲಿ ತೋಡಿಕೊಂಡರು. ಅದು ಗ್ರಂಥಾಲಯದ ಕಪಾಟಿನಲ್ಲಿರುವ ಪುಸ್ತಕಗಳ ತುಡಿಯುವ ಜೀವದಂತೆ ಭಾಸವಾಯಿತು.

೮) ಶ್ರೀ ನಾಗೇಶ ವೈದ್ಯರು ಎರಡು ಮಕ್ಕಳ ಕವನಗಳನ್ನು ವಾಚಿಸಿದರು. *'ಮಕ್ಕಳು ಕಲಿಸಿದ ಪಾಠ'*ದಲ್ಲಿ ಶಾಲೆಯ ಮುಂದೆ ಕಸ ಎಸೆಯುವ ಹಿರಿಯರ ಫೋಟೋಗಳನ್ನು ತೆಗೆದು, ಪ್ರದರ್ಶಿಸಿ ಹಿರಿಯರಿಗೆ ನೈರ್ಮಲ್ಯದ, ಸ್ವಚ್ಛತೆಯ ಪಾಠ ಕಲಿಸುವ ಕವನ ಚೆನ್ನಾಗಿದೆ. ಇದನ್ನು ಓದುವ ಇತರ ಮಕ್ಕಳಿಗೆ 'ತಾವು ಏನು ಮಾಡಬಹುದು' ಎಂದು ಸುಲಭವಾಗಿ ತಿಳಿಸುತ್ತದೆ. ಮತ್ತೊಂದು ಕವನ *'ಮಕ್ಕಳ ಲಂಕಾದಹನ'* ದಲ್ಲಿ ಬಾಲ ಕಿತ್ತುಹೋಗಿ ಬಟ್ಟೆಗೆ ಬೆಂಕಿ ಹತ್ತಿಕೊಂಡ ಪ್ರಸಂಗವನ್ನು ಹಾಸ್ಯಮಯವಾಗಿ ಚಿತ್ರಿಸಿದ್ದಾರೆ. ಸಧ್ಯ ಅಷ್ಟಕ್ಕೆ ಮುಗಿಯಿತಲ್ಲಾ ಎಂದುಕೊಳ್ಳುವಷ್ಟರಲ್ಲಿ ಮುಂದಿನ ನಾಟಕ 'ಹನುಮನ ಬಾಲವು ಚಿಗುರಿದ ನಂತರ' ಎಂದು ಹಾಸ್ಯಮಯ ಸುಖಾಂತ್ಯದ ತೆರೆಬೀಳುತ್ತದೆ. ಇವರ ಕವನಗಳು ಆಹ್ಲಾದವನ್ನು ಉಂಟುಮಾಡುತ್ತವೆ.

೯) ಶ್ರೀಮತಿ ರತ್ನಾ ಮೂರ್ತಿ ನಮ್ಮ ವೇದಿಕೆಯ ಹಿರಿಯ ಮಾರ್ಗದರ್ಶಿಗಳಲ್ಲಿ ಒಬ್ಬರು. ಅವರು ಇಂದು ಪ್ರಸ್ತುತ ಪಡಿಸಿದ ಲೇಖನ *'ಆ ಪ್ರಶ್ನೆ'*. ಉಪಾಧ್ಯಾಯರ ವೃತ್ತಿಗೆ ಆವಶ್ಯಕವಾದ 'ನಿರಂತರ ಕಲಿಕೆಯ' ಹಿನ್ನೆಲೆಯನ್ನು ಎತ್ತಿ ತೋರಿಸುವ ಲೇಖನ. ಮುಗ್ಧ ಹುಡುಗಿಯ ಸೂಕ್ಷ್ಮವಾದ ಪ್ರಶ್ನೆಗೆ ಸೂಕ್ತವಾಗಿ ಉತ್ತರಿಸಬೇಕಾಗುತ್ತದೆ. ಅದನ್ನು ಅವರು ನಿರ್ವಹಿಸಲು ಪಟ್ಟ ಪ್ರಯತ್ನ, ಎದುರಿಸಿದ ತಳಮಳಗಳನ್ನು ಹೆಣೆದ ಉತ್ತಮ ಲೇಖನ.

೧೦) ಶ್ರೀ ಶ್ರೀಧರ ಬಾಣಾವರ ಅವರ *'ಮಹಿಳೆಯರಿಗಾಗಿ ಉಳಿತಾಯ ಹಾಗೂ ಹೂಡಿಕೆಗೆ ಸಲಹೆಗಳು'* ಪ್ರಬಂಧ ಇಂದಿನ ಮಹಿಳೆಯರಿಗೆ ಹಣದ ನಿರ್ವಹಣೆಯ ಪ್ರಾಮುಖ್ಯತೆಯನ್ನು ತಿಳಿಸಿಕೊಟ್ಟಿತು. ಹಿಂದಿನ ಸಾಸಿವೆ ಡಬ್ಬದ ಉಳಿತಾಯದಿಂದ ಇಂದಿನ ಅವಶ್ಯಕತೆಯ, ಅವಕಾಶಗಳ ಅಗಾಧತೆಯ ಪರಿಚಯ ಮಾಡಿಸಿತು.ವಿಲ್, ಹೂಡಿಕೆ, ಆಪದ್ಧನ ಮುಂತಾದುವುಗಳ ಬಗ್ಗೆ ತಿಳಿಸಿಕೊಟ್ಟಿತು. ಸಮಯದ ಕಟ್ಟುಪಾಡಿನಿಂದ ಕಿರಿದಾದ ಈ ಲೇಖನದ ವಿಸ್ತೃತ ಪ್ರಸ್ತುತಿಯನ್ನು ಅವರು ವೇದಿಕೆಯಲ್ಲಿ ಮಾಡಲಿ, ಎಲ್ಲ ಮಹಿಳೆಯರು ಅದನ್ನು ಓದಿ ಆಚರಣೆಗೆ ತರಲಿ ಎಂದು ಆಶಿಸುತ್ತೇನೆ.

೧೧) ಶ್ರೀ ವೆಂಕಟೇಶ ಕೆ ಆರ್(ಮನು) ಅವರು *'ಆಧುನಿಕ ರೈತ ಹಾಗೂ ಹಳೆಯ ರೈತ'* ಇವರ ಸಂಭಾಷಣೆಯನ್ನು ಪ್ರಸ್ತುತಪಡಿಸಿದರು. ಅಮೆರಿಕ ಬಿಟ್ಟು ಹಳ್ಳಿಗೆ ಬಂದು ಬೇಸಾಯ ಮಾಡುವ ಆಧುನಿಕ ರೈತ ಯಶವಂತ ಮತ್ತು ಹಳ್ಳಿಯಲ್ಲೇ ಇರುವ ಹಳೆಯ ರೈತ ಇವರ ಮಾತುಕತೆ ಕುತೂಹಲಕಾರಿಯಾಗಿತ್ತು. 'ಕೃಷಿ ಮಾಡಿದ್ರೆ ಖುಷಿ ಸಿಗುತ್ತೆ' ಅನ್ನುವ ಯಶವಂತನ ಸಂತತಿ ಸಾವಿರವಾಗಲಿ!

೧೨) ಶ್ರೀ ವಿಠ್ಠಲ ಇಜೇರಿ ಅವರು ಮೂರ್ಖರ ದಿನ ಪರಸ್ಪರ ಮೂರ್ಖರನ್ನಾಗಿಸಲು ಯೋಜನೆ ಮಾಡುವ ಸಿದ್ದಮ್ಮ - ಸಿದ್ದಣ್ಣ ದಂಪತಿಯ ಹಾಸ್ಯ ಪ್ರಸಂಗ *'ಮಾರ್ಚ್ ೩೧'* ಪ್ರಸ್ತುತಪಡಿಸಿದರು. ಹೆಂಡತಿಯ ವಿಷಪ್ರಾಶನ

ಕುತೂಹಲವನ್ನು ಕೆರಳಿಸಿತು. ಇದನ್ನು ಕೇಳಿದಾಗ ನನಗೆ ಕೋಣವೇಗೌಡನ ಕತೆ ಎಂಬ ಜಾನಪದ ಪ್ರಸಂಗ ನೆನಪಿಗೆ ಬಂತು. ಅಲ್ಲಿ 'ನಾನು ಸತ್ತ ಹಾಗೆ ಮಾಡ್ತೀನಿ ನೀನು ಅತ್ತ ಹಾಗೆ ಮಾಡು' ಎನ್ನುವ ಗಂಡನ ಸಲಹೆಯನ್ನು ಅನುಸರಿಸಿ ದಂಪತಿ ಪೇಚಿಗೆ ಸಿಕ್ಕಿ ಹಾಕಿಕೊಳ್ಳುತ್ತಾರೆ.

೧೩) ಹಿರಿಯ ಖ್ಯಾತ ಸಾಹಿತಿಗಳಾದ ಶ್ರೀ ಎಂ ಎಸ್ ನರಸಿಂಹಮೂರ್ತಿ ಅವರು *'ಆತ್ಮ ಚರಿತ್ರೆ'* ಯ ಪುಟಗಳಿಂದ ಎಂದಾಗ ನಾನು 'ಯಾರ ಆತ್ಮಚರಿತ್ರೆ' ಎಂದು ಕುತೂಹಲಿಯಾದದ್ದು ನಿಜ! ಅವರು ತಮ್ಮ ಬಾಲ್ಯದ ದಿನಗಳಲ್ಲಿ ನಡೆದ ನಂದಗೋಪಾಲನಿಗೆ ಹಾಡು ಕಲಿಸಿದ ಪ್ರಸಂಗ, ಗಡಿಯಾರದ ಮುನ್ನಡೆ, ಕಡಲೇಕಾಯಿ ಪ್ರಸಂಗಗಳು ಕಚಗುಳಿ ಇಟ್ಟವು. ಅವರ ಆತ್ಮಚರಿತ್ರೆಯ ಉಳಿದ ಕಂತುಗಳಿಗೆ ಕಾತರದಿಂದ ಕಾಯುತ್ತಿರುತ್ತೇವೆ.

೧೪) ಶ್ರೀ ಗಣಪತಿ ಹೆಗಡೆ ಅವರ ಕವನ
'ರವಿ - ಚಂದ್ರ' ವಾಚಿಸುವಾಗ 'ಬಂದ ಅರುಣ' ಎಂಬ ಕವನದ ಸಾಲನ್ನು ಕೇಳಿ ನಾನು - ಅರುಣ, ಕಳೆದು ಹೋದೆ! ಸೂರ್ಯೋದಯದಿಂದ ಸೂರ್ಯಾಸ್ತದವರೆಗು, ಅನಂತರ ಚಂದ್ರನು ಹರುಷದಿ ಮೂಡುವ ಸುಂದರ ಚಿತ್ರವನ್ನು ಈ ಕವನದಲ್ಲಿ ಕಟ್ಟಿಕೊಟ್ಟಿದ್ದಾರೆ. ಅವರು ಬಳಸಿದ ಪೊಟ್ಟಣಗಟ್ಟಿ ಪದಪುಂಜ ಕುಮಾರವ್ಯಾಸನನ್ನು ನೆನಪಿಸಿತು. ವೇದಿಕೆಯಲ್ಲಿ ಪುರಾಣದ ಪಾತ್ರಗಳ ಉತ್ತಮ ಪರಿಚಯ ಮಾಡಿಸುತ್ತಿರುವ ಹಿರಿಯರ ಈ ಕವನವನ್ನು ನಿಧಾನವಾಗಿ ಓದಿ ಸವಿಯಬೇಕು.

೧೫) ಶ್ರೀಮತಿ ಮಾಲತಿ ಶ್ರೀನಿವಾಸನ್ ಅವರು ಎರಡು ಕವನಗಳನ್ನು ವಾಚಿಸಿದರು. *'ಸಪ್ತಸ್ವರ'* ಸಂಗೀತದ ಪಾರಿಭಾಷಿಕ ಶಬ್ದಗಳನ್ನು ಉಪಯೋಗಿಸಿಕೊಂಡು ರಚಿಸಿದ, ಎಲ್ಲವೂ ಸರಿಯಾಗಿ ಸೇರಿದರೆ ಅಪಶೃತಿಗೆ ಎಡೆ ಎಲ್ಲಿದೆ ಎಂದು ನಿರೂಪಿಸುವ ಸುಂದರ ಕವನ. ಮತ್ತೊಂದು *'ಅನುಭೂತಿ'.* ಗಿರಿಯ ಮೇಲೆ ಏರಿದಾಗ ಅಲ್ಲಿನ ಸುಂದರ ಪ್ರಕೃತಿಯಲ್ಲಿ ಆದ ಅನುಭೂತಿಯಿಂದ ಹೊರಹೊಮ್ಮಿದ ಚೇತೋಹಾರಿ ಕವನ.

೧೬) ಶ್ರೀ ಎನ್ ಶಂಕರರಾವ್ ಅವರು ನಮ್ಮ ನೋಡಿಯೋ ವೇದಿಕೆಯಲ್ಲಿ ದೀನಬಂಧು ಶ್ರೀರಾಮಾನುಜಂ ನಾಟಕದ ಪಾತ್ರದಿಂದ ರಂಜಿಸಿದ ಮೃದು ಮಾತಿನ ಕವಿ ಹಾಗೂ ಲೇಖಕ. ಇಲ್ಲಿ ಅವರು ಎರಡು ಉತ್ತಮ ಕವನಗಳನ್ನು ವಾಚಿಸಿದರು.
'ಮೋಹಕ ಮುರಳಿ' ಯಲ್ಲಿ ಅವರು ರಾಧಾ ಮಾಧವರ ಅಮರ ಪ್ರೇಮ, ರಾಧೆಯ ಭಾವ ತರಂಗ ಅರಿತ ಶ್ರೀಕೃಷ್ಣನನ್ನು ಚೆನ್ನಾಗಿ ಚಿತ್ರಿಸಿದ್ದಾರೆ. *'ನೇಸರ'* ಒಂದು ಶಿಶುಗೀತೆ. ಇದರಲ್ಲಿ ಸೌರಶಕ್ತಿಯ ಬಗ್ಗೆ ಉಚಿತ ಶಬ್ದಗಳಲ್ಲಿ ಮಕ್ಕಳಿಗೆ ತಿಳಿಯ ಹೇಳುವ ಉತ್ತಮ ಕವನವನ್ನು ಕಟ್ಟಿಕೊಟ್ಟಿದ್ದಾರೆ. ಅವನ್ನು ಮತ್ತೊಮ್ಮೆ ನಿಧಾನವಾಗಿ ಓದಬೇಕು.

೧೭) ಶ್ರೀಮತಿ ಶ್ರವಣಕುಮಾರಿ ಅವರು ನಮ್ಮ ವೇದಿಕೆಯ ಬಹುಶ್ರುತ ಹಿರಿಯ ಲೇಖಕಿ. ಅವರು ಇಂದು ಆರಿಸಿಕೊಂಡಿದ್ದು *'ಸೀತಕ್ಕನ ದರ್ಬಾರ್'* ಎಂಬ ಹಾಸ್ಯ ಲೇಖನ. ಅವರ ಬರವಣಿಗೆ ಹಾಗೂ ಪ್ರಸ್ತುತಿಗಳಿಂದ ಸೀತಕ್ಕನ ದರ್ಬಾರ್ ಕಣ್ಣು ಮುಂದೆ ಕಟ್ಟಿದಂತೆ ಇತ್ತು. ಸೀತಕ್ಕನದು ಗಟ್ಟಿ ಜೀವದ ಗಟ್ಟಿ ಕತೆ.

೧೮) ಡಾ.ಶ್ರೀಲಕ್ಷ್ಮೀ ಶ್ರೀನಿವಾಸನ್ ಅವರ *'ದಿವ್ಯ ಘಳಿಗೆ'* ಒಂದು ವಿಶಿಷ್ಟ ಪ್ರಸ್ತುತಿಯಾಗಿ ಮೂಡಿಬಂತು. ಗಂಗಾವತರಣವಲ್ಲದ 'ಇಳಿದು ಬಾ ತಾಯಿ' ಕವನವನ್ನುಮೊದಲು ಕೇಳಿದಾಗ ಆಗುವ ಸಹಜ ಗೊಂದಲ, ಅದರ ಮೂಲದ ಹುಡುಕಾಟದಲ್ಲಿ ಶ್ರೀ ಕುವೆಂಪು ಅವರ ಅಗ್ನಿಹಂಸದ ಅನಾವರಣ ಇವೆಲ್ಲವನ್ನೂ ರೋಚಕವಾಗಿ ತಿಳಿಸಿಕೊಟ್ಟರು. ಇದನ್ನು ಸುಶ್ರಾವ್ಯವಾಗಿ ಹಾಡಿರುವ ಭಾವಗೀತೆಯಾಗಿ ಕೇಳಿದಾಗ, ಅದು ಅವರ ಮೇಲೆ ಮಾಡಿದ ಪ್ರಭಾವವನ್ನು, ಕವನವನ್ನು ಅವರು ಹೇಗೆ ಅರ್ಥ ಮಾಡಿಕೊಂಡಿದ್ದಾರೆ ಎಂಬುದನ್ನು ಅತ್ಯುತ್ತಮವಾಗಿ

ತಿಳಿಸಿದರು. ಡಾ|| ಲಕ್ಷ್ಮೀ ಅವರೇ, ಇದು ನನಗೂ ಬಹಳ ಇಷ್ಟವಾದ ಭಾವಗೀತೆ; ಅದನ್ನು ಇಂದು ರಾತ್ರಿ ಮತ್ತೆ ಕೇಳಿ ಆನಂದಿಸುತ್ತೇನೆ!

೧೯) ಶ್ರೀ ಎಂ ಜಿ ವೆಂಕಟೇಶಮೂರ್ತಿ ಅವರು ಕರ್ನಾಟಕದ ಪ್ರಸಿದ್ದ ಬ್ಯಾಂಕ್ ಉದ್ಯೋಗಿಗಳ ಜಾತಕವನ್ನು ಬರೆದಿರುವ ವೇದಿಕೆಯ ಸಹೃದಯ ಕಾರ್ಯಕರ್ತರು. ಅವರು ವಾಚಿಸಿದ ಕವನ *'ಸಾಹಿತ್ಯ ದಾಸೋಹಿಗಳಿಗೊಂದು ಕರೆ'.* ನೋಡಿಯೋ ಸಾಹಿತ್ಯ ದಾಸೋಹದಲ್ಲಿ ನಡೆದಿರುವ ಕಾರ್ಯಕ್ರಮಗಳಲ್ಲಿ 'ಏನುಂಟು ಏನಿಲ್ಲ' ಎಂದು ವಿಸ್ತೃತವಾಗಿ ತಿಳಿಸುತ್ತಾ ಬಾರದವರು ಏನನ್ನು ಕಳೆದುಕೊಂಡಿರುವರು ಎಂಬುದನ್ನು ಗುರಿಮುಟ್ಟಿಸುತ್ತಾರೆ. ಮುಂದಿನ ಕಾರ್ಯಕ್ರಮಗಳಿಗೆ ಎಲ್ಲರೂ ಬರಲಿ ಎಂಬುದು ಅವರ ಕಳಕಳಿ. ನೋಡಿಯೋ ಕಾರ್ಯಕ್ರಮಕ್ಕೆ ಬಾರದವರು ಈ ಕವನ ಓದಲಿ ಎಂಬುದು ನನ್ನ ಕಳಕಳಿಯ ಮನವಿ.

೨೦) ಶ್ರೀಮತಿ ಅನ್ನಪೂರ್ಣ ಸೀತಾರಾಮು ಅವರು ಓದಿದ್ದು *'ಉಪಕಾರವೋ ಬಂಧನವೋ'* ಎಂಬ ಕತೆ. ಇದು ನೈಜ ಘಟನೆಯಿಂದ ಪ್ರಭಾವಿತವಾಗಿದ್ದರೆ ಆಶ್ಚರ್ಯವೇನೂ ಇಲ್ಲ. ಮಗುವಿಲ್ಲದ ನಾದಿನಿಗೆ ಮಗುವನ್ನು ಹೆತ್ತು ಕೊಟ್ಟು ಧನ್ಯತೆಯನ್ನು ಮೆರೆಯುವ ಹೆಣ್ಣು ಜೀವ; ಮಗು ಅತ್ತಾಗ ಕರುಳಿನ ಕರೆಗೆ ಕರಗುವ ಮಾತೃ ಹೃದಯ... ಚೆನ್ನಾಗಿ ಚಿತ್ರಿಸಿದ್ದಾರೆ.

೨೧) ಶ್ರೀ ಅನಂತರಾಮು ಅವರು ತಮ್ಮ ಚೊಚ್ಚಲ ಪ್ರಸ್ತುತಿ ಎಂದು ತಮ್ಮ *"ಬಾಲ್ಯದ ನೆನಪು" ತೆರೆದಿಟ್ಟರು. ಊರಿನಲ್ಲಿ ತಮ್ಮ ಬೀದಿಯ ಹುಡುಗರೆಲ್ಲರು ಸೇರಿ ಸಂಭ್ರಮದಿಂದ ಮಾಡಿದ ಕಾಮನ ಹಬ್ಬ ಹಾಗೂ ಹೋಳಿಯ ಆಚರಣೆಗಳನ್ನು ವಿವರವಾಗಿ ತಿಳಿಸಿದರು. ಬೇರೆ ರಸ್ತೆಗಳ ಹುಡುಗರ ಪೈಪೋಟಿ, ಹೆಂಗಸರಿಗೆ ಹಾಗೂ ಬೇಡ ಅಂದವರಿಗೆ ಬಣ್ಣವನ್ನು ಹಚ್ಚದ ಸೌಜನ್ಯ ಮುಂತಾದುವು ನಮ್ಮನ್ನೆಲ್ಲಾ ಅಂದಿನ ದಿನಗಳಿಗೆ ಕರೆದೊಯ್ದಿತ್ತು. ಶ್ರೀ ಅನಂತರಾಮು ಅವರೇ, ನಿಜವಾಗಿ ಇದು ನಿಮ್ಮ ಮೊದಲನೆಯ ಲೇಖನವೇ?!

೨೨) ಶ್ರೀ ಎಚ್ ಎಲ್. ಗುರುಪ್ರಸಾದ್ ಅವರು ವೇದಿಕೆಯಲ್ಲಿ ಪ್ರಾಚಾರ್ಯ ಎಚ್ಚೆಸ್ಕೆ ಅವರ ಸಾಕ್ಷಾತ್ಕಾರ ಮಾಡಿಸುತ್ತಿರುವ ಮಾರ್ಗದರ್ಶಿ ಸಂಚಾಲಕ. ಅವರಿಂದ ನಾನು ಕೆಲವು ಆಪ್‌ಗಳ ಉಪಯೋಗಕ್ಕೆ ಸಲಹೆ ಸೂಚನೆಗಳನ್ನು ಪಡೆದಿದ್ದೇನೆ. ಅವರ ಇಂದಿನ ಸಾಹಿತ್ಯಪರ ಪ್ರಬಂಧ *'ಬೇಂದ್ರೆಯವರ ಕಾವ್ಯ ಭಾಷೆ'*ಯನ್ನು ಕುರಿತದ್ದು. ಈ ವಿಶಿಷ್ಟ ಲೇಖನದಲ್ಲಿ ಬೇಂದ್ರೆಯವರು ಬೇರೆ ಭಾಷೆಯ ಶಬ್ದಗಳಿಗೆ ಕನ್ನಡದ ದೀಕ್ಷೆಯನ್ನು ಹೇಗೆ ಕೊಟ್ಟಿದ್ದಾರೆ, ಅವರ ಶಬ್ದಶ್ಲೇಷೆ, ಗ್ರಾಂಥಿಕ - ಧಾರವಾಡದ ಬೇರೆಬೇರೆ ಸಮುದಾಯದ ಭಾಷೆಗಳನ್ನು ಹೇಗೆ ಬಳಸಿಕೊಂಡಿದ್ದಾರೆ ಎಂಬುವನ್ನು ಉದಾಹರಣೆಗಳ ಸಮೇತ ವಿವರಿಸಿದರು. ಇದು ಬೇಂದ್ರೆಯವರ ಕವನಗಳನ್ನು ಲೇಖಕರು ಆಳವಾಗಿ ಅಭ್ಯಾಸ ಮಾಡಿರುವುದರ ಪರಿಣಾಮ. ಈ ಲೇಖನವನ್ನು ನಾವು ಗಮನವಿಟ್ಟು ಓದಿ ಅನಂತರ ಬೇಂದ್ರೆಯವರ ಕವನಗಳನ್ನು ಗಮನಿಸಬೇಕು.

೨೩) ಶ್ರೀ ಬೆಂ ಶ್ರೀ ರವೀಂದ್ರ ಅವರು ನುರಿತ ಕವಿಗಳು. ಸಾಂದರ್ಭಿಕವಾದ ಸುಂದರ ಕವನಗಳನ್ನು ಬರೆಯುವುದರಲ್ಲಿ ಸಿದ್ಧಹಸ್ತರು. ಮರಡೋನ ಬಗ್ಗೆ ಬರೆದ ಅತ್ಯುತ್ತಮ ಕವನವನ್ನು ಅವರು ಸೂಕ್ತ ಧ್ವನಿಯ ಏರಿಳಿತಗಳ, ಕಾಕುವಿನ ಸಹಾಯದಿಂದ ವಾಚಿಸಿದರು. ಫುಟ್ಬಾಲ್ ಮಾಂತ್ರಿಕನ ಚೆಂಡಾಟ ಕಣ್ಣ ಮುಂದೆ ಪುಟಿಯಿತು; ಅವನ ಚರಿತ್ರೆ ಆಟವಾಡಿತು.

೨೪) ಶ್ರೀ ಕೆ ಎನ್ ಮಹಾಬಲ ಅವರು ಅತ್ಯುತ್ತಮ ಕವಿತೆಗಳನ್ನೂ ಲೇಖನಗಳನ್ನೂ ಬರೆಯುವ ಮೇಧಾವಿ ಬರಹಗಾರರು. ಅವರ ಹಾಸ್ಯ ಲೇಖನಗಳಲ್ಲಿ ಹೊಸತನವಿರುತ್ತದೆ. ಅವರು ಓದಿದ ಹಾಸ್ಯ ಲೇಖನ *"ಪ್ರಕಟವಾದದ್ದನ್ನು ಪ್ರಕಟಗೊಳಿಸುವ ಸಂಕಟ".* ಎಲ್ಲ ಬರಹಗಾರರೂ ಅನುಭವಿಸಿರುವ ಈ ಸಂಕಟವನ್ನು ಹಾಸ್ಯದ ಲೇಪನದೊಂದಿಗೆ ಇಲ್ಲಿ ನೀಡಿದ್ದಾರೆ. ಕ್ಯಾಂಟೀನಿನ ನೋಟಿಸ್ ಬೋರ್ಡ್ ಮೇಲೆ ಅಂಟಿಸಿದ ಕವನ,

ಕವನದ ಝೆರಾಕ್ಸ್ ಪ್ರತಿಗಳ ಮೇಲೆ ರಾರಾಜಿಸಿದ ಮೈಸೂರು ಪಾಕ್, ಚೌಚೌಗಳ ಚಿತ್ರ ಚಿರಕಾಲ ಮನದಲ್ಲಿ ಉಳಿಯುತ್ತವೆ.

ಇಂದಿನ ಎಲ್ಲ ಪ್ರಸ್ತುತಿಕರ್ತರಿಗೂ ನನ್ನ ಅಭಿಮಾನಪೂರ್ವಕ ನಮನಗಳು ನನ್ನನ್ನು ಈ ಸಭೆಯ ಅಧ್ಯಕ್ಷತೆ ವಹಿಸಲು ಕೇಳಿ ಗೌರವಿಸಿದ ಸಂಚಾಲಕ ಸಮಿತಿಯ ಸದಸ್ಯರಿಗೂ ವಿಶೇಷವಾಗಿ ನನ್ನನ್ನು ಪರಿಚಯಿಸಿದ ಶ್ರೀ ಮಹಾಬಲ ಅವರಿಗೂ ನಾನು ಆಭಾರಿಯಾಗಿದ್ದೇನೆ.

ಇಂದಿನ ಕಾರ್ಯಕ್ರಮದ ಬಗ್ಗೆ ನಮ್ಮ ಚೆಂಗನಿಗೆ ತಿಳಿಸಿ, 'ನಿನ್ನ ಹೊಸ ಸಾಧನೆ ಯಾವುದಾದರೂ ಹೇಳಪ್ಪ, ನೋಡಿಯೋದಲ್ಲಿ ನಾನು ಪ್ರಸ್ತುತಪಡಿಸಬೇಕು' ಎಂದೆ. ಅವನು "ಓ...! ಭೋ ಸಂತೋಸ ಸಾ... ನೀವು ಅಧ್ಯಕ್ಸ ಭಾಸ್ಣ ಮಾಡೋದನ್ನ ನಾನು ಯೂಟ್ಯೂಬ್‌ನಾಗೆ ನೋಡ್ತೀನಿ. ಆಗ ನನ್ನ ಬಗ್ಗೆನೇ ನೀವು ಯೋಳಿದ್ರೆ ಏನ್ ಸೆಂದಾಗಿರ್ತದೆ. ನಿಮ್ಮ ಬೇರೆ ಸಿಸ್ಯರ ಇಚಾರ ತಿಳ್ಸಿ. ನಾವೂ ವಸಿ ಕೇಳ್ಕೋಣ" ಅಂದ. ನನಗೂ ಅದು ಸರಿ ಅನ್ನಿಸಿತು. ಹಾಗಾಗಿ ಇಂದಿನ ನನ್ನ ಪ್ರಸ್ತುತಿ 'ಲೇಟಪ್ಪನ ಸುಪ್ರಭಾತ'.

ಜಿ ವಿ ಅರುಣ
(ಕಾರ್ಯಕ್ರಮದ ಅಧ್ಯಕ್ಷರು)

ಸಾಹಿತ್ಯ ದಾಸೋಹ ೧೮೪ - ಪ್ರಸ್ತುತಿಗಳ ಅಂಕಿ ಅಂಶಗಳ ವಿಶ್ಲೇಷಣೆ

ಇಂದು ೨೫ ಸದಸ್ಯ ಲೇಖಕರ ವೈವಿಧ್ಯಮಯ ಪ್ರಸ್ತುತಿಗಳು ನೋಡುಗರನ್ನು ರಂಜಿಸಿದವು. ಈ ಎಲ್ಲ ಪ್ರಸ್ತುತಿಗಳ ಅಂಕಿ ಅಂಶಗಳ ವಿಶ್ಲೇಷಣೆ ಹೀಗಿದೆ:

I}
೯ ಕವನಗಳು (೩೬%);
೭ ಹಾಸ್ಯ ಲೇಖನಗಳು (೨೮%)
೫ ಪ್ರಬಂಧಗಳು (೨೦%)
೨ ಸಾಹಿತ್ಯ ಪರ ಪ್ರಬಂಧಗಳು (೮%)
೧ ಸಂಭಾಷಣೆ. (೪%)
೧ ಕತೆ (೪%)

II}

ಪ್ರಸ್ತುತಿಯಲ್ಲಿ -
ಮಹಿಳೆಯರ ಪಾಲು : ೩೬%
ಪುರುಷರ ಪಾಲು   : ೬೪%

III}

ಒಟ್ಟು ೨ ಗಂ ೪೮ ನಿಮಿಷಗಳು ನಡೆದ ಈ ಸಾಹಿತ್ಯ ದಾಸೋಹದಲ್ಲಿ
ಅ) ಪ್ರಸ್ತಾವನೆ, ಸ್ವಾಗತ, ಪುಸ್ತಕ ಬಿಡುಗಡೆ ಹಾಗೂ ವಂದನಾರ್ಪಣೆ ಇವುಗಳಿಗೆ ಕೇವಲ ೧೧ನಿಮಿಷಗಳು
ಆ) ಅಧ್ಯಕ್ಷ ಭಾಷಣಕ್ಕೆ ೧೩ ನಿಮಿಷಗಳು
ಇ) ೨೫ ಸದಸ್ಯರ ಪ್ರಸ್ತುತಿಗೆ ೧೪೪ ನಿಮಿಷಗಳು (ನನ್ನ ಪ್ರಸ್ತುತಿಯನ್ನೂ ಸೇರಿಸಿ) - ಅಂದರೆ ಪ್ರತಿ ಪ್ರಸ್ತುತಿಗೆ ಸರಾಸರಿ ೫ನಿ ೪೫ಸೆಕೆಂಡುಗಳು!

ಕಟ್ಟುನಿಟ್ಟಾಗಿ ಸಮಯ ಪರಿಪಾಲನೆ ಮಾಡಿದ್ದಕ್ಕಾಗಿ ಸಂಚಾಲಕರಿಗೆ ಶಭಾಷ್ ಹೇಳುತ್ತಾ ನಮ್ಮ ಬೆನ್ನನ್ನು ನಾವೆ ತಟ್ಟಿಕೊಳ್ಳೋಣ!

ಜಿ ವಿ ಅರುಣ
(ಕಾರ್ಯಕ್ರಮದ ಅಧ್ಯಕ್ಷರು)

ಕಾರ್ಯಕ್ರಮದ ಬಗೆಗೆ ಸದಸ್ಯರ ಅನಿಸಿಕೆಗಳು

ಇಂದಿನ ಸಾಹಿತ್ಯ ದಾಸೋಹ ವೈವಿಧ್ಯಮಯವಾಗಿತ್ತು. ಸುಮಾರು ಎರಡೂ ಮುಕ್ಕಾಲು ಗಂಟೆಗಳ ಸಮಯ ಸರಿದಿದ್ದೇ ಗೊತ್ತಾಗಲಿಲ್ಲ. ಇದಿಷ್ಟೇ ಅಲ್ಲದೇ ಅಧ್ಯಕ್ಷತೆ ವಹಿಸಿದ್ದ ಶ್ರೀಯುತ ಜಿ ವಿ ಅರುಣ ಅವರ ಅರುಣ ಪ್ರತಿಭೆ, ಅತಿ ಕಡಿಮೆ ಸಮಯದ ಅವಕಾಶದಲ್ಲಿ ತಮ್ಮ ಕಾರ್ಯಕ್ಷಮತೆ ಏನು, ಎಷ್ಟು ಎಂಬುದನ್ನು ಅಧ್ಯಕ್ಷೀಯ ನುಡಿಗಳಲ್ಲಿ ಪ್ರತಿ ಪ್ರಸ್ತುತಿಯನ್ನೂ ಸಾದ್ಯಂತವಾಗಿ ಗಮನಿಸಿಕೊಂಡು, ವಿಶ್ಲೇಷಿಸಿ ಎಲ್ಲ ಪ್ರಸ್ತುತಿಕಾರರನ್ನೂ ಉತ್ತೇಜಿಸಿದ್ದು, ರವಿ (ಅರುಣ) ಎಲ್ಲವನ್ನೂ ಸೂಕ್ಷ್ಮವಾಗಿ ಅವಲೋಕಿಸುತ್ತಾನೆಂಬುದನ್ನು ಸಾಬೀತುಪಡಿಸಿದ್ದಾರೆ.
ಸಂಚಾಲಕರಾದ ಶ್ರೀ ರವೀಂದ್ರರವರಿಂದ ಸಮಯಪಾಲನೆಯ ಬಗ್ಗೆ ಮತ್ತು ತಾಂತ್ರಿಕರುಗಳಾದ ಶ್ರೀ ಗುರುಪ್ರಸಾದ್ ಮತ್ತು ಶ್ರೀ ಗುರುರಾಜ ಶಾಸ್ತ್ರಿ ಯವರುಗಳ ಬಗ್ಗೆ ಎರಡು
ಮಾತಿಲ್ಲ. ಇವರೆಲ್ಲರುಗಳ ಸಹಕಾರವನ್ನು ಸ್ಮರಿಸಲೇ ಬೇಕು. ಇನ್ನು ಪ್ರಸ್ತುತಿಕಾರರು ಮತ್ತು ಕೇಳುಗರದು, ಇವರುಗಳಿಂದ ಕಾರ್ಯಕ್ರಮಗಳಿಗೆ ಮಧ್ಯದಲ್ಲಿ ಮುಂಚಿನಷ್ಟು ತೊಂದರೆಯಾಗುತ್ತಿಲ್ಲವಾದರೂ, ತೊಂದರೆ ನಿಂತಿಲ್ಲವೆಂಬುದು ಮಾತ್ರ ನಿಜ.

ಅನಂತರಾಮು, ದಾವಣಗೆರೆ

ಇವತ್ತಿನ ಸಾಹಿತ್ಯ ದಾಸೋಹ ವೈವಿಧ್ಯಮಯ ಪ್ರಸ್ತುತಿಗಳಿಂದ ಕಡೆಯವರೆಗೂ ಆಸಕ್ತಿದಾಯಕವಾಗಿ ಮೂಡಿಬಂತು. ಎಲ್ಲದಕ್ಕೂ ಮುಕುಟವಿಟ್ಟಂತೆ ಅಧ್ಯಕ್ಷ ಸ್ಥಾನದಿಂದ ಶ್ರೀ ಜಿ. ವಿ ಅರುಣ ಅವರು ಬಹಳ ಸಹೃದಯತೆಯಿಂದ ಪ್ರತಿಯೊಬ್ಬರ ಪ್ರಸ್ತುತಿಗಳನ್ನೂ ವಿಶ್ಲೇಷಿಸಿ ಬೆನ್ನು ತಟ್ಟಿದ್ದು.
ಚೆಂಗ ಬಹಳ ವಿವೇಕದಿಂದ ಇವತ್ತಿನ ಮಟ್ಟಿಗೆ ಹಿನ್ನೆಲೆಗೆ ಸರಿದಿದ್ದರಿಂದ ನಮಗೆ ಲೇಟಪ್ಪನ ಪರಿಚಯವಾಯಿತು. ಲೇಟಪ್ಪನಿಗೆ ಲೇಟಪ್ಪನೇ ಸಾಟಿ.🤪🤪

.,

ನಿಖರವಾದ ಸಮಯ ಪರಿಪಾಲನೆ ಮತ್ತು ಉತ್ತಮ ತಾಂತ್ರಿಕ ನಿರ್ವಹಣೆಯಿಂದ ಕಾರ್ಯಕ್ರಮಕ್ಕೆ ಹೆಚ್ಚಿನ ಮೆರುಗು ತಂದ ಶ್ರೀ ರವೀಂದ್ರ ಗುರುಪ್ರಸಾದ್, ಗುರುರಾಜ ಶಾಸ್ತ್ರಿ ಅವರುಗಳ ಉತ್ಸಾಹ, ಬದ್ಧತೆ ಶ್ಲಾಘನೀಯ ಮತ್ತು ಅಭಿನಂದನಾರ್ಹ.

ಶ್ರೀಮತಿ ರತ್ನಾ ಮೂರ್ತಿ

ಅಧ್ಯಕ್ಷರ ನುಡಿ ಚೆನ್ನಾಗಿತ್ತು. ಪ್ರತಿಯೊಬ್ಬರ ಪ್ರಸ್ತುತಿ ಕೇಳಿ ಮೆಚ್ಚಿ ಹುರಿದುಂಬಿಸಿದ್ದಾರೆ. ಎಷ್ಟೋ ಮಂದಿ ಮಾತಾಡಿದ್ದನ್ನು ಸಂಕ್ಷೇಪವಾಗಿ ವಿಮರ್ಶಿಸುವುದು ಸುಲಭದ ಮಾತಲ್ಲ. ಪ್ರತಿಯೊಬ್ಬರಿಗೂ ಅವರ ತಮ್ಮ ಪ್ರಸ್ತುತಿ ಬಗ್ಗೆ ಹೆಮ್ಮೆ ಇರುತ್ತದೆ.
ಅಲ್ಲಿ ಕಂಡ ಮುಖ್ಯ ಸಂಗತಿ ಸನ್ನಿವೇಶ ಕಡಿಮೆ ಪದಗಳಲ್ಲಿ ಕಟ್ಟಿ ಕೊಡುವುದು ಸವಾಲಿನ ವಿಷಯ.
ಅವರ ಲಘು ಲೇಖನವೂ ಸೂಪರ್!

ನರಸಿಂಹಮೂರ್ತಿ ಎಮ್ ಎಸ್